ಸುದರ್ಶನ ದೇಸಾಯಿ



894·814 3
DES N89
ಗ್ರಂಥ ಸ್ವಾಮ್ಯ ವಿಭಾಗ

ಹದಿನೇಳನೆಯ ಪ್ರಕಟನೆ:

# ವಿಚಿತ್ರ ಅಪರಾಧಿ

( ಕಾದಂಬರಿ )

ಸುದರ್ಶನ ದೇಸಾಯಿ

**ಸಾಹಿತ್ಯ ಪ್ರಕಾಶನ**

ಸಿಟಿ ಕ್ಲಿನಿಕ್ ಸಂಕೀರ್ಣ; ದಾಜೀಬಾನ್ ಪೇಟೆ

**ಹುಬ್ಬಳ್ಳಿ: ೫೮೦ ೦೨೮**

ಸಾಹಿತ್ಯ ಪ್ರಕಾಶನ
ಸಿಟಿ ಕ್ಲಿನಿಕ್ ಸಂಕೀರ್ಣ; ದಾಜೀಬಾನ್ ಪೇಟೆ
ಹುಬ್ಬಳ್ಳಿ: ೫೮೦ ೦೨೮

ಸಂಪಾದನ-ಪ್ರಕಾಶನ:
ಎಂ. ಎ ಸುಬ್ರಹ್ಮಣ್ಯ

43126CR

ವಿಮರ್ಶೆ—ಮಾರ್ಗದರ್ಶನ:
ಸರ್ವಶ್ರೀ ಮಲ್ಲೇಪುರಂ ಜಿ. ವೆಂಕಟೇಶ, ಬೆಂಗಳೂರು
,, ಜಿ. ಜ್ಞಾನಾನಂದ, ಕೆ.ಜಿ ಎಫ್.
,, ಎಂ. ಪದ್ಮನಾಭಯ್ಯ, ಧಾರವಾಡ

VICHITRA APARAADHI A fiction in Kannada by Sudarshan Desai, Dharwad; Published by Sahitya Prakashana, City Clinic Complex, Dajibanpet, Hubli-580 028
ಹಕ್ಕುಗಳು: ಶ್ರೀಮತಿ ಸುಜಾತಾ ದೇಸಾಯಿ
ಸುಂದರ ಮುದ್ರಣ : ೧೯೮೯ ಪುಟಗಳು IV + 96 ಬೆಲೆ 12-00
ಮುದ್ರಣ ಶ್ರೀ ರೇಣುಕಾ ಪವರ್ ಪ್ರಿಂಟಿಂಗ್ ಪ್ರೆಸ್, ಹುಬ್ಬಳ್ಳಿ.

## ಕೃತಜ್ಞತೆಗಳು

* ಬೆಂಗಳೂರಿನ ಸಂಯುಕ್ತ ಕರ್ನಾಟಕದಲ್ಲಿ ಈ ಕಾದಂಬರಿಯನ್ನು ದೈನಿಕ ಧಾರಾವಾಹಿಯಾಗಿ ಪ್ರಕಟಿಸಿದ ಸಂಪಾದಕರಿಗೆ
* ಮಿತ್ರ ಶ್ರೀ ಶ್ಯಾಮಸುಂದರ ಕುಲಕರ್ಣಿಯವರಿಗೆ
* ಸಾಹಿತ್ಯ ಪ್ರಕಾಶನದಲ್ಲಿ ಪ್ರಕಟಿಸುತ್ತಿರುವ ಮಿತ್ರ ಶ್ರೀ ಸುಬ್ರಹ್ಮಣ್ಯ ಅವರಿಗೆ
* ಮುದ ಕೊಟ್ಟು ಓದಿ ಪ್ರೋತ್ಸಾಹಿಸುವ ಓದುಗರಿಗೆ

**ಸುದರ್ಶನ ದೇಸಾಯಿ**
ಧಾರವಾಡ

## ಅರ್ಪಣೆ

ಪತ್ತೇದಾರಿ ಕಾದಂಬರಿಗೆ

ಹೊಸ ಆಯಾಮ ನೀಡಿದ

ಟಿ. ಎಂ. ರಾಮಮೂರ್ತಿ ಅವರಿಗೆ

—ಸುದರ್ಶನ ದೇಸಾಯಿ

## 1. ನೀವು ನನ್ನನ್ನು ಕೊಲ್ಲಬೇಕೆ?

ಝುಂಣ್...ಝುಂಣ್...ಣ್...ಣ್...

ಪರಸಿಯ ಕಲ್ಲಿನ ಮೇಲೆ ಪಾತ್ರೆಯೊಂದು ಬಿದ್ದ ಸಪ್ಪಳ. ಶಾಂತಿಗೆ ಥಕ್‌ನೆ ಎಚ್ಚರವಾಯಿತು. ಕಣ್ತೆರೆಯುವ ಮುನ್ನವೇ ಟೀಪಾಯ್ ಮೇಲಿದ್ದ ಹಾಲಿನ ಲೋಟವನ್ನು ಹಾಳು ಬೆಕ್ಕು ಕೆಳಕ್ಕೆ ತಳ್ಳಿರಬೇಕು ಎಂದುಕೊಳ್ಳುತ್ತ ಆಕೆ ಕಣ್ತೆರೆದಾಗ ಜೀವ ಬಾಯಿಗೆ ಬಂದಂತಾಯಿತು. ಚೀರಬೇಕೆಂದರೆ ಧ್ವನಿ ಸಿಕ್ಕಿ ಹಾಕಿಕೊಂಡು ಗರ್ ಗರ್ ಶಬ್ದ ಮಾಡಿತೇ ವಿನಾ ಹೊರಗೆ ಬರಲಿಲ್ಲ. ಕಣ್ಣುಗಳು ಭಯದಿಂದ ಮತ್ತಷ್ಟು ದೊಡ್ಡವಾದವು. ದೃಷ್ಟಿ ಮಂಚದಿಂದ ಕೇವಲ ಏಳೆಂಟು ಅಡಿ ದೂರದಲ್ಲಿ ನಿಂತಿದ್ದ ಪ್ರೊಫೆಸರರ ಮೇಲೆ ನೆಟ್ಟಿತ್ತು. ಅವಳ ಪತಿ ಪ್ರೊಫೆಸರ್ ಸತ್ಯೇಂದ್ರ ಯಾವಾಗ ತನ್ನ ಮಗ್ಗುಲಿಂದ ಮೇಲೆದ್ದರೋ ಅವಳಿಗೆ ತಿಳಿಯದು. ಸತ್ಯೇಂದ್ರ ನಿಧಾನವಾಗಿ, ಒಂದೊಂದೇ ಹೆಜ್ಜೆಯನ್ನಿಡುತ್ತ ಅವಳನ್ನು ಸಮೀಪಿಸುತ್ತಿದ್ದರು. ಅವರ ಕಣ್ಣುಗಳು ತೆರೆದುಕೊಂಡಿದ್ದರೂ ಅವರು ಕಣ್ಣು ಮಿಟುಕಿಸದೆ ಶಾಂತಿಯನ್ನೇ ದಿಟ್ಟಿಸುತ್ತ ಬರುತ್ತಿದ್ದರು. ತೊಟ್ಟುಕೊಂಡಿದ್ದ ಸ್ಲೀಟ್‌ಗೌನಿನ ಎಡ ಜೇಬಿನಲ್ಲಿ ಒಂದು ಕೈ ಬಿಟ್ಟಿದ್ದಾರೆ.

ಬಲಗೈಯಲ್ಲಿ ಮೂರು ಇಂಚು ಅಲಗು ಇದ್ದ ಸುಮಾರು ಒಂಭತ್ತು ಇಂಚಿನ ಸ್ಟೀಲ್ ಚೂರಿಯೊಂದಿದ್ದು, ಬೆಡ್‌ಲ್ಯಾಂಪಿನ ಆ ಮಂದ ಬೆಳಕಿನಲ್ಲಿಯೂ ಅಲಗು ಥಳಥಳ ಹೊಳೆದು ಕಣ್ಣು ಕೋರೈಸುತ್ತಿತ್ತು. ತಾಳಿ ಕಟ್ಟಿದ ಪತಿ ಈಗ ಅವಳ ಪಾಲಿಗೆ ಯಮದೂತನಾಗಿದ್ದ.

ಪ್ರೊಫೆಸರ್ ಶಾಂತಿ ಮಲಗಿದ ಮಂಚದ ತೀರ ಹತ್ತಿರಕ್ಕೆ ಬಂದಾಗ ಶಾಂತಿ ಅಳಿದುಳಿದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಕೇಳಿದಳು, "ಡಿಯರ್ ಇದೇನು...?" ಅವಳ ಧ್ವನಿ ಕಂಪಿಸುತ್ತಿತ್ತು.

"ನಿನ್ನನ್ನು ನಾನು ಕೊಲ್ಲಬೇಕು ಡಾರ್ಲಿಂಗ್..."

"ನೀವು ನನ್ನನ್ನು ಕೊಲ್ಲಬೇಕೆ?"

"ಹೌದು."

"ಏಕೆ?"

"ನೀನು ಕುಲಟೆ ನನಗೆ ಮೋಸ ಮಾಡುತ್ತಿರುವೆ ಅದಕ್ಕೆ."

ಪ್ರೊಫೆಸರರ ಮುಖದಿಂದ ಬಂದ ಸ್ಪಷ್ಟವಾದ ಮಾತು ಕೇಳಿ ಆಕೆ ದಂಗಾದಳು. ಅವರ ತುಟಿಗಳು ಅಲಗುತ್ತಿದ್ದರೂ ದೃಷ್ಟಿ ಸ್ಥಿರವಾಗಿತ್ತು. ರೆಪ್ಪೆ ಸಹ ಬಡಿಯುತ್ತಿರಲಿಲ್ಲ. ಅದೇ ಎರಡು ಮೂರು ಗಂಟೆ ಮೊದಲು ಅಂದರೆ ಮಲಗುವ ಮುನ್ನ ಶಾಂತಿಯನ್ನು ತಬ್ಬಿಕೊಂಡು ಚುಂಬಿಸಿ, "ಶಾಂತಿ, ನೀನೇ ನನ್ನ ಬಾಳಿನ ಬೆಳಕು...ನೀನಿಲ್ಲದಿದ್ದರೆ ನನ್ನ ಬಾಳು ಕತ್ತಲುಮಯ" ಎಂದಿದ್ದರು. ಮನಸ್ಸಿಗೆ ತೃಪ್ತಿಯಾಗುವ ತನಕ ಪ್ರೀತಿಸಿದ್ದರು.

ಅದೇ ಪ್ರೊಫೆಸರ್ ಈಗ "ನೀನು ಕುಲಟೆ" ಎಂದರೆ ಹೇಗಾಗಬೇಡ. "ನೀವು ಹೇಳುತ್ತಿರುವುದು ಪೂರ್ತಿ ಸುಳ್ಳು" ಎಂದು ಹೇಳಬೇಕೆಂದು ಬಾಯಿ ತೆರೆದಾಗಲೇ ಪ್ರೊಫೆಸರ್ ಬಲಗೈ ಎತ್ತಿ ಚೂರಿಯಿಂದ ಅವಳ ಮೇಲೆ ಪ್ರಹಾರ ಮಾಡಿದರು. ಶಾಂತಿ ಮಿಂಚಿನಂತೆ ಪಕ್ಕಕ್ಕೆ ಹೊರಳಿ ಮಂಚದಿಂದ ಕೆಳಕ್ಕೆ ಉರುಳಿದಳು.

"ಖಚ್" ಎಂದು ಚೂರಿ ಫೋಂ ಗಾದಿಯಲ್ಲಿ ನೆಟ್ಟಿತು.

"ನೀನು ಸಾಯಬೇಕು...ನೀನು ಕುಲಟೆ ನಿನ್ನನ್ನು ನಾ ಕೊಲ್ಲಬೇಕು" ಎನ್ನುತ್ತಾ ಪ್ರೊಫೆಸರ್ ನೆಟ್ಟಿದ್ದ ಚೂರಿಯನ್ನು ಮೇಲೆತ್ತಿ ಪುನಃ ಪುನಃ ಗಾದಿಯ ಮೇಲೆ ಪ್ರಹಾರ ಮಾಡತೊಡಗಿದರು.

ಪರಸಿಯ ಮೇಲೆ ಉರುಳಿದ್ದರಿಂದ ಶಾಂತಿಗೆ ಸ್ವಲ್ಪ ಪೆಟ್ಟು ತಗುಲಿತ್ತು, ಆ ಕಡೆಗೆ ಆಕೆ ಲಕ್ಷ್ಯ ಕೊಡದೆ ಮೆಲ್ಲನೆ ಪತಿಯೆಡೆ ಹೆಜ್ಜೆ ಹಾಕಿದಳು.

ಪ್ರೊಫೆಸರ್ ಈಗ ಶಾಂತವಾಗಿದ್ದರು. ಗಾದಿಯಲ್ಲಿ ಆಳವಾಗಿ ಊರಿ ಹೋಗಿದ್ದ ಚೂರಿಯ ಹಿಡಿಕೆಯನ್ನೇ ದಿಟ್ಟಿಸುತ್ತ ಅವರು ಅಸ್ಪಷ್ಟವಾಗಿ ಬಡಬಡಿಸುತ್ತಿದ್ದರು; "ಶಾಂತಿ...ನಿನ್ನನ್ನು ನಾನು ಕೊಂದುಬಿಟ್ಟೆ...ಕೊಂದುಬಿಟ್ಟೆ."

"ಇಲ್ಲ ಡಿಯರ್...ನೀವು ನನ್ನನ್ನು ಕೊಲ್ಲಲಿಲ್ಲ" ಸರಕ್‌ನೆ ಪ್ರೊಫೆಸರ್ ಶಾಂತಿಯ ಕಡೆ ಹೊರಳಿದರು. ಅವರೀಗ ಒಂದು ನಿಮಿಷದ ಹಿಂದಿನ ವ್ಯಕ್ತಿ ಆಗಿರಲಿಲ್ಲ, ಅವರು ರೆಪ್ಪೆ ಬಡಿಯುತ್ತಿದ್ದರು, ಮುಖದ ಮೇಲೆ ಮೊದಲಿನ ಉಗ್ರ ಕಳೆಯಿರದೆ ಶಾಂತಿಯಿತ್ತು. ತಮ್ಮನ್ನು ತಾವೇ ನಂಬದಂತೆ ಅವರು

ಶಾಂತಿಯೆಡೆ ದಿಟ್ಟಿಸಿ ನೋಡಿದರು, ಮರುಕ್ಷಣ ಅವರ ಕಣ್ಣುಗಳಲ್ಲಿ ಕಣ್ಣೀರಿನ ಕಾರಂಜಿ ಚಿಮ್ಮಿತು. ಶಾಂತಿಯನ್ನು ತಬ್ಬಿಕೊಂಡು "ಶಾಂತಿ ನನ್ನನ್ನು ಕ್ಷಮಿಸು ನಾನು ಮಹಾ ಪಾಪಿ ... ಮಹಾಪಾಪಿ" ಎನ್ನುತ್ತ ಚಿಕ್ಕ ಮಕ್ಕಳಂತೆ ಅಳಲಾರಂಭಿಸಿದರು. ಅವರನ್ನು ಸಮಾಧಾನಪಡಿಸಲು ಶಾಂತಿ ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಪ್ರೊಫೆಸರ್ ಅದೇ ರೀತಿ ರೋದಿಸುತ್ತ ಗಾದಿಯ ಮೇಲೆ ಉರುಳಿದರು, ಮರುಕ್ಷಣ ಗೊರಕೆ ಕೇಳಿ ಬರಲಾರಂಭಿಸಿತು. ಅವರು ಧೀರ್ಘ ನಿದ್ದೆಯ ಮಡಿಲಲ್ಲಿ ಹಾಯಾಗಿ ಮಲಗಿಕೊಂಡರು. ತನ್ನ ಮಡಿಲಲ್ಲಿ ಹಸುಗೂಸಿನಂತೆ ನಿದ್ರಿಸುತ್ತಿರುವ ಅವರನ್ನು ಒಂದು ಕ್ಷಣ ದಿಟ್ಟಿಸಿದ ಶಾಂತಿ ಧೀರ್ಘವಾದ ಉಸಿರು ಬಿಟ್ಟು ಮೇಲೆದ್ದಳು. ಅವರನ್ನು ಹಾಸಿಗೆಯ ಮೇಲೆ ಮಲಗಿಸಿ ಕುತ್ತಿಗೆಯ ವರೆಗೂ ಬ್ಲಾಂಕೆಟ್ ಹೊದಿಸಿ ಅಡಿಗೆ ಮನೆಯತ್ತ ಹೆಜ್ಜೆ ಹಾಕಿದಳು. ಸ್ಟೊವ್ ಹೊತ್ತಿಸಿ ಕಾಫಿಗೆ ನೀರಿಟ್ಟು ಬಾತ್‌ರೂಮಿಗೆ ಹೋಗಿ ಬರುವಷ್ಟರಲ್ಲಿ ನೀರು ಕುದಿಯುತ್ತಿತ್ತು. ಸಕ್ಕರೆ ಹಾಕಿ ನೀರಿಗೆ ಕಾಫಿ ಪುಡಿ ಬೆರೆಸಿ ಸ್ಟೊವ್ ಆರಿಸಿದಳು.

ತಲೆ ಚಟಿಚಿಟಿ ಹೊಡೆಯುತ್ತಿತ್ತು. ಬೀರುವಿನಿಂದ ಒಂದು ಮಾತ್ರೆ ತೆಗೆದುಕೊಂಡು ಬಾಯಿಗೆ ಎಸೆದುಕೊಂಡಳು. ಮೇಲೆ ಒಂದು ಕಪ್ ಬಿಸಿಬಿಸಿ ಕಾಫಿ ಕುಡಿದಾಗ ಸ್ವಲ್ಪ ಹಾಯೆನಿಸಿತು. ಪುನಃ ತನ್ನ ಬೆಡ್ ರೂಮಿಗೆ ಬಂದಾಗ ಹಜಾರದಲ್ಲಿದ್ದ ಗಡಿಯಾರ ಎರಡು ಬಾರಿಸಿ ಮೌನ ತಾಳಿತು.

ಕುರ್ಚಿಯ ಮೇಲೆ ಕುಳಿತುಕೊಂಡು ಸ್ವಲ್ಪ ಹೊತ್ತು ಯೋಚಿಸಿದ ಶಾಂತಿ ನಂತರ ದೃಢ ನಿರ್ಧಾರ ತೆಗೆದುಕೊಂಡು ಫೋನು ಇದ್ದ ಮೇಜಿನ ಬಳಿ ಸರಿದಳು. ಟೆಲಿಫೋನ್ ಡೈರೆಕ್ಟರಿಯಿಂದ ತನಗೆ ಬೇಕಾದ ನಂಬರನ್ನು ಗುರುತಿಸಿ, ಡಯಲ್ ಮಾಡಿದಳು. ಆ ಕಡೆಯಿಂದ ಗಂಟೆ ಬಾರಿಸುತ್ತಿದ್ದ ಸದ್ದು ಆಕೆಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಬಹುಷಃ ಅವರೆಲ್ಲರೂ ಮಲಗಿರಬೇಕು ಬೇಗ ಫೋನು ಎತ್ತಲಿಲ್ಲ.

ಶಾಂತಿ ಅಧೀರಳಾಗಲಿಲ್ಲ. ಆ ಕಡೆಯಿಂದ ಫೋನು ಎತ್ತುವ ವರೆಗೂ ರಿಸೀವರನ್ನು ಕಿವಿಗೆ ಆನಿಸಿಕೊಂಡೇ ನಿಂತಿದ್ದಳು, ಅಂತೂ ಕೊನೆಗೊಮ್ಮೆ ಪ್ರತೀಕ್ಷೆಯ ಕ್ಷಣಗಳು ಮುಗಿದವು. ಆ ಕಡೆಯಿಂದ ಫೋನು ಎತ್ತಿದ ಸದ್ದು, ಅದರ ಹಿಂದೆ ಮಂಜುಳವಾದ ಧ್ವನಿ. "ಹಲೊ...ಸುಷಮಾ ಸ್ಪೀಕಿಂಗ್."

"ಹಲೊ, ಮೇಜರ್ ಹೇಮಂತ ಇದ್ದಾರೆಯೇ?"

"ಇದ್ದಾರೆ...ಆದರೆ ಅವರು ನಿದ್ರಿಸುತ್ತಿದ್ದಾರೆ"

"ಪ್ಲೀಸ್ ಅವರನ್ನು ಎಚ್ಚರಗೊಳಿಸಿ, ನಾನು ಅವರೊಡನೆ ಸ್ವಲ್ಪ ಅರ್ಜಂಟಾಗಿ ಮಾತನಾಡಬೇಕಾಗಿದೆ."

"ಮೇಡಮ್—ನಾಳೆ ಬೆಳಿಗ್ಗೆ ಮಾತನಾಡಿದರೆ ಆಗದೆ?"

"ಸಾರಿ ಸುಷಮಾ ನಾನು ಈಗಲೇ ಮಾತನಾಡಬೇಕು. ದಯವಿಟ್ಟು ಅವರನ್ನು ಎಬ್ಬಿಸಿ. ಒಂದು ಜೀವದ ಅಳಿವು ಉಳಿವಿನ ಪ್ರಶ್ನೆ ಇದೆ."

"ಓಕೆ. ಓಕೆ ಲೈನ ಮೇಲಿರಿ."

ನಿರ್ವಾಹವಿಲ್ಲದೆ ಸುಷಮಾ ರಿಸೀವರ್ ಕೆಳಗಿರಿಸಿ, ಹೇಮಂತನ ಬಳಿ ಬಂದು ಮೆಲುವಾಗಿ ತಟ್ಟಿ ಅವನನ್ನು ಎಬ್ಬಿಸಿದಳು. ಆತನಿಗೂ ಅಚ್ಚರಿ. ಮಧ್ಯ ರಾತ್ರಿ ಎರಡೂವರೆಗೆ ಸಮೀಪಿಸಿದೆ. ಇಂಥ ಅವೇಳೆಯಲ್ಲಿ ಆ ಮಹಿಳೆ ಕರೆಯ ಬೇಕೆಂದರೆ ವಿಷಯ ಗಂಭೀರವಾಗಿದೆ ಎಂದುಕೊಳ್ಳುತ್ತ ನೈಟ್‌ಗೌನ್ ಧರಿಸಿ. ಫೋನಿನ ಬಳಿ ಬಂದು ರಿಸೀವರ್ ಕಿವಿಗೆ ಆನಿಸಿ ನುಡಿದ. "ಹಲೊ... ಹೇಮಂತ ಹಿಯರ್."

"ಮೇಜರ್... ನಾನು ಸಾರಸ್ವತಪುರದಿಂದ ಮಿಸೆಸ್ ಶಾಂತಿ ಸತ್ಯೇಂದ್ರ ಮಾತನಾಡುತ್ತಿದ್ದೇನೆ. ದಯವಿಟ್ಟು ಕೂಡಲೇ ನಮ್ಮ ಮನೆಗೆ ಬರುವಿರಾ?"

"ಧಾರಾಳವಾಗಿ ಬರುತ್ತೇನೆ. ಆದರೆ ಈಗಲೇ ಬರಬೇಕೆ? ಬೆಳಿಗ್ಗೆ ಬಂದರೆ ಆಗದೆ?"

"ನೋ...ನೋ ಮೇಜರ್. ನಾನು ಬೆಳಗಿನವರೆಗೂ ಕಾಯಲಾರೆ... ನೀವು ಈಗಲೇ ಬರಬೇಕು. ಅದಕ್ಕೆಂದೇ ಈ ಹೊತ್ತಿನಲ್ಲಿ ತೊಂದರೆ ಕೊಡು ತ್ತಿರುವೆ. ಪ್ಲೀಸ್ ಬನ್ನಿ. ನೀವು ಕೇಳಿದಷ್ಟು ಹಣ ಕೊಡಲು ನಾವು ಸಿದ್ಧ. ಬನ್ನಿ ನನ್ನ ಸಮಸ್ಯೆ ಬಗೆಹರಿಸಿ."

"ಆಯ್ತು ಶಾಂತಿ ಬರುತ್ತೇನೆ ನಿಮ್ಮ ಮನೆಯ ವಿಳಾಸ ಹೇಳಿ."

"44, ಮೂರನೇ ಅಡ್ಡ ರಸ್ತೆ. ಸಾರಸ್ವತಪುರ."

"ಓ,ಕೆ. ಅರ್ಧ ಗಂಟೆಯಲ್ಲಿ ಬರುತ್ತೇನೆ."

ಫೋನು ಯಥಾ ಸ್ಥಾನದಲ್ಲಿರಿಸಿ ಹೇಮಂತ ಸುಷಮಾಳಿಗೆ ತಯಾರಾ ಗಲು ಹೇಳಿ ಮಲಗುವ ಕೋಣೆಯಿಂದ ಹೊರಬಿದ್ದ.

ಅರ್ಧ ಗಂಟೆ ಕಳೆದಿರಲಿಲ್ಲ. ಹೇಮಂತನ ಕಾರು ಶಾಂತಿಯ ಮನೆಯ ಮುಂದೆ ನಿಂತಿತ್ತು. ಗೇಟಿನ ವರೆಗೆ ಬಂದಿದ್ದ ಆಕೆ ಗೇಟು ತೆರೆದು ಕಾರು ಒಳಗೆ

ಬರಲು ದಾರಿ ಮಾಡಿಕೊಟ್ಟಳು. ಕಾರು ಒಳಕ್ಕೆ ಬರುತ್ತಲೂ ಗೇಟು ಹಾಕಿ ಪೋರ್ಟಿಕೋಕ್ಕೆ ಬಂದಾಗ ಹೇಮಂತ ಕಾರಿನಿಂದ ಕೆಳಗಿಳಿದು ನಿಂತಿದ್ದ. ಜೊತೆಯಲ್ಲಿ ಸುಷಮಾ. ಶಾಂತಿಯೇ ಮಾತನಾಡಿಸಿದಳು,

"ಹಲೊ ಮೇಜರ್ ನಾನು ಶಾಂತಿ ಸತ್ಯೇಂದ್ರ. ಈ ಹೊತ್ತಿನಲ್ಲಿ ತೊಂದರೆ ಕೊಟ್ಟದ್ದಕ್ಕೆ ಕ್ಷಮಿಸಿ ಬನ್ನಿ ಒಳಗೆ."

ಅವರೆಲ್ಲ ಹಜಾರ ದಾಟಿ ಮೇಲೆ ಬಂದರು. ಶಾಂತಿ ಬೇಕೆಂತಲೇ ಮೇಜರನನ್ನು ಬೆಡ್‌ರೂಮಿನ ವರೆಗೆ ಕರೆ ತಂದಿದ್ದಳು. ಮಂಚದ ಪಕ್ಕದಲ್ಲಿದ್ದ ಸೋಫಾ ಮೇಲೆ ಅವರನ್ನು ಕುಳ್ಳಿರಿಸಿ ಮಲಗಿದ್ದ ಪ್ರೊಫೆಸರ ಕಡೆ ಕೈಮಾಡಿ ತೋರಿಸಿ, "ಅವರೇ ನನ್ನ ಪತಿ ಪ್ರೊಫೆಸರ್ ಸತ್ಯೇಂದ್ರ. ಅವರ ಸಲುವಾಗಿಯೇ ನಾನು ನಿಮ್ಮನ್ನು ಕರೆಸಿದ್ದು" ಎಂದಳು.

"ಏಕೆ? ಅವರಿಗೇನಾಗಿದೆ?"

"ಬನ್ನಿ ತೋರಿಸುತ್ತೇನೆ."

ಹೇಮಂತ ಹಾಗೂ ಸುಷಮಾ ಮೇಲೆದ್ದು ಪ್ರೊಫೆಸರರ ಸಮೀಪ ಬಂದರು. ಗಾದಿಯನ್ನು ಸೀಳಿಕೊಂಡು ಕಟ್ಟಿಗೆಯ ಮಂಚದಲ್ಲಿ ನೆಟ್ಟು ಹೋಗಿದ್ದ ಚೂರಿಯೆಡೆ ಅವರ ದೃಷ್ಟಿ ಬಿದ್ದಾಗ ಹೇಮಂತ ಬೆಚ್ಚಿ ಬಿದ್ದು ಕೇಳಿದ. "ಓಹ್! ಸ್ಟೀಲ್ ಚೂರಿ ಇಲ್ಲೇಕೆ?"

"ಎಲ್ಲಾ ವಿವರವಾಗಿ ಹೇಳುತ್ತೇನೆ, ಸ್ವಲ್ಪ ಹೊತ್ತು ಕುಳಿತುಕೊಳ್ಳಿರಿ. ನಾನು ಕಾಫಿ ಮಾಡಿಕೊಂಡು ಬರುತ್ತೇನೆ ಕಾಫಿ ಕುಡಿದಾದ ಮೇಲೆ ಮಾತನಾಡುವಾ".

ಹೇಮಂತನ ಪ್ರತ್ಯುತ್ತರಕ್ಕೂ ಕಾಯದೆ ಶಾಂತಿ ಮರೆಯಾದಳು. ಆಕೆ ಬರಲು ಐದಾರು ನಿಮಿಷಗಳು ಹಿಡಿದವು. ಇಬ್ಬರಿಗೂ ಒಂದೊಂದು ಕಪ್ ನೀಡಿ ತಾನೊಂದು ಕಪ್ ತಗೆದುಕೊಂಡು ಕುಳಿತುಕೊಳುತ್ತಿದ್ದಂತೆ, ಹೇಮಂತ ಪ್ರಶ್ನಿಸಿದ "ನಿಮ್ಮ ಯಜಮಾನರನ್ನು ಎಬ್ಬಿಸುವುದಿಲ್ಲವೇ." ಶಾಂತಿ ಒಮ್ಮೆಲೆ ಹೇಮಂತನ ಪ್ರಶ್ನೆಗೆ ಉತ್ತರಿಸಲಿಲ್ಲ. ಕಾಫಿ ಕುಡಿದು ಕಪ್ ಕೆಳಗಿರಿಸಿಒಂದು ಬಾರಿ ಸತ್ಯೇಂದ್ರನ ಕಡೆ ನೋಡಿ ಖಿನ್ನಳಾಗಿ ನುಡಿದಳು, "ಇಲ್ಲ ಮೇಜರ್...ಅವರು ಬೆಳಗಿನ ಹತ್ತು ಗಂಟೆಯು ವರೆಗೂ ಏಳಲಾರರು.

"ಅಂದರೆ!"

"ಹೇಳುತ್ತೇನೆ, ಮೇಜರ್ ಎಲ್ಲಾ ಹೇಳುತ್ತೇನೆ, ಕೇಳಿ ಶಾಂತಿ ಹೇಳಲಾ"

ರಭಿಂಸಿದಳು. ನಡೆದ ಘಟನೆಯನ್ನೆಲ್ಲ ವಿವರಿಸಲಿಕ್ಕೆ ಆಕೆಗೆ ಹತ್ತು ನಿಮಿಷಗಳು ಹಿಡಿದವು ಈ ಅವಧಿಯಲ್ಲಿ ಹೇಮಂತ ನಾಲ್ಕು ಸಿಗರೇಟು ಸೇದಿ ಒಗೆದಿದ್ದ. ಸುಷಮಾ ಬೊಂಬೆಯಂತೆ ಕುಳಿತಿದ್ದಳು ಅರ್ಧಕ್ಕಿಂತ ಹೆಚ್ಚು ಉರಿದುಹೋದ ಸಿಗರೇಟನ್ನು ಆಶ್‌ಟ್ರೇದಲ್ಲಿ ಚೆಲ್ಲಿದಾಗ, ಅವನ ತಲೆಯಲ್ಲಿ ಶಾಂತಿ ಹೇಳಿದ ವಿಷಯ ತುಂಬಿತ್ತು. ಎಂಥ ವಿಚಿತ್ರ? ನಂಬಲಿಕ್ಕಾಗದು ಸುಖ ತುಂಬಿ ತುಳು ಕುತ್ತಿದ್ದ ಸಂಸಾರ ಅನ್ಯೋನ್ಯವಾಗಿದ್ದ ದಂಪತಿಗಳು...ಒಮ್ಮೆಲೆ ಪತಿ ತನ್ನ ಪತ್ನಿಯ ಕೊಲೆ ಮಾಡಲು ಪ್ರಯತ್ನಿಸುತ್ತಾನೆ ಅದೃಷ್ಟವಶಾತ್ ಪತ್ನಿ ಬದುಕುತ್ತಾಳೆ. ಆತ ತನ್ನ ತಪ್ಪಿಗೆ ಕ್ಷಮೆ ಕೇಳಿ ಚಿಕ್ಕಮಗುವಿನಂತೆ ಅಳುತ್ತಾನೆ...

ದೀರ್ಘ ಮೌನ ಮುರಿದು ಹೇಮಂತ ಕೇಳಿದ, "ನಿಮ್ಮ ಪತಿ ಈ ರೀತಿ ವರ್ತಿಸಲು ತೊಡಗಿ ಎಷ್ಟು ದಿನಗಳಾದವು?"

"ಸುಮಾರು ನಾಲ್ಕು ತಿಂಗಳುಗಳು. ನಾಲ್ಕು ತಿಂಗಳ ಹಿಂದೆ ನಮ್ಮ ಮದುವೆಯ ನಾಲ್ಕನೆಯ ವಾರ್ಷಿಕೋತ್ಸವದ ರಾತ್ರಿ ಸತ್ಯೇಂದ್ರ ಪ್ರಥಮಬಾರಿ ನನ್ನನ್ನು ಕೊಲ್ಲಲು ಪ್ರಯತ್ನಿಸಿದ್ದು.

"ಅಂದರೆ? ಇದಕ್ಕೂ ಮೊದಲು ಒಂದು ಬಾರಿ ಇಂಥ ಘಟನೆ ನಡೆದಿದೆಯೇ?" ಆಶ್ಚರ್ಯದಿಂದ ಬೆಚ್ಚಿ ಬಿದ್ದ ಸುಷಮಾ ಕೇಳಿದಳು. ಪ್ರಥಮ ಬಾರಿ ಆಕೆಯ ಅಸ್ತಿತ್ವವನ್ನು ಗಮನಿಸಿದವಳಂತೆ ಶಾಂತಿ ಆಕೆಯೆಡೆ ನೋಡಿ ಉತ್ತರಿಸಿದಳು, "ಒಂದು ಬಾರಿಯಲ್ಲ...ಸುಷಮಾ ಎರಡುಬಾರಿ. ಈ ಘಟನೆ ಹಿಡಿದರೆ. ಒಟ್ಟು ಮೂರು ಬಾರಿ ನಾನು ಸತ್ಯೇಂದ್ರನ ಆಕ್ರಮಣದಿಂದ ಪಾರಾಗಿದ್ದೇನೆ...

## 2. ನಾಲ್ಕು ತಿಂಗಳ ಹಿಂದಿನ ಕಥೆ

**ಹೇ**ಮಂತ ಜಾಗೃತನಾದ. ಆಲಸ್ಯ ಪಲಾಯನ ಮಾಡಿ, ಕುತೂಹಲ ಮೂಡತೊಡಗಿತ್ತು. "ಸ್ವಲ್ಪ ವಿವರವಾಗಿ ಹೇಳಿ,'' ಎಂದ ಬಾಯಿಯ ವರೆಗೂ ಬಂದ ಆಕಳಿಕೆಯನ್ನು ಅಂಗೈಯಿಂದ ತಡೆದು. ಶಾಂತಿ ಹಿಂದಿನ ಘಟನೆ ನೆನಪಿಸಿಕೊಂಡು ಹೇಳಲಾರಂಭಿಸಿದಳು:

"ಇದು ನಾಲ್ಕು ತಿಂಗಳುಗಳ ಹಿಂದೆ ನಡೆದುದು ನಮ್ಮ ಮದುವೆಯಾಗಿ ನಾಲ್ಕು ವರ್ಷ ಕಳೆದವು. ನಮ್ಮದು ಪ್ರೇಮ ವಿವಾಹ. ನಮ್ಮ ತಂದೆಯ ಮುಖ ನಾನು ನೋಡಿದ್ದು ನೆನಪಿದೆ; ತಾಯಿಯ ಮುಖ ನನಗೆ ನೆನಪಿಲ್ಲ. ತಂದೆಯವರೇ ನನ್ನನ್ನು ತಾಯಿಗಿಂತ ಹೆಚ್ಚಾಗಿ ಸಾಕಿದರು. ನನ್ನ ತಂದೆ ಸೇನೆಯಲ್ಲಿ ಕ್ಯಾಪ್ಟನ್ ಆಗಿದ್ದರು, ಕ್ಯಾಪ್ಟನ್ ಆನಂದ ಎಂದೇ ಅವರನ್ನು ಎಲ್ಲರೂ ಕರೆಯುವದು. ನಮ್ಮದು ತಿಪಟೂರು. ಅಲ್ಲಿ ತೆಂಗು ಹಾಗೂ ಅಡಿಕೆ ತೋಟವಿದೆ. ಭತ್ತ, ಕಬ್ಬು ಬೆಳೆಯುವ ಗದ್ದೆ ಇದೆ. ಸ್ವಂತ ಮನೆಯೂ ಇದೆ. ನಮ್ಮ ತಂದೆಯವರು ಅಲ್ಲಿದ್ದು ಕೊಂಡು ಎಲ್ಲಾ ನೋಡಿಕೊಳ್ಳುತ್ತಾರೆ. ಒಮ್ಮೆ ನಾನು ಮೈಸೂರಿಗೆ ಹೋದಾಗ ಸತ್ಯೇಂದ್ರನ ಭೇಟಿಯಾಯಿತು. ತನ್ನ ಮಿತ್ರರೊಂದಿಗೆ ಮೈಸೂರಿಗೆ ಬಂದಿದ್ದ ಆತ ನನ್ನನ್ನು ನೋಡಿದ ಪ್ರಥಮ ನೋಟವಲ್ಲಿ ಪ್ರಣಯ ಅಂಕುರಿಸಿತು. ನಾವು ಒಬ್ಬರನ್ನೊಬ್ಬರು ಮೆಚ್ಚಿಕೊಂಡೆವು ದೃಷ್ಟಿಯಲ್ಲಿಯೇ, ಅಂದೇ ಚಾಮುಂಡಿ ಬೆಟ್ಟದಲ್ಲಿ ಮತ್ತೊಂದು ಬಾರಿ ಭೇಟಿಯಾಯಿತು. ಮರುದಿನ ಸಂಜೆ ಬೃಂದಾ ವನದಲ್ಲಿ ಪುನಃ ಸಂಧಿಸಿದಾಗ ನಾವು ಒಬ್ಬರನ್ನೊಬ್ಬರು ಪರಿಚಯಿಸಿಕೊಂಡೆವು. ಮುಂದೆ ಎಲ್ಲೆಡೆ ಒಟ್ಟಾಗಿ ತಿರುಗಿದೆವು, ಪ್ರೇಮಿಸಿದೆವು. ಜೀವನಪರ್ಯಂತ ಒಬ್ಬ ರನ್ನೊಬ್ಬರು ಅನುಸರಿಸುವುದಾಗಿ ಭಾಷೆ ನೀಡಿದೆವು. ರಜೆ ಮುಗಿಯಿತು. ಒಲ್ಲದ ಮನಸ್ಸಿನಿಂದ ಒಬ್ಬರನ್ನೊಬ್ಬರು ಬಿಟ್ಟು ಅಗಲಿದೆವು. ನಾನು ನನ್ನ ತಂದೆಗೆ ವಿಷಯ ತಿಳಿಸಿದೆ. ಅವರು ನನ್ನ ಮಾತಿಗೆ ಒಪ್ಪಿದರು. ಇಬ್ಬರೂ ಕೂಡಿ ಧಾರವಾಡಕ್ಕೆ ಬಂದೆವು.

"ಸತ್ಯೇಂದ್ರ ಧಾರವಾಡದ ಕಾಲೇಜೊಂದರಲ್ಲಿ ಪ್ರಾಧ್ಯಾಪಕ. ತಂದೆ ತಾಯಿ ಯಾರೂ ಇಲ್ಲ. ಆತ ಒಂಟಿ. ಗಾಂಧೀ ಚೌಕದ ಬಳಿ ಅಟ್ಟದ ಮೇಲೆ ಒಂದು ರೂಮು ಮಾಡಿಕೊಂಡಿದ್ದ. ನನ್ನ ತಂದೆ ಆತನೊಂದಿಗೆ ಮಾತನಾಡಿ ದರು- ಎರಡು ದಿನ ನಾವು ಧಾರವಾಡದಲ್ಲಿದ್ದೆವು. ನಮ್ಮಿಬ್ಬರ ನಡುವಿನ 13 ವರ್ಷಗಳ ವಯಸ್ಸಿನ ಅಂತರವೇ ನಮ್ಮ ತಂದೆಯವರ ಮನಸ್ಸನ್ನು ಕೊರೆಯು ತ್ತಿತ್ತು. ನನಗಾಗ 18 ಸತ್ಯೇಂದ್ರನಿಗೆ 31. ನನಗವರ ಚಿಂತೆಯಿರಲಿಲ್ಲ... ಸತ್ಯೇಂದ್ರ ಒಂಟಿ... ಆತ ಬಡವ ಎಂಬುದೂ ನನಗೆ ಗೊತ್ತಿತ್ತು. ನಾನು ನನ್ನ ತಂದೆಗೆ ಒಬ್ಬಳೇ ಮಗಳು, ಹತ್ತಿಪ್ಪತ್ತು ಲಕ್ಷ ರೂಪಾಯಿಯ ಸಂಪತ್ತಿಗೆ ನಾನೇ ಒಡತಿ.

"ಕೊನೆಗೆ ನಮ್ಮ ತಂದೆ ನನ್ನ ಹಟಕ್ಕೆ ಒಪ್ಪಿಕೊಂಡರು. ಒಂದೇ ತಿಂಗಳ ಅವಧಿಯಲ್ಲಿ ಧಾರವಾಡದ ಸರಸ್ವತಿ ಸದನವಲ್ಲಿ ನಮ್ಮ ಮದುವೆಯಾಯಿತು.

ಸಾರಸ್ವತಪುರದಲ್ಲಿರುವ ಈ ಮನೆ ನಮ್ಮ ತಂದೆ ಕೊಂಡು ನಮಗೆ ಉಡುಗೊರೆಯಾಗಿ ನೀಡಿದರು. ನಮ್ಮ ಜೀವನ ಜೇನಿನ ಹೊಳೆಯಂತೆ ನಾಲ್ಕು ವರ್ಷ ಸಾಗಿತು.

"ನಾಲ್ಕು ತಿಂಗಳ ಹಿಂದೆ ನಮ್ಮ ಮದುವೆಯ ನಾಲ್ಕನೇ ವಾರ್ಷಿಕೋತ್ಸವ ನಮ್ಮ ತಂದೆ ಬಂದಿದ್ದರು. ರಾತ್ರಿ ಒಂಭತ್ತು ಗಂಟೆಯ ಸುಮಾರಿಗೆ ನನ್ನ ತಂದೆಯವರು ನನಗೊಂದು ಸಂತಸದ ವಿಷಯ ತಿಳಿಸಿದರು. ನಾಲ್ಕು ವರ್ಷ ರಹಸ್ಯವಾಗಿಟ್ಟಿದ್ದ ವಿಷಯ ಅಂದು ತಾವಾಗಿ ತಿಳಿಸಿದರು.

"ನಮ್ಮ ಮದುವೆಯಾದ ಒಂದು ತಿಂಗಳಿಗೆ ನನ್ನ ಹೆಸರಿನಲ್ಲಿ ಹತ್ತುಲಕ್ಷಕ್ಕೆ ವಿಮೆ ಮಾಡಿಸಿದ್ದರು. ಅವರ ಸ್ವಂತ ಹೆಸರಿನಲ್ಲಿ ಆಗಲೇ ಹತ್ತುಲಕ್ಷರೂಪಾಯಿ ವಿಮೆ ಮೊದಲೇ ಮಾಡಿಸಲಾಗಿತ್ತು....ಒಟ್ಟಾರೆ ಹದಿನೈದು ಇಪ್ಪತ್ತು ವರ್ಷಗಳ ನಂತರ ನನಗೆ ಇಪ್ಪತ್ತು ಲಕ್ಷ ರೂಪಾಯಿ ದೊರೆಯುತ್ತಿತ್ತು. ನನಗಾದ ಸಂತಸ ಅಷ್ಟಿಷ್ಟಲ್ಲ. ರಾತ್ರಿ ಎರಡು ಗಂಟೆಯ ವರೆಗೂ ನಡೆದ ಸಮಾರಂಭದಲ್ಲಿ ನಾನು ಹಿಗ್ಗಿನ ಬುಗ್ಗೆಯಾಗಿ ಸಂಚರಿಸಿದೆ, ಎಲ್ಲಾ ಅತಿಥಿಗಳು ಮನೆಗೆ ಹೋಗಿ, ನಾನು ನನ್ನ ಮಲಗುವ ಕೋಣೆಗೆ ಬಂದಾಗ ಎರಡೂವರೆ ಗಂಟೆ.

"ಸತ್ಯೇಂದ್ರ ನನಗಾಗಿ ಕಾಯ್ದು ಕೂತಿದ್ದ, ಅಂದು ನನಗೆ ನನ್ನ ಪತಿಯ ಮೇಲೆ ಎಲ್ಲಿಲ್ಲದ ಪ್ರೀತಿ ಉಕ್ಕಿ ಬಂದಿತು. ಅವರನ್ನು ಬಾಚಿ ತಬ್ಬಿಕೊಂಡು ತುಟಿ ನೋಯುವ ವರೆಗೂ ಚುಂಬಿಸಿದೆ. ತಬ್ಬಿಬಾದ ಅವರಿಗೆ ನನಿಂದ ಬಿಡಿಸಿ ಕೊಳ್ಳಬೇಕಾದರೆ ಸಾಕು ಸಾಕಾಯಿತು.

"ಸಾಕಷ್ಟು ಸತಾಯಿಸಿದ ಮೇಲೆ ನಾನವರಿಗೆ ವಿಷಯ ತಿಳಿಸಿ ಬಟ್ಟೆಬದಲಿಸಲು ಹೋದೆ. ನಾನು ಮರಳಿ ಬಂದಾಗ ನನ್ನ ಪತಿ ಕೈಕಟ್ಟಿಕೊಂಡು ಎದ್ದು ನಿಂತಿದ್ದರು. ಅವರ ಮುಖ ಉಗ್ರವಾಗಿತ್ತು. ಕಣ್ಣುಗಳು ತೆರೆದಿದ್ದರೂ ಅವರು ರೆಪ್ಪೆ ಬಡಿಯುತ್ತಿರಲಿಲ್ಲ... ಅವರು ನನ್ನನ್ನೇ ದಿಟ್ಟಿಸುತ್ತ ಗಂಭೀರವಾಗಿ ಹೇಳಿದರು, 'ಶಾಂತಿ ... ನೀನು ನನಗೆ ಸಂತಸದ ವಿಷಯ ಹೇಳಿರುವೆ, ಅದಕ್ಕೆಂದೇ ನಿನಗಾಗಿ ಬಾದಾಮಿಹಾಲು ತಯಾರಿಸಿರುವೆ ಕುಡಿ".

"ಅವರು ಗಂಭೀರವಾಗಿ ನುಡಿದಿದ್ದರೂ ನನ್ನ ಮೇಲಿನ ಅವರ ಪ್ರೀತಿಗೆ ನಾನು ಮುಗ್ಧಳಾಗಿ, ನಗುನಗುತ್ತಾ ಹಾಲಿನ ಗ್ಲಾಸಿಗೆ ಕೈಹಾಕಿ ತುಟಿಗೆ ತಂದೆ. ಅದೇ ಕ್ಷಣ ಸತ್ಯೇಂದ್ರ ಚಂಗನೆ ನನ್ನ ಮೇಲೆ ನೆಗೆದು ಬಾಯಿಯ ವರೆಗೂ ಬಂದಿದ್ದ ಆ ಹಾಲಿನ ಗ್ಲಾಸನ್ನು ಹಾರಿಸಿಬಿಟ್ಟ. ಪರಸಿಯ ಮೇಲೆ ಬಿದ್ದು

ಒಡೆದು ಚೂರು ಚೂರಾದ ಗ್ಲಾಸಿನೆಡೆ ನೋಡುತ್ತ ಥರಥರ ಕಂಪಿಸುತ್ತಾ ಆತ, "ಶಾಂತಿ... ಈ ಹಾಲಿನಲ್ಲಿ ನಾನು ವಿಷ ಬೆರಿಸಿದ್ದೆ... ನಿನ್ನನ್ನು ನಾನು ಕೊಲ್ಲಬೇಕೆಂದು ಮಾಡಿದ್ದೆ... ನನ್ನನ್ನು ಕ್ಷಮಿಸು" ಎಂದು ಬಡಬಡಿಸುತ್ತಾ ಮುಂದೆ ಹಸುಗೂಸಿನಂತೆ ಅಳಲಾರಂಭಿಸಿದ್ದ. ಹಾಗೇ ಅಳುತ್ತ ಮಲಗಿಬಿಟ್ಟ. ಮರುದಿನ 10 ಗಂಟೆಯ ವರೆಗೂ ಆತ ಏಳಲಿಲ್ಲ. ಆತನನ್ನು ಎಚ್ಚರಿಸಲು ನಾವು ಮಾಡಿದ ಎಲ್ಲ ಪ್ರಯತ್ನ ವಿಫಲವಾಯಿತು. ಅಂದು ನನಗಾದ ಆಘಾತವೆಂದೂ ಮರೆಯದಂತಹದು. ಹೇಗೋ ಸಹಿಸಿಕೊಂಡೆ, ಬಹುಶಃ ಸತ್ಯೇಂದ್ರ ಹಾಸ್ಯ ಮಾಡಿರಬಹುದೆಂದು ಈ ಸಮಾಚಾರ ತಂದೆಯ ಮುಂದೆ ಹೇಳಲಿಲ್ಲ. ಮರು ದಿವಸ ತಂದೆ ಊರಿಗೆ ಹೊರಟು ಹೋದರು. ಹತ್ತು ಗಂಟೆಗೆ ಸತ್ಯೇಂದ್ರ ನಿಗೆ ಎಚ್ಚರ ಬಂದಿತು. ಆತ ಎಂದಿನಂತೆ ತನ್ನ ಕೆಲಸ ಕಾರ್ಯ ಮುಗಿಸಿ ಕೊಂಡು ಕಾಲೇಜಿಗೆ ಹೋದ. ರಾತ್ರಿ ನಾನು ನಡೆದ ವಿಚಾರ ತಿಳಿಸಿದೆ, ಆತ ನಿಗೆ ಒಂದೂ ನೆನಪಿರಲಿಲ್ಲ. ಅಷ್ಟೆ ಅಲ್ಲ ಇದೆಲ್ಲಾ ಸುಳ್ಳು...ಒಂದು ನಾಟಕ ಎಂದ ನಾನು ಹೆಚ್ಚಿಗೆ ವಾದಿಸದೇ ಆ ವಿಷಯ ಅಲ್ಲಿಗೇ ಮುಗಿಸಿದೆ".

ಸತತವಾಗಿ ಮಾತನಾಡಿದ್ದರಿಂದ ಶಾಂತಿಗೆ ಆಯಾಸವಾಗಿತ್ತು. ಮುಖದ ಮೇಲೆ ಬೆವರು ಕಾಣಿಸಿಕೊಂಡಿತ್ತು. ಸೆರಗಿನಿಂದ ಮುಖ ಒರೆಸಿಕೊಳ್ಳುತ್ತಿದ್ದಾಗ ಹೇಮಂತ ಕೇಳಿದ, "ನಿಮ್ಮ ತಂದೆಯವರು ವಿಮೆ ಇರಿಸಿದ ವಿಷಯ ನಿಮ್ಮನ್ನು ಬಿಟ್ಟು ಬೇರೆ ಯಾರಿಗಾದರೂ ತಿಳಿದಿತ್ತೇ?"

ಸ್ವಲ್ಪ ಯೋಚಿಸಿ ಶಾಂತಿ ನುಡಿದಳು "ನನಗೆ ತಿಳಿದಂತೆ ಇಲ್ಲ. ಏಕೆಂದರೆ ಆ ವಿಷಯ ನನಗೂ ತಿಳಿದದ್ದು ಅಂದೇ. ನಾನು ಬೆಡ್‌ರೂಮಿನಲ್ಲಿದ್ದಾಗ ನಮ್ಮ ತಂದೆ ನನಗೆ ತಿಳಿಸಿದರು. ಆ ಸಮಯದಲ್ಲಿ ನನ್ನನ್ನು ಬಿಟ್ಟು ಬೇರೆ ಯಾರೂ ಅಲ್ಲಿರಲಿಲ್ಲ. ನಾನು ಸತ್ಯೇಂದ್ರನಿಗೆ ಈ ವಿಷಯ ತಂದಿದ್ದೂ ಸಹ ರಾತ್ರಿ ಎರಡು ಗಂಟೆಯ ಮೇಲೆ".

"ಅದು ಸರಿ... ನೀವು ನಿಮ್ಮ ತಂದೆ ಈ ವಿಷಯ ತಿಳಿಸಿ ಹೋದ ನಂತರ ಬಾತ್‌ರೂಂ ಕಡೆ ಲಕ್ಷ್ಯ ಕೊಟ್ಟಿರಾ?" ಅಲ್ಲಿಯ ವರೆಗೂ ಮೌನವಾಗಿದ್ದ ಸುಷಮಾ ಒಮ್ಮೆಲೇ ನೇರವಾಗಿ ಕೇಳಿದ್ದರಿಂದ ಒಂದು ಕ್ಷಣ ವಿಚಲಿತಳಾದ ಶಾಂತಿ ಕೂಡಲೇ ಸುಧಾರಿಸಿಕೊಂಡು ಕೇಳಿದಳು.

"ಅಂದರೆ? ...ನಿಮ್ಮ ಪ್ರಶ್ನೆ ನನಗರ್ಥವಾಗಲಿಲ್ಲ,"

"ಸರಿ ಹಾಗಾದರೆ ತಿಳಿಸಿ ಹೇಳುತ್ತೇನೆ... ನಿಮ್ಮ ತಂದೆ ನಿಮಗೆ ವಿಮೆ

ವಿಷಯವು ತಿಳಿಸುವಾಗ ನೀವು ಬೆಡ್‌ರೂಂನಲ್ಲಿ ಒಂಟಿಯಾಗಿದ್ದಿರಿ. ಆ ಸಮಯ ದಲ್ಲಿ ಬಾತ್‌ರೂಮಿನ ಬಾಗಿಲು ಹೊರಗಿನಿಂದ ಮುಚ್ಚಲ್ಪಟ್ಟಿತ್ತೆ? ಅಥವಾ ಬಾಗಿಲು ಅರ್ಧ ತೆರೆದಿತ್ತೇ? ಇಲ್ಲ ಒಳಗಡೆಗೆ ಯಾರಾದರೂ ಇದ್ದರೆ... ಒಂದು ವೇಳೆ ನೀವು ರೂಮಿನಲ್ಲಿ ಬರುವದಕ್ಕಿಂತ ಮೊದಲೇ ಯಾರಾದರೂ ಬಂದು ಬಾತ್‌ರೂಮಿನಲಿದ್ದು ನಿಮ್ಮ ಮಾತು ಕೇಳಿಸಿಕೊಂಡಿರಲು ಸಾಧ್ಯವೇ? ಎಂದು ನಾನು ವಿಚಾರಿಸಿದ್ದು. ನನ್ನ ಮಾತು ಸರಿ ತಾನೇ?"

''ಗುಡ್... ಒಂದು ಉತ್ತಮ ಪ್ರಶ್ನೆ" ಹೇಮಂತ ಸುಷಮಾಳನ್ನು ಪ್ರಶಂಸಿಸುತ್ತಾ ನುಡಿದ.

''ಮಿಸೆಸ್ ಶಾಂತಿ...ಸುಷಮಾ ಕೇಳಿದ ಪ್ರಶ್ನೆ ನಿಜವಾಗಿಯೂ ಗಮನ ಕೊಡಬೇಕಾದ ಪ್ರಶ್ನೆ... ಇದರ ಬಗ್ಗೆ ನಿಮಗೇನಾದರೂ ತಿಳಿದಿದೆಯೇ ?"

"ಸಾರಿ. ಮೇಜರ್, ನಾಲ್ಕು ತಿಂಗಳು ಕಳೆದು ಹೋಗಿದೆ. ನೆನಪಿನಲ್ಲಿಲ್ಲ"

''ಸರಿ...ಈ ವಿಷಯ ಇಲ್ಲಿಗೇ ಬಿಟ್ಟು ಬಿಡಿ...ನಿಮ್ಮ ತಂದೆ ತಮ್ಮ ಹೆಸರಿ ನಲ್ಲಿ ಹತ್ತು ಲಕ್ಷಕ್ಕೆ ವಿಮೆ ಮಾಡಿಸಿದ್ದರೆಂದು ಹೇಳಿದಿರಿ. ಇದು ಸರಿ ತಾನೇ?"

ಹೌದು.''

"ಒಂದು ವೇಳೆ ಅವರಿಗೇನಾದರೂ ಆದರೆ ಆ ಹಣ ಯಾರಿಗೆ ಸಿಕ್ಕುತ್ತೆ?''

"ನನಗೇ''

"ಸರಿ...ಇನ್ನೊಂದು ಪ್ರಶ್ನೆ; ನಿಮ್ಮ ಹೆಸರಿನಲ್ಲಿಯೂ ವಿಮೆ ಮಾಡಿಸಿದರೆ ಒಂದು ವೇಳೆ ನಿಮಗೇನಾದರೂ ಆದರೆ?''

"ಅದು ನನ್ನ ಪತಿಗೆ ದೊರೆಯುತ್ತದೆ. ಅದು ಸರಿ ನೀವು ಹೀಗೇಕೆ ಕೇಳುತ್ತಿದ್ದೀರಿ?''

"ಹೇಳುತ್ತೇನೆ. ಸ್ವಲ್ಪ ತಡೆಯಿರಿ. ಈಗ ಕೇಳುವ ಪ್ರಶ್ನೆಗೆ ಸ್ವಲ್ಪ ವಿಚಾರಿಸಿ ಉತ್ತರಿಸಿ...ನಿಮ್ಮ ತಂದೆ ಹಾಗೂ ನಿಮಗೆ ಇಬ್ಬರ ಜೀವಕ್ಕೂ ಗಂಡಾಂತರ ಬಂದರೆ ಆ ಎಲ್ಲಾ ಹಣ ಅಂದರೆ ಇಪ್ಪತ್ತು ಲಕ್ಷ ರೂಪಾಯಿ ನಿಮ್ಮ ಪತಿಗೆ ದೊರೆಯುತ್ತದೆ ಅಲ್ಲವೇ?''

"ಹೌದು...ಅವರಿಗಲ್ಲದೇ ಬೇರೆ ಯಾರಿಗೆ ದೊರೆಯುತ್ತದೆ? ಏಕೆ? ಇದನ್ನೆಲ್ಲಾ ಏಕೆ ಕೇಳುತ್ತಿದ್ದೀರಿ?''

"ಆ ಮೇಲೆ ಹೇಳುತ್ತೇನೆ...ನೀವು ಮುಂದುವರೆಸಿ''

ಶಾಂತಿ ಪುನಃ ಹೇಳಲಾರಂಭಿಸಿದಳು:

"ಮತ್ತೆ ಎರಡು ತಿಂಗಳುಗಳು ಕಳೆದವು. ಈ ಮಧ್ಯೆ ಒಂದು ಬಾರಿಯೂ

ಸತ್ಯೇಂದ್ರ ಈ ವಿಷಯದ ಬಗ್ಗೆ ಮಾತನಾಡಲಿಲ್ಲ. ಕ್ರಮೇಣ ನಾನು ಸಹ ಅದನ್ನು ಮರೆತು ಬಿಟ್ಟೆ. ಅಂದು ಸಂಜೆ ಪೇಟೆಗೆ ಹೋಗಬೇಕಾಗಿತ್ತು. ಸತ್ಯೇಂದ್ರ ಬಂದಿರಲಿಲ್ಲ. ಅವರ ಬಳಿ ಒಂದು ಬೀಗದ ಕೈ ಇರುವುದರಿಂದ ನಾನು ಮನೆಗೆ ಬೀಗ ಹಾಕಿಕೊಂಡು ಪೇಟೆಗೆ ಹೋದೆ, ಒಂದು ಗಂಟೆ ಬಿಟ್ಟು ಬಂದಾಗ ಬಾಗಿಲು ತೆರೆದಿತ್ತು. ಸತ್ಯೇಂದ್ರ ಬಂದು ಬಾಗಿಲು ತೆರೆದಿರಬೇಕು ಎಂದುಕೊಂಡೆ ನನ್ನ ಊಹೆಯೂ ನಿಜವಾಗಿತ್ತು. ತಿಂಡಿ ಕಾಫಿ ಆಯಿತು. ಹೊರಗಡೆ ಸುತ್ತಾಡುವುದು ಬೇಡ ಒಳಗೆ ಬೆಡ್‌ರೂಮಿನಲ್ಲಿಯೇ ಆಟ ಆಡೋಣ ಎಂದ. ನನಗೆ ಮೊದಲು ಅಚ್ಚರಿ. ಅದರ ಹಿಂದೆ ಲಜ್ಜೆ. ಬೆಡ್‌ರೂಮಿನಲ್ಲಿ ಆಟ ಎಂದರೆ ಲಜ್ಜೆಯಾಗದಿದ್ದೀತೆ? ಸತ್ಯೇಂದ್ರ ಬಿಡಲಿಲ್ಲ. ಬಲವಂತ ಮಾಡಿದ. ನನಗೂ ಇಷ್ಟವಿತ್ತು. ಹೆಣ್ಣಾದುದರಿಂದ ಲಜ್ಜೆ ಬಿಡಲಾಗಲಿಲ್ಲ. ಬೆಡ್‌ರೂಮಿಗೆ ಹೋದೆವು.

"ಆಟವೂ ವಿಚಿತ್ರವಾಗಿತ್ತು. ಸತ್ಯೇಂದ್ರ ವಿವರಿಸಿದ. ರೂಮಿನ ಮಧ್ಯೆ ಒಂದು ಕುರ್ಚಿ. ಅದರ ಸುತ್ತಲೂ ವಿರುದ್ಧ ದಿಶೆಯಲ್ಲಿ ಒಂದು ಸುತ್ತು ಓಡ ಬೇಕು. ಯಾರು ಮೊದಲು ಬಂದು ಆ ಕುರ್ಚಿಯ ಮೇಲೆ ಜಿಗಿದು ಕುಳಿತು ಕೊಳ್ಳುವರೋ ಅವರು ಗೆದ್ದಂತೆ. ಸೋತವರು ಗೆದ್ದವರಿಗೆ ಒಂದು ಕಿಸ್ ಕೊಡ ಬೇಕು. ನನಗೆ ಕಚಗುಳಿ ಇಟ್ಟಂತಾಯಿತು. ಸೋತರೇನು? ಗೆದ್ದರೇನು? ಸಿಗುವುದು ಕಿಸ್ ತಾನೇ? ಮೋಜಿನ ಆಟ. ನಾನು ಆಗಲಿ ಎಂದೆ".

## 3. ಅರ್ಥವಾಗದ ವರ್ತನೆ

"ಸರಿ. ನಾವಿಬ್ಬರೂ ವಿರುದ್ದ ದಿಕ್ಕಿಗೆ ಓಡಿದೆವು. ಕುರ್ಚಿಯ ಒಂದು ಸುತ್ತು ಹಾಕಬೇಕಲ್ಲ. ಸತ್ಯೇಂದ್ರನೇ ಮೊದಲು ಮುಂದಿದ್ದ...ಆದರೆ ನನ ಗೇಕೋ ಸಂಶಯ ಬಂದಿತು, ಆತ ಮುಂದಿದ್ದವ ಒಮ್ಮೆಲೆ ಹಿಂದಾದ. ಬಹುಶಃ ತಾನು ಸೋಲಬೇಕೆಂದೇ ಆ ರೀತಿ ಮಾಡಿರಬೇಕು.

"ನಾನು ಕುರ್ಚಿಯ ಹತ್ತಿರ ಬಂದು ಇನ್ನೇನು ಜಿಗಿದು ಅದರ ಮೇಲೆ ಕುಳಿತುಕೊಳ್ಳಬೇಕೆಂದಿದ್ದೆ. ಅಷ್ಟರಲ್ಲಿ ಸತ್ಯೇಂದ್ರ ವಿಕಾರವಾದ ಧ್ವನಿಯಲ್ಲಿ

ಕಿರುಚಿಕೊಂಡ.

"ಶಾಂತೀ...ಅಲ್ಲಿಯೇ ನಿಲ್ಲು...ಕುರ್ಚಿಯ ಮೇಲೆ ಕುಳಿತುಕೊಳ್ಳಬೇಡ" ಅದರ ಹಿಂದೆಯೇ ವೇಗವಾಗಿ ಓಡಿಬಂದ ಆತ ನನ್ನನ್ನು ತನ್ನೆಡೆ ಎಳೆದುಕೊಂಡು ಹುಚ್ಚನಂತೆ ನನ್ನನ್ನು ಚುಂಬಿಸತೊಡಗಿದ. ನನಗೆ ಅವನ ವರ್ತನೆ ಅರ್ಥವಾಗ ಲಿಲ್ಲ. ತಬ್ಬಿಬ್ಬಾಗಿ ನಿಂತುಬಿಟ್ಟೆ. ಸುಧಾರಿಸಿಕೊಳ್ಳಲು ಹತ್ತು ನಿಮಿಷಗಳೇ ಬೇಕಾದವು. ಸತ್ಯೇಂದ್ರ ಮಂಕನಾಗಿ ಕುಳಿತುಬಿಟ್ಟಿದ್ದ. ನಾನು ಕೇಳಿದೆ. "ಏಕೆ? ಏನಾಯ್ತು?"

"ಶಾಂತಿ ನಿನ್ನನ್ನು ನಾನು ಕೊಲ್ಲಬೇಕೆಂದು ಮಾಡಿದ್ದೆ. ಆದರೆ ಕೊಲ್ಲ ಲಾಗಲಿಲ್ಲ."

"ನಾನು ದಂಗು ಬಡಿದು ನಿಂತಿದ್ದೆ. ಎರಡು ತಿಂಗಳ ಹಿಂದಿನ ಘಟನೆ ನಾನು ಮರೆತುಬಿಟ್ಟಿದ್ದೆ. ಒಮ್ಮೆಲೆ ನೆನಪಾಗಿ ಮೈ "ಜುಂ" ಎಂದಿತು. ಬೊಂಬೆ ಯಂತೆ ನಾನು ನಿಂತದ್ದನ್ನು ಕಂಡ ಸತ್ಯೇಂದ್ರ ಕೇಳಿದ. "ಏಕೆ ನನ್ನ ಮಾತಿನ ಮೇಲೆ ವಿಶ್ವಾಸವಿಲ್ಲವೇ ? ನೀನೇ ನೋಡು ಬೇಕಾದರೆ."

"ಸತ್ಯೇಂದ್ರ ಕುರ್ಚಿಯ ಮೇಲಿದ್ದ ದಿಂಬು ಎತ್ತಿದ. ಕೆಳಗಡೆ ಮುಖ ಮಾಡಿ ಇರಿಸಿದ್ದ ಹರಿತವಾದ ಚೂರಿ. ಒಂದು ವೇಳೆ ನಾನು ನೆಗೆದು ಅದರ ಮೇಲೆ ಕುಳಿತಿದ್ದರೆ ನನ್ನ ಪರಿಸ್ಥಿತಿಯು ಏನಾಗುತ್ತಿತ್ತೋ. ನಾನು ಗಡಗಡ ನಡುಗತೊಡಗಿದೆ. ಸತ್ಯೇಂದ್ರ ಗಳಗಳ ಅಳುತ್ತಾ ನನ್ನ ಬಳಿ ಬಂದು ಬೇಡಿಕೊಂಡ. "ಶಾಂತಿ ... ನನ್ನನ್ನು ಕ್ಷಮಿಸು ... ನಿನ್ನನ್ನು ಕೊಲ್ಲಬೇಕೆಂದೆ ಆಗಲಿಲ್ಲ... ನನ್ನ ತಪ್ಪನ್ನು ಕ್ಷಮಿಸು".

"ಮರುಕ್ಷಣ ಅತಿ ಗಾಢವಾಗಿ ನಿದ್ದೆ ಮಾಡತೊಡಗಿದ. ಮರುದಿನ ಎಂಟು ಗಂಟೆಯುವರೆಗೂ ಆತ ಎಚ್ಚರಾಗಲಿಲ್ಲ. ಮರುದಿನ ಎಚ್ಚೆತ್ತಾಗ ಹಿಂದಿನ ದಿನದ ಯಾವ ವಿಷಯವೂ ಆತನಿಗೆ ನೆನಪಿರಲಿಲ್ಲ...ಇದಾದ ನಂತರ ನಡೆದ ಘಟನೆಯು ಇದು. ಈಗಾತ ನಿದ್ರಿಸುತ್ತಿದ್ದಾನೆ. ನಾಳೆ ಬೆಳಗಿನ ಎಂಟು ಗಂಟೆಯ ನಂತರ ಆತ ಎಚ್ಚರಗೊಳ್ಳುತ್ತಾನೆ. ಎಚ್ಚರವಾದಾಗ ಆತನಿಗೆ ಈ ಘಟನೆ ನೆನಪೇ ಬರುವದಿಲ್ಲ...."

ಅಸಹನೀಯವಾದ ಮೌನ ಎಲ್ಲೆಡೆ ವ್ಯಾಪಿಸಿತು. ಏನು ಮಾತಾಡ ಬೇಕೆಂಬುದೇ ತಿಳಿಯದು. ಇಂಥ ವಿಚಿತ್ರ ಕೇಸು ಹೇಮಂತನ ಜೀವಮಾನದಲ್ಲಿ ಬಂದಿರಲಿಲ್ಲ. ಹೆಂಡತಿಯನ್ನು ಕೊಲೆ ಮಾಡಿದ, ಕೊಲೆ ಮಾಡಲು ಪ್ರಯತ್ನಿ

ಸಿದ ಎಷ್ಟೋ ಜನರನ್ನು ಕಂಡಿದ್ದ. ಆದರೆ ಸತ್ಯೇಂದ್ರನ ವಿಷಯವೇ ಬೇರೆ. ಮೂರು ಬಾರಿ ಆತ ತನ್ನ ಪತ್ನಿಯನ್ನು ಕೊಲೆ ಮಾಡಲು ಎಲ್ಲ ಸಿದ್ಧತೆ ಮಾಡಿದ್ದಾನೆ. ಮೂರು ಬಾರಿಯೂ ಆತ ಆಕೆಯನ್ನು ಉಳಿಸಿದ್ದಾನೆ. ಮೂರು ಬಾರಿಯೂ ಆತ ಕ್ಷಮೆ ಬೇಡಿದ್ದಾನೆ, ತನ್ನ ತಪ್ಪು ಒಪ್ಪಿಕೊಂಡಿದ್ದಾನೆ. ಎಂತಹ ವಿಚಿತ್ರ ಅಪರಾಧಿ? ಆತನಿಗೆ ಅಪರಾಧಿ ಅನ್ನಬೇಕೋ ಅನ್ನಬೇಡವೊ? ಆತ ಅಪರಾಧಿಯಾಗಿದ್ದರೆ ಹೆಂಡತಿಯನ್ನೇಕೆ ಉಳಿಸುತ್ತಿದ್ದ? ಅರ್ಥವಾಗದ ಸಮಸ್ಯೆ. ವಿಚಿತ್ರ ಸುಳಿ!

ಯಾವ ಮಾತೂ ಆಡದೆ ಶಾಂತಿ ಅಡಿಗೆಮನೆಗೆ ಹೋದಳು. ಕಳ್ಳಿಯಂತೆ ಮೇಲೆದ್ದ ಸುಷುಮಾ ಬಾತ್‌ರೂಮಿಗೆ ಹೋಗಿ ಬಂದಳು. ಸಪ್ಪಳವಾಗದಂತೆ ಪ್ಯಾಕೇಟಿನಿಂದ ಹೇಮಂತ ಸಿಗರೇಟು ತೆಗೆದು ಬಾಯಿಗಿರಿಸಿಕೊಂಡ. ಕಡ್ಡಿ ಗೀರಿದರೆ ಸಪ್ಪಳವಾಗಿ ಶಾಂತಿಭಂಗವಾದೀತೆಂಬ ಭಯದಿಂದಲೋ ಏನೋ ಆತ ಸಿಗರೇಟು ಉರಿಸದೇ ಹಾಗೆಯೇ ಬಿಟ್ಟ.

ಎರಡು ನಿಮಿಷಗಳಲ್ಲಿ ಶಾಂತಿ ಕಾಫಿ ತಂದು ಇರಿಸಿದಳು. ಮಾತಾಡದೆ ಇಬ್ಬರೂ ಕಾಫಿ ಕುಡಿದರು. ಹೇಮಂತ ಎದ್ದುನಿಂತು ಒಂದು ಬಾರಿ ಕೆಮ್ಮಿ ಗಂಟಲು ಸರಿಪಡಿಸಿಕೊಂಡು ನುಡಿದ, "ನಾನಿನ್ನು ಬರುತ್ತೇನೆ, ಹತ್ತು ಗಂಟೆಗೆ ಬಂದು ಪ್ರೊಫೆಸರನ್ನು ಭೇಟಿಯಾಗುವೆ. ಅವರೊಂದಿಗೆ ನಾನು ಮಾತನಾಡದೇ ಯಾವ ನಿರ್ಧಾರಕ್ಕೂ ಬರಲಾರೆ."

"ಹಾಗೇಮಾಡಿ... ಆದರೆ ಬೆಳಿಗ್ಗೆ ಬರುವುದಕ್ಕಿಂತ ಸಾಯಂಕಾಲ ಬಂದರೆ ಒಳ್ಳೆಯದು".

"ಏಕೆ?"

"ಅವರು ಏಳುವುದರಲ್ಲಿಯೇ ಹತ್ತು ಹೊಡೆಯುತ್ತದೆ, ನಂತರ ಅವಸರ ಅವಸರದಿಂದ ಕಾಲೇಜಿಗೆ ಹೋಗುತ್ತಾರೆ. ಊಟ ಸಹ ಸರಿಯಾಗಿ ಮಾಡಲಾರರು. ಅಂಥ ಸಮಯದಲ್ಲಿ ನೀವು ಬಂದರೆ ಬಹುಶಃ..."

"ಸರಿ ಅರ್ಥವಾಯಿತು. ಹಾಗೆಯೇ ಮಾಡುತ್ತೇನೆ. ನಾನು ಬರುವವರೆಗೂ ಅವರೊಂದಿಗೆ ಈ ವಿಷಯ ಕುರಿತು ಮಾತನಾಡಬೇಡಿ."

"ಮಾತನಾಡಿದರೂ ಪ್ರಯೋಜನವಿಲ್ಲ ಮೇಜರ್. ಅವರಿಗೆ ಯಾವ ವಿಷಯವೂ ನೆನಪಿರುವುದಿಲ್ಲ. ಆದರೂ ನಾನು ಚರ್ಚಿಸುವದಿಲ್ಲ."

"ಆಯ್ತು ನಾನಿನ್ನು ಬರಲೇ ?"

"ಒಂದು ನಿಮಿಷ ನಿಲ್ಲಿ. ಇದೀಗ ಬಂದೆ."

ನಾಲ್ಕೈದು ನಿಮಿಷ ಬಿಟ್ಟು ಶಾಂತಿ ಬಂದಾಗ ಆಕೆಯ ಕೈಯಲ್ಲಿ ಚೆಕ್ಕೊಂದಿತ್ತು. ಅದನ್ನು ಹೇಮಂತನೆಡೆ ಚಾಚುತ್ತಾ ಹೇಳಿದಳು, "ನನಗೆ ನನ್ನ ಪ್ರಾಣದ ಬಗ್ಗೆ ಅಂಜಿಕೆಯಿಲ್ಲ ಮೇಜರ್. ಹುಟ್ಟಿದ ಮನುಷ್ಯ ಒಂದಿಲ್ಲ ಒಂದು ದಿನ ಸಾಯಲೇಬೇಕು. ನನಗೆ ನನ್ನ ಪತಿಯ ಕೈಯಿಂದಲೇ ಮರಣವಿದ್ದರೆ ಅದು ಒಂದು ದೃಷ್ಟಿಯಿಂದ ನನ್ನ ಸೌಭಾಗ್ಯವೆಂದು ತಿಳಿಯುತ್ತೇನೆ. ಆದರೆ ಕೊಲೆ ಮಾಡಿದ ನನ್ನ ಪತಿ, ''ಕೊಲೆಗಾರ" ಎನ್ನಿಸಿಕೊಳ್ಳುವುದು ನನಗಿಷ್ಟವಿಲ್ಲ. ನಾನವರನ್ನು ಬಹಳ ಪ್ರೀತಿಸುತ್ತೇನೆ. ನನ್ನ ಪ್ರಿಯ ವಸ್ತುವಿಗೆ ಕಳಂಕ ಬರುವುದು ನನಗೆ ಸಹಿಸದು. ಅದಕ್ಕಾಗಿ ನಾನು ಬದುಕಬೇಕು. ಮೇಜರ್, ಅದು ನಿಮಗೆ ಬಿಟ್ಟ ಕೆಲಸ... ತೆಗೆದುಕೊಳ್ಳಿ ಹತ್ತು ಸಾವಿರಕ್ಕೆ ಚೆಕ್ಕಿದೆ. ಆ ಮೇಲೆ ಮತ್ತಷ್ಟು ಕೊಡುವೆ."

ಹೇಮಂತ ಒಂದು ಕ್ಷಣ ದಂಗಾದ. ಮೂರು ಸಾರಿ ಕೊಲೆಮಾಡಲು ಪ್ರಯತ್ನಿಸಿದ ಪತಿಯ ಬಗ್ಗೆ ಎಷ್ಟು ಒಳ್ಳೆಯ ಭಾವನೆ ಈಕೆಗಿದೆ? ಆತನ ಒಳಿತಿಗಾಗಿ ಇನ್ನೂ ಪ್ರಯತ್ನಿಸುತ್ತಿದ್ದಾಳೆ. ಯಾವ ಮಾತು ಆಡದೇ ಮೆಚ್ಚಿಗೆಯ ದೃಷ್ಟಿಯಿಂದ ಅವಳನ್ನು ನೋಡುತ್ತಾ ಚೆಕ್ ಇಸಿದುಕೊಂಡು ''ಧನ್ಯವಾದಗಳು" ಎಂದ. ಮೂವರೂ ಪೋರ್ಟಿಕೋ ಬಳಿ ಬಂದರು. ಶಾಂತಿ ಮುಂದೆ ಹೋಗಿ ಗೇಟು ತೆರೆದಳು. ಕಾರನ್ನು ಗೇಟಿನ ಬಳಿ ನಿಲ್ಲಿಸಿದ ಹೇಮಂತ ಕೇಳಿದ, ''ಏಕೆ? ನಿಮ್ಮಿಬ್ಬರ ಹೊರತು ಬೇರೆ ಯಾರು ಕಾಣ್ತಾ ಇಲ್ಲ."

''ವಾಚ್‌ಮನ್ ಒಬ್ಬನಿದ್ದಾನೆ. ಆತನಿಗೆ ಕಾಯಿಲೆ ಇನ್ನು ನಾಲ್ಕು ದಿವಸ ಬರುವದಿಲ್ಲ. ಅಡಿಗೆ ಹಾಗೂ ಮನೆ ಕೆಲಸ ನಾನು ಮಾಡುತ್ತೇನೆ. ಪಾತ್ರೆ ತಿಕ್ಕಲು ಬಟ್ಟೆ ಒಗೆಯಲು ಮಾತ್ರ ಒಬ್ಬಾಕೆಯನ್ನು ಗೊತ್ತು ಮಾಡಿದ್ದೇವೆ ಅಷ್ಟೆ... "

''ಸರಿ ಒಂದು ಕೆಲಸ ಮಾಡಿ ಕೂಡಲೇ ಟೆಲಿಗ್ರಾಂ ಮಾಡಿ ನಿಮ್ಮ ತಂದೆಯವರನ್ನು ಕರೆಸಿಕೊಳ್ಳಿ."

''ಆಗಲಿ ... ಟೆಲಿಗ್ರಾಂ ಮಾಡಿದರೆ ಭಯಪಡಬಹುದು. ಕಾರಣ ಟೆಲಿಫೋನ್ ಮಾಡುತ್ತೇನೆ."

"ಓಕೆ, ಗುಡ್‌ನೈಟ್."

"ಸಾರಿ, ಮೇಜರ್. ಈಗಾಗಲೇ ಬೆಳಗಿನ ನಾಲ್ಕು ವರೆ ಆಗಿದೆ."

"ಹಾಗಾದರೆ ಗುಡ್ ಮಾರ್ನಿಂಗ್."

ಹೇಮಂತ ನಗುನಗುತ್ತ ಕಾರು ಗೇಟು ದಾಟಿಸಿದ. ಕೆಂಪುದೀಪ ರಸ್ತೆಯ ತಿರುವಿನಲ್ಲಿ ಹೊರಳುವ ವರೆಗೂ ನೋಡುತ್ತ ನಿಂತಿದ್ದ ಶಾಂತಿ ನಂತರ ಭಾರ ವಾದ ಹೆಜ್ಜೆಗಳೊಂದಿಗೆ ಗೇಟನ್ನು ಮುಚ್ಚಿಕೊಂಡು ಒಳಗೆ ನಡೆದಳು.

## 4. ಶಾಂತಿಯ ಮೇಲೆ ಸಂದೇಹ

**ಮೇ**ಜರ್ ಮನೆ ಮುಟ್ಟಿದಾಗ ಆಗಲೇ ಐದಕ್ಕೆ ಸಮೀಪಿಸಿತ್ತು. ಸುಷಮಾ, "ಒಂದು ಗಂಟೆ ಮಲಗುತ್ತೇನೆ," ಎಂದು ಹೇಳಿ ಬೆಡ್‌ರೂಮಿನಲ್ಲಿ ಮಾಯವಾದಳು. ಹೇಮಂತ ಮಾತ್ರ ನಿದ್ರಿಸುವಂತಿರಲಿಲ್ಲ. ಪ್ರತಿ ದಿವಸ ಒಂದು ಗಂಟೆ ವ್ಯಾಯಾಮ ಮಾಡುವ ರೂಢಿ. ಅದನ್ನು ಯಾವ ಪ್ರಸಂಗದಲ್ಲಿಯೂ ತಪ್ಪಿಸುತ್ತಿರಲಿಲ್ಲ. ಹೀಗಾಗಿ ಬಟ್ಟೆ ಬದಲಿಸಿ ಆತ ವ್ಯಾಯಾಮ ಮಾಡಲು ತಯಾರಿ ನಡೆಸಿದ.

ಸರಿಯಾಗಿ ಏಳು ಗಂಟೆಗೆ ಸುಷಮಾ ಸ್ನಾನಮಾಡಿ ಕಾಫಿ ತಿಂಡಿ ತಯಾರಿಸಿ, ಮೇಜರನ ರೂಮಿಗೆ ಬಂದಾಗ ಆತ ಸ್ನಾನದ ಕೊರಡಿಯಲ್ಲಿದ್ದ. ಹೊರಗಡೆಯಿಂದಲೇ ಬಾಗಿಲ ಮೇಲೆ ಮೆಲುವಾಗಿ ಬಾರಿಸಿದ ಸುಷಮಾ "ಟಿಫಿನ್ ರೆಡಿ ಇದೆ" ಎಂದಳು.

"ಕೇವಲ ಐದು ನಿಮಿಷ ನೀನು ಅಶೋಕನಿಗೆ ಫೋನು ಮಾಡಿ ಕೂಡಲೇ ಬರಲಿಕ್ಕೆ ಹೇಳು" ಒಳಗಿನಿಂದಲೇ ಹೇಮಂತ ಕೂಗಿ ಹೇಳಿದ.

ಸುಷಮಾ ಡೈನಿಂಗ್ ಹಾಲ್‌ಗೆ ಬಂದಳು. ಪೇಪರ್ ಆಗಲೇ ಬಂದಾಗಿತ್ತು. ಟಿಫನ್‌ಗೆ ಬೇಕಾದ ಎಲ್ಲ ಸಾಮಾನುಗಳನ್ನು ಓರಣವಾಗಿಟ್ಟು ಒಂದು ಬಾರಿ ದೃಷ್ಟಿ ಬೀರಿ ಎಲ್ಲಾ ಸರಿಯಾಗಿದೆ ಎಂದು ಅನಿಸಿದಾಗ ಅಲ್ಲಿಂದ ವರಾಂ-ಡಕ್ಕೆ ಬಂದಳು, ಅಶೋಕನಿಗೆ ಫೋನು ಮಾಡಿ "ಕೂಡಲೇ ಹತ್ತು ನಿಮಿಷದಲ್ಲಿ ಬರಬೇಕು" ಎಂದಿಷ್ಟೇ ಹೇಳಿ ನಸುನಗುತ್ತಾ ಫೋನ್ ಕೆಳಗಿಟ್ಟಳು. ಟೀಪಾ

ಯಿಯ ಮೇಲಿದ್ದ ಪೇಪರ್ ಕೈಗೆತ್ತಿಕೊಂಡಳು.

ಹತ್ತು ನಿಮಿಷ ಕಳೆದಿರಲಿಲ್ಲ. ''ಮೇಡಮ್ ನಾನು ರೆಡಿ" ಎಂದು ಹೇಳುತ್ತಾ ಹೇಮಂತ ಪ್ರವೇಶಿಸುವದಕ್ಕೂ ಹೊರಗೆ ಪೋರ್ಟಿಕೋದಲ್ಲಿ ಮೋಟಾರ ಬೈಕೊಂದು ಬಂದು ನಿಲ್ಲುವದಕ್ಕೂ ಸರಿಹೋಯಿತು. ''ಓಹ್ ಅಶೋಕ ಬಂದ" ಎನ್ನುತ್ತ ಸುಷಮಾ ಮೇಲೆದ್ದಳು. ಸಿಳ್ಳು ಹಾಕುತ್ತಾ ಕೀಗೊಂಚಲವನ್ನು ಬರಳಿನಿಂದ ತಿರುಗಿಸುತ್ತಾ ಒಳಗೆ ಬಂದ ಅಶೋಕ ಮೊದಲು ಹೇಮಂತನಿಗೂ ನಂತರ ಸುಷಮಾಳಿಗೂ ವಂದಿಸಿದ. ಮೂವರು ಟಿಫನ್ ಗೆಂದು ಮೇಲೆದ್ದರು.

ಟಿಫನ್ ಮಾಡುತ್ತ ಹೇಮಂತ ನಡೆದ ವಿಷಯ ತಿಳಿಸಿ, ಅಶೋಕನೆಡೆ ನೋಡಿ, ''ನಿನ್ನ ಅಭಿಪ್ರಾಯವೇನು?" ಎಂದು ಕೇಳಿದ.

''ನನಗಂತೂ ಶಾಂತಿಯ ಮೇಲೆ ಸಂದೇಹ ಬರುತ್ತಿದೆ. ಅವಳೇ ಏಕೆ ಕಟ್ಟು ಕಥೆ ಕಟ್ಟಿ ಪ್ರೊಫೆಸರನ್ನು ಅಪರಾಧಿ ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಿರಬಾರದು."

''ಅದರಿಂದ ಆಕೆಗಾಗುವ ಪ್ರಯೋಜನವಾದರೂ ಏನು?"

''ಅದೇ ಮುದುಕ ಗಂಡನಿಂದ ಅಂದರೆ ತನಗಿಂತ ಹೆಚ್ಚು ವಯಸ್ಸಾದ ಗಂಡನಿಂದ ಬಿಡುಗಡೆ ಪಡೆಯಲು."

''ಅವರದು ಒತ್ತಾಯದ ವಿವಾಹವಲ್ಲ. ಪ್ರೇಮವಿವಾಹ ಎಂಬುದನ್ನು ನೀನು ಮರೆತಂತಿದೆ ಅಶೋಕ" ಈ ಬಾರಿ ಸುಷ್‌ಮಾ ನುಡಿದಳು.

''ನಾನು ಮರೆತಿಲ್ಲ ಮೇಡಮ್. ಆಗ ಆಕೆಗೆ ಸತ್ಯೇಂದ್ರ ಬೇಕಾಗಿರ ಬಹುದು. ಕ್ಯಾಪ್ಟನ್ ಆನಂದ ಸಹ ವಯಸ್ಸಿನ ಅಂತರವಿರುವುದರಿಂದ ಬೇಡ ವೆಂದು ಹೇಳಿದ್ದರು. ಶಾಂತಿ ಕೇಳಿರಲಿಲ್ಲ, ಈಗ ನಾಲ್ಕು ವರ್ಷ ಕಳೆದಿವೆ. ಪ್ರೊಫೆಸರರಲ್ಲಿ ಮೊದಲಿನ ಕಾವು ಉಳಿದಿರಲಿಕ್ಕಿಲ್ಲ ಅಥವಾ ಶಾಂತಿಗೆ ಬೇರೆ ಯುವಕನ ಪರಿಚಯವಾಗಿ ಈಗ ಪರಿಸ್ಥಿತಿ ಮದುವೆಯ ಹಂತಕ್ಕೂ ಬಂದಿರ ಬಹುದು. ಹೀಗಾಗಿ ಈಗ ಪ್ರೊಫೆಸರರನ್ನು ದಾರಿಯಿಂದ ಸರಿಸುವದು ಸುಲಭ. ಮೂರು ಬಾರಿ ಕೊಲೆಗೆ ಪ್ರಯತ್ನಿಸಿದ್ದಾನೆ ಎಂಬ ಕಾರಣದ ಮೇಲೆ ಆಕೆಗೆ ಸುಲಭವಾಗಿ ಡೈವೋರ್ಸ್ ದೊರೆಯುತ್ತದೆ. ಒಟ್ಟಾರೆ ಹೆಣ್ಣಿನ ಮನಸ್ಸು ಚಂಚಲ ನೋಡು."

ಸುಷ್‌ಮಾಳ ಕಡೆ ಓರೆ ನೋಟದಿಂದ ನೋಡುತ್ತ ಅಶೋಕ ನುಡಿದಾಗ, ''ನಾನ್ಸೆನ್ಸ್... ನಾನಿದನ್ನು ನಂಬಲಾರೆ" ಎಂದಳು ಆಕೆ. ಅವಳ ಮುಖ ಕೆಂಡ

ದಂತೆ ಕೆಂಪಾಯಿತು.

''ಯಾಕಾಗಬಾರದು ಸುಷ್ಮಾ?" ತುಟಿಯ ವರೆಗೂ ಬಂದ ನಗುವನ್ನು ಹತ್ತಿಕ್ಕಿಕೊಂಡು ಹೇಮಂತ ಕೇಳಿದ.

''ಅಶೋಕನ ತರ್ಕ ನ್ಯಾಯಸಮ್ಮತವಾದುದು ಅಲ್ಲವೇ?"

''ನನ್ನ ದೃಷ್ಟಿಯಲ್ಲಿ ಅಲ್ಲ."

''ಹೇಗೆ ?"

''ನನ್ನ ದೃಷ್ಟಿಯಲ್ಲಿ ಸತ್ಯೇಂದ್ರನೇ ಅಪರಾಧಿ. ಆತನಿಗೆ ಈಗ ಶಾಂತಿಯ ಮೇಲೆ ಮೊದಲಿನ ಪ್ರೀತಿ ಉಳಿದಿರಲಿಕ್ಕಿಲ್ಲ. ಅವಳಿಂದ ವಿವಾಹ ವಿಚ್ಛೇದನ ಪಡೆದರೆ ಜೀವನಕ್ಕೆ ಮಾಸಾಶನ ಕೊಡಬೇಕಾಗುತ್ತದೆ. ಹೀಗಾಗಿ ಆಕೆಯನ್ನು ಹೆದರಿಸಿ, ಆಕೆ ತಾನಾಗಿಯೇ ವಿಚ್ಛೇಧನ ಪಡೆಯುವಂತೆ ಪ್ರೇರೇಪಿಸುತ್ತಿದ್ದಾನೆ.

''ಇದರಿಂದ ಅವನಿಗಾಗುವ ಪ್ರಯೋಜನ?"

"ಅವಳಿಂದ ಬಿಡುಗಡೆ...ಅಥವಾ ಸತ್ಯೇಂದ್ರನ ಸಂಬಂಧ ಬೇರೆ ಯಾರ ಜೊತೆಗಾದರೂ ಹೊಂದಿರಬಹುದು. ಆಕೆ ಶಾಂತಿಗಿಂತ ಸುಂದರಿಯೂ ಶ್ರೀಮಂತಳೂ ಆಗಿರಬಹುದು. ಅವಳೊಂದಿಗೆ ಆತ ಮದುವೆ ಮಾಡಿಕೊಳ್ಳಲು ಈ ನಾಟಕ ಏಕೆ ಹೂಡಿರಬಾರದು? ಎಷ್ಟೆಂದರೂ ಗಂಡಸರು ಕಪಟ ನಾಟಕ ಮಾಡಲು ಮುಂದಲ್ಲವೇ?"

ಸುಷಮಾ ಅಶೋಕನ ಮಾತಿಗೆ ಪೆಟ್ಟುಕೊಟ್ಟಳು. ಅಶೋಕ ತುಟಿಕಚ್ಚಿ ಸುಮ್ಮನಾದನೇ ಹೊರತು ಪ್ರತಿಭಟಿಸಲಿಲ್ಲ. ಹೇಮಂತ ಸಿಗರೇಟೊಂದನ್ನು ಉರಿಸಿ ಹೇಳಿದ, ''ನನಗೆ ನಿಮ್ಮಿಬ್ಬರ ತರ್ಕವು ಸರಿ ಅನ್ನಿಸುತ್ತದೆ. ಕಾರಣ ಇಂದಿನಿಂದ ಇಬ್ಬರ ಮೇಲೂ ಗಮನವಿಡಬೇಕು. ಅಶೋಕ ಶಾಂತಿಯನ್ನು ಹಿಂಬಾಲಿಸಲಿ, ಏಕೆಂದರೆ ಆಕೆ ನಿನ್ನನ್ನು ನನ್ನ ಸಂಗಡ ಕಂಡಿದ್ದಾಳೆ. ಅಶೋಕ ಆಕೆಗೆ ಅಪರಿಚಿತ ನೀನು. ಪ್ರೊಫೆಸರ್ ಮೇಲೆ ಕಣ್ಣಿಡು. ಇಬ್ಬರೂ ರಾತ್ರಿ ಒಂಭತ್ತು ಗಂಟೆಗೆ ನನಗೆ ವರದಿ ನೀಡಿ ರೈಟ್?"

''ನನಗೇನೋ ಒಪ್ಪಿಗೆ...ಆದರೆ ಅಶೋಕನ ಬಗ್ಗೆ ಸಂಶಯ."

''ಸಂಶಯ? ಎಂಥ ಸಂಶಯ?''

''ಫಾಲೋ ಮಾಡುತ್ತ ಮಾಡುತ್ತ ಶಾಂತಿಯನ್ನು ಆತನೇ ಎಲ್ಲಿ ಹಾರಿಸಿಕೊಂಡು...''

"ಅಂಥ ದುಷ್ಟನಲ್ಲ ನಾನು. ನೀನೇ ಹುಷಾರಾಗಿರು. ಆ ಪ್ರೊಫೆಸರ್ ನಿನ್ನನ್ನು ಎಲ್ಲಿಗಾದರೂ ಹಾರಿಸಿಕೊಂಡು ಹೋದಾನು.''

''ನಿಮ್ಮಿಬ್ಬರ ಕಚ್ಚಾಟ ಸಾಕುಮಾಡಿ...ಈಗಿನಿಂದಲೇ ನಿಮ್ಮ ಡ್ಯೂಟಿ ಪ್ರಾರಂಭಿಸಿ...''

ಅಶೋಕ ಹೊರಗೆ ಹೋಗುವ ವರೆಗೂ ತನ್ನ ಸ್ಥಳದಲ್ಲಿಯೇ ಕುಳಿತಿದ್ದ ಸುಷುಮಾ ಆತ ಹೊರಗೆ ಹೋಗುತ್ತಲೂ ಹೇಮಂತನೆಡೆ ಸರಿದಳು. ಅವಳ ಮನದ ಇಂಗಿತವರಿತ ಹೇಮಂತ ಅವಳನ್ನು ಮೆದುವಾಗಿ ತನ್ನೆದೆಗೆ ಒತ್ತಿಕೊಂಡು ಅವಳ ತುಟಿಗಳ ಮೇಲೆ ತನ್ನ ತುಟಿ ಇರಿಸಿದ.

"ಡಿಂಗ್‌ಡಾಂಗ್...ಡಿಂಗ್‌ಡಾಂಗ್ ಏಕ್ಕಿದ್ದು ರಾತ್ರಿಗಿರಲಿ....ಟನ್... ಟನ್...ಟನ್..."

ಸಿಲೋನ್ ರೇಡಿಯೋದಲ್ಲಿ ಜಾಹೀರಾತು ಪ್ರಸಾರ ಮಾಡುವಂತೆ ಬಂದ ಅಶೋಕನ ಧ್ವನಿಗೆ ಇಬ್ಬರೂ ಬೆಚ್ಚಿ ದೂರ ಸರಿದಾಗ ಅಟ್ಟಹಾಸ ಮಾಡುತ್ತ ನಗುತ್ತ ಅಶೋಕ ಹೊರಗೆ ಓಡಿದ. ತಪ್ಪು ಮಾಡಿದಾಗ ಸಿಕ್ಕುಬಿದ್ದಂತಾದ ಸುಷುಮಾ ಬಟ್ಟೆ ಬದಲಿಸಲು ಡ್ರೆಸ್ಸಿಂಗ್ ರೂಮಿಗೆ ಹೋದರೆ ಹೇಮಂತ ತನ್ನ ಕಾರಿನೆಡೆ ನಡೆದ. ಸೈಕೋಸ್ಪೆಷಲಿಸ್ಟ್ ಡಾಕ್ಟರ್ ಶಹಾ ಅವರೊಂದಿಗೆ ಈ ವಿಷಯ ಚರ್ಚಿಸಿ ಒಂದು ನಿರ್ಣಯಕ್ಕೆ ಆತ ಬರಲಿದ್ದ.

ಸಾಯಂಕಾಲ ಸರಿಯಾಗಿ ಆರು ಘಂಟೆಗೆ ಹೇಮಂತ ಪ್ರೊಫೆಸರರ ಮನೆಯ ಮುಂದೆ ಕಾರು ನಿಲ್ಲಿಸಿದ. ಬಾಗಿಲಲ್ಲಿ ಕಾಯುತ್ತ ನಿಂತಿದ್ದ ಶಾಂತಿ ಓಡಿಬಂದು ಗೇಟು ತೆರೆದಳು. ಕಾರನ್ನು ಒಳಗೆ ಒಯ್ಯದೆ ರಸ್ತೆಯಂಚಿಗೇ ಬಿಟ್ಟು ಹೇಮಂತ ಒಳಗೆ ಬರುತ್ತಾ ಕೇಳಿದ "ಪ್ರೊಫೆಸರ್ ಬಂದಿದ್ದಾರೆಯೇ?''

''ಹಾಂ ಬಂದು ಅರ್ಧ ಗಂಟೆಯಾಯಿತು. ತಮ್ಮ ಸ್ಟಡಿ ರೂಮಿನಲ್ಲಿ ದ್ದಾರೆ. ನಾನು ನಿಮ್ಮನ್ನು ಅವರ ಬಳಿ ಬಿಟ್ಟು ಒಳಗೆ ಹೋಗುತ್ತೇನೆ. ನೀವೇ ಅವರೊಂದಿಗೆ ಮಾತನಾಡಿ.''

ಹೇಮಂತ ಆಗಲಿ ಎನ್ನುವಂತೆ ಗೋಣು ಆಡಿಸಿದ. ಶಾಂತಿ ಹೇಮಂತ ನನ್ನು ಮೇಲೆ ಕರೆತಂದಳು. ಬೆಡ್‌ರೂಮಿಗೆ ಹೊಂದಿಕೊಂಡಿದ್ದ ರೂಮಿನ ಬಾಗಿಲು ತಳ್ಳಿಕೊಂಡು ಒಳಗೆ ಹೋಗುತ್ತ ನುಡಿದಳು. ''ಸತ್ಯು...ಮೇಜರ್ ಹೇಮಂತ ನಿಮ್ಮನ್ನು ಕಾಣಲು ಬಂದಿದ್ದಾರೆ.''

ಆರಾಮ ಕುರ್ಚಿಯಲ್ಲಿ ಒರಗಿಕೊಂಡು ಓದುವದರಲ್ಲಿ ತಲ್ಲೀನರಾಗಿದ್ದ ಪ್ರೊಫೆಸರ್ ಪುಸ್ತಕದಿಂದ ದೃಷ್ಟಿಕಿತ್ತು ಹೇಮಂತನೆಡೆ ನೋಡಿದರು. ಎರಡು ದೊಡ್ಡ ದೊಡ್ಡ ಹೆಜ್ಜೆಗಳನ್ನಿಟ್ಟು ಹೇಮಂತ ಅವರ ಬಳಿ ಸಾಗಿ ಬಲಗೈ ಮುಂದೆ ಮಾಡಿ, ''ನಿಮ್ಮನ್ನು ಭೇಟಿಯಾದದ್ದು ಬಹಳ ಸಂತೋಷ.'' ಕುಳಿತಲ್ಲಿಂದಲೇ ಮುಂದೆ ಚಾಚಿ, ಹೇಮಂತನ ಕೈಯನ್ನು ತನ್ನ ಬಲಗೈಯಲ್ಲಿ

ಹಿಡಿದು ಹಿತವಾಗಿ ಅದುಮಿದ ಸತ್ಯೇಂದ್ರ.

''ನನಗೂ ಅಷ್ಟೆ...ದಯವಿಟ್ಟು ಕುಳಿತುಕೊಳ್ಳಿ'' ಎಂದ ಶಾಂತಿ ಬಾಗಿಲೆಡೆ ಹೆಜ್ಜೆ ಹಾಕಿ ''ನೀವು ಮಾತನಾಡುತ್ತಿರಿ, ನಾನು ಕಾಫಿ ತರುತ್ತೇನೆ'' ಎಂದು ಹೇಳಿ ಅಲ್ಲಿಂದ ಜಾರಿಕೊಂಡಳು.

ನೀಳವಾದ ಕಪ್ಪಗಿನ ಕೂದಲುಗಳು, ಪ್ರತಿಭೆ ಸಾರಿ ಹೇಳುವ ಅಗಲವಾದ ಹಣೆ, ದೊಡ್ಡ ದೊಡ್ಡ ಕಿವಿಗಳು, ಆಳವಾಗಿ ಊರಿಹೋದ ಕೆಂಪು ಕಣ್ಣುಗಳು, ಬಿಗಿದ ತುಟಿ, ಸುಪುಷ್ಟವಾದ ದೇಹ, ನಿಷ್ಕಪಟ ಮುಖ.

ಒಂದೇ ದೃಷ್ಟಿಯಲ್ಲಿ ಹೇಮಂತ ಸತ್ಯೇಂದ್ರನನ್ನು ನೋಡಿದ. ಸಂಶಯಕ್ಕೆ ಆಸ್ಪದವೀಯುವಂತಹ ಯಾವ ಲಕ್ಷಣಗಳೂ ಆತನಿಗೆ ಪ್ರೊಫೆಸರರ ಮುಖದಲ್ಲಿ ಕಂಡುಬರಲಿಲ್ಲ.

ತನ್ನೆದುರು ಕುರ್ಚಿಯಲ್ಲಿ ಕುಳಿತು ತನ್ನನ್ನೇ ಸೂಕ್ಷ್ಮವಾಗಿ ನೋಡುತ್ತಿರುವ ಹೇಮಂತ ಪ್ರೊಫೆಸರರ ಪಾಲಿಗೆ ಒಗಟಾಗಿ ಕಂಡ. ಅವನ ಮನದಲ್ಲಿ ನಡೆಯುತ್ತಿರುವ ತುಮುಲ ಹೇಮಂತನಿಗೆ ತಿಳಿಯದಿರಲಿಲ್ಲ. ಆತ ಮುಗುಳುನಗೆ ಸೂಸುತ್ತ ನುಡಿದ,"ಕ್ಷಮಿಸಿ ಪ್ರೊಫೆಸರ್ ಬಹಳ ಹೊತ್ತು ಗೊಂದಲದಲ್ಲಿ ನಿಮ್ಮನ್ನಿಡಲಾರೆ. ನನ್ನ ಹೆಸರು ಆಗಲೇ ನಿಮಗೆ ತಿಳಿದಿದೆ. ನಾನೊಬ್ಬ ಖಾಸಗಿ ಪತ್ತೇದಾರ. ನಿಮ್ಮ ಶ್ರೀಮತಿಯವರ ವಿನಂತಿಯ ಮೇರೆಗೆ ನಾನು ಈ ಕೇಸನ್ನು ನನ್ನ ಕೈಯಲ್ಲಿ ತೆಗೆದುಕೊಂಡಿದ್ದೇನೆ.''

"ಏನು! ನೀವು ಪತ್ತೆದಾರರೆ? ಕೇಸು ಕೈಗೆ ತೆಗೆದುಕೊಂಡಿದ್ದೀರಾ? ಯಾವ ಕೇಸು? ಎಂಥ ಕೇಸು?''

''ಅದೇ ನೀವು ನಿಮ್ಮ ಹೆಂಡತಿಯನ್ನು ಮೂರು ಬಾರಿ ಕೊಲೆ ಮಾಡಲು ಪ್ರಯತ್ನಿಸಿದ ವಿಷಯ.''

ಮಾತನಾಡುತ್ತ ಹೇಮಂತ ಪ್ರೊಫೆಸರರ ಮುಖವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದ. ಅಲ್ಲಿ ಯಾವ ಬದಲಾವಣೆಯ ಲಕ್ಷಣಗಳೂ ಕಂಡು ಬರಲಿಲ್ಲ. ಸ್ವಲ್ಪ ನಿರಾಶೆಯಾಯಿತು.

''ನೀವು ಏನು ಹೇಳುತ್ತಿರುವಿರೋ ನನಗೊಂದು ತಿಳಿಯದು. ನಾನು ನನ್ನ ಹೆಂಡತಿಯ ಕೊಲೆ ಮಾಡಲು ಪ್ರಯತ್ನಿಸಿದೆನೆಯೇ?''

"ಹೌದು ಪ್ರೊಫೆಸರ್, ಒಂದಲ್ಲ ಮೂರು ಬಾರಿ. ಪ್ರಥಮ ಸಲ ವಿಷ ಸೇರಿಸಿದ ಹಾಲು ನೀಡಿ, ಎರಡನೆಯ ಬಾರಿ ಕುರ್ಚಿಯ ಮೇಲೆ ವಿಷ ಲೇಪನದ ಚೂರಿ ಇಟ್ಟು... ಮೂರನೆಯ ಬಾರಿ ಅದೂ... ನಿನ್ನೆ ರಾತ್ರಿ ಚೂರಿಯಿಂದ ಇರಿದು ಕೊಲ್ಲಲು...

"ಓಹ್... ನೋ... ನಾನಿದನ್ನು ನಂಬಲಾರೆ. ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ನಾನು ಶಾಂತಿಯನ್ನು ಪ್ರೀತಿಸುತ್ತೇನೆ. ಆಕೆಯನ್ನು ಕೊಲೆ ಮಾಡಲು ನಾನು ಮೂರು ಬಾರಿ ಪ್ರಯತ್ನಿಸಿದೆ ಎಂದರೇನು ? ಆಕೆ ಕೊಲೆಮಾಡುವುದಕ್ಕಿಂತ ನನ್ನನ್ನು ನಾನೇ ಕೊಂದುಕೊಳ್ಳಲು ನಾನು ಇಷ್ಟಪಡುತ್ತೇನೆ.''

"ಹೀಗಿದ್ದೂ ನೀವೇಕೆ ಈ ರೀತಿ ವರ್ತಿಸಿದಿರಿ ಎಂಬುದೇ ನನಗೆ ತಿಳಿಯದಂತಾಗಿದೆ. ನೀವು ಆಗ ಪ್ರೊಫೆಸರ್ ಆಗಿರುವುದಿಲ್ಲ. ಬೇರೆ ಯಾರೋ ಆಗಿರುತ್ತೀರಿ. ನಿಮ್ಮ ಮುಖ ಉಗ್ರವಾಗಿರುತ್ತದೆ, ರೆಪ್ಪೆ ಬಡಿಯದಂತೆ ಶೂನ್ಯದತ್ತ ದೃಷ್ಟಿಸುತ್ತ ನೀವು ಅಸ್ಪಷ್ಟವಾಗಿ ನುಡಿಯುತ್ತೀರಿ, 'ನಿನ್ನನ್ನು ನಾ ಕೊಲ್ಲಬೇಕು, ನೀನು ಕುಲಟೆ ... ನಿನ್ನ ನಾನು ಕೊಲ್ಲಬೇಕು."

"ಛೆ...ನನ್ನ ಹೆಂಡತಿ ಕುಲಟೆಯೇ?"

"ಇದನ್ನು ನಾನು ಹೇಳುತ್ತಿಲ್ಲ ಪ್ರೊಫೆಸರ್. ಈ ರೀತಿ ಹೇಳುತ್ತ ನೀವೇ ನಿಮ್ಮ ಪತ್ನಿಯ ಮೇಲೆ ಆಕ್ರಮಣ ಮಾಡುತ್ತೀರಿ. ನಿನ್ನೆ ರಾತ್ರಿ ನಡೆದದ್ದು ಇದೇ ರೀತಿ."

"ಸುಳ್ಳು...ಸುಳ್ಳು ಇದನ್ನು ನಾನು ನಂಬಲಾರೆ..."

"ಸುಳ್ಳಲ್ಲ ಡಿಯರ್, ಮೇಜರ್ ಹೇಳುತ್ತಿದ್ದುದೆಲ್ಲ ನಿಜ... ಅವರಿಗೆ ಈ ವಿಷಯ ನಾನೇ ತಿಳಿಸಿರುವೆ" ಕಾಫಿ ಟ್ರೇಯನ್ನು ಟೀಪಾಯ್ ಮೇಲಿಡುತ್ತ ಶಾಂತಿ ನುಡಿದಳು.

ಪ್ರೊಫೆಸರ್ ಒಂದು ಬಾರಿ ಅವಿಶ್ವಾಸ ತುಂಬಿದ ದೃಷ್ಟಿಯಿಂದ ಅವಳ ಕಡೆ ನೋಡುತ್ತ ಹೇಳಿದ, "ಶಾಂತಿ ಮೈ ಡಾರ್ಲಿಂಗ್ ನೀನು ಏನು ಹೇಳುತ್ತಿರುವೆ? ನಾನು ನಿನ್ನನ್ನು ಕೊಲ್ಲುವದು ಹೇಗೆ ಸಾಧ್ಯ? ನಾನು ನೀನೂ ಬೇರೆಯಲ್ಲ ಶಾಂತಿ. ದೇಹ ಬೇರೆಯಾದರೂ ನಮ್ಮ ಆತ್ಮ ಒಂದೇ. ನಿನ್ನ ಕೊಲ್ಲುವದೆಂದರೇ ನನ್ನನ್ನೇ ಕೊಂದುಕೊಂಡಂತೆ."

"ಅದು ನನಗೆ ಗೊತ್ತು ಸತ್ಯ. ಹೀಗಿದ್ದೂ ನೀವೇಕೆ ಈ ರೀತಿ ವರ್ತಿಸುತ್ತಿದ್ದೀರಿ ಎಂದು ನನಗೆ ತಿಳಿಯಲಾಗಲಿಲ್ಲ. ಅದಕ್ಕೆಂದೇ ನಾನು ಹೇಮಂತನ ಸಹಾಯ ಕೇಳಿರುವೆ ದಯವಿಟ್ಟು ಅವರು ಹೇಳಿದಂತೆ ಕೇಳಿ."

## 5. ಸ್ಫಟಿಕದಷ್ಟು ಶುಭ್ರ

ಪ್ರೊಫೆಸರ್ ಯಾವ ಮಾತನ್ನು ಆಡಲಿಲ್ಲ. ಶಾಂತಿ ಬಟ್ಟಲಿಗೆ ಕಾಫಿ

ಸುರಿದು ಇಬ್ಬರಿಗೂ ಕೊಟ್ಟು ತಾನೊಂದು ತಗೆದುಕೊಂಡು ಅವರ ಬಳಿ ಕುಳಿತು ಕೊಂಡಳು ಕಾಫಿ ಕುಡಿಯುತ್ತಾ ಹೇಮಂತ ಮಾತು ಮುಂದುವರೆಸಿದ.

"ಪ್ರೊಫೆಸರ್ ನಾನು ಸ್ಪಷ್ಟವಾಗಿ ಕೇಳುತ್ತೇನೆ. ದಯವಿಟ್ಟು ಕೋಪಿಸಿ ಕೊಳ್ಳದೇ ನಾನು ನಿಮ್ಮ ಹಿತೈಷಿ, ನಿಮ್ಮ ಮಿತ್ರ ಎಂಬುದನ್ನು ಗಮನದಲ್ಲಿಟ್ಟು ಕೊಂಡು ನನ್ನ ಮಾತಿಗೆ ಉತ್ತರ ಕೊಡಿ."

"ಆಗಲಿ ಮೇಜರ್...ನನಗೆ ತಿಳಿದ ಮಟ್ಟಿಗೆ ನಾನು ಸತ್ಯ ಹೇಳಲು ಪ್ರಯತ್ನಿಸುತ್ತೇನೆ."

"ಧನ್ಯವಾದಗಳು ಪ್ರೊಫೆಸರ್...ನಿಮಗೆ ನಿಮ್ಮ ಪತ್ನಿಯ ಶೀಲದ ಬಗ್ಗೆ ಸಂಶಯವಿದೆಯೇ?"

"ವಾಟ್ ನಾನ್ಸೆನ್ಸ್? ನಿಮ್ಮ ಮೈಮೇಲೆ ಪ್ರಜ್ಞೆ ಇಟ್ಟುಕೊಂಡೇ ಈ ಪ್ರಶ್ನೆ ಕೇಳುತ್ತಿದ್ದೀರಾ?"

''ದಯವಿಟ್ಟು ಕೋಪಿಸಿಕೊಳ್ಳದೇ ನನ್ನ ಪ್ರಶ್ನೆಗೆ ಉತ್ತರಕೊಡಿ ಪ್ಲೀಸ್''

''ನೋ ಖಂಡಿತವಾಗಿಯೂ ಇಲ್ಲ.''

''ನೀವು ಈ ಮಧ್ಯೆ ಯಾರನ್ನಾದರೂ ಪ್ರೀತಿಸಿದ್ದೀರಾ?''

''ಇಲ್ಲ.''

''ಅಥವಾ ಕಾಲೇಜಿನಲ್ಲಿ ಬೇರೆ ಯಾರಾದರೂ ಅಂದರೆ ನಿಮ್ಮ ಜೊತೆ ಕೆಲಸ ಮಾಡುವ ಸಹೋದ್ಯೋಗಿ ಅಥವಾ ಕಾಲೇಜಿನಲ್ಲಿ ಕಲಿಯುತ್ತಿರುವ ಬೇರೆ ಹುಡುಗಿಯಾಗಲೀ, ನಿಮ್ಮತ್ತ ಆಕರ್ಷಿತಳಾಗಿ ನಿಮ್ಮಲ್ಲಿ ಪ್ರಣಯ ಭಿಕ್ಷೆ ಬೇಡಿದ್ದಾಳೆಯೇ? ಯೋಚಿಸಿ ಹೇಳಿ..."

''ಇಂಥ ಯಾವುದೇ ವಿಷಯ ನಡೆದದ್ದು ನನಗೆ ನೆನಪಿಲ್ಲ.''

"ಸರಿ ನಿಮಗೆ ಯಾರಾದರೂ ನಿಮ್ಮ ಪತ್ನಿ ಶೀಲಗೆಟ್ಟವಳು, ಕುಲಟೆ, ನಿಮಗೆ ಮೋಸ ಮಾಡುತ್ತಿದ್ದಾಳೆ ಎಂದು ಮುಂತಾಗಿ ಪತ್ರವನ್ನೇನಾದರೂ ಬರೆದಿದ್ದಾರೆಯೇ? ಇಲ್ಲ ಫೋನು ಮಾಡಿದ್ದಾರೆಯೇ?''

"ಇಲ್ಲ ಮೇಜರ್ ...ನನಗಂಥ ಪತ್ರಗಳೂ ಬಂದಿಲ್ಲ...ಫೋನು ಬಂದಿಲ್ಲ.''

"ಹಾಗಾದರೆ ನಿಮಗೆ ನಿಮ್ಮ ಪತ್ನಿಯ ಬಗ್ಗೆ ಕೂದಲೆಳೆಯಷ್ಟು ಸಂಶಯವಿಲ್ಲವೇ?"

''ಇಲ್ಲ ಮೇಜರ್...ನನ್ನ ಮನಸ್ಸು ಸ್ಫಟಿಕದಷ್ಟೇ ಶುಭ್ರವಾಗಿದೆ. ಶಾಂತಿ ನನ್ನ ನೆರಳು. ಆಕೆಯನ್ನು ನಾನು ಸಂದೇಹಿಸಲಾರೆ ... ಶಾಂತಿ... ಇದೇನು ವಿಚಿತ್ರ ನಾನು ಎಂದು ನಿನ್ನನ್ನು ಸಂದೇಹಿಸಿ ಕೊಲ್ಲಲು...''

ಮುಂದೆ ಪ್ರೊ,ಫೆಸರ್‌ರ ಬಾಯಿಂದ ಮಾತೇ ಹೊರಡಲಿಲ್ಲ. ಕಣ್ಣುಗಳು

ನೀರಾಡಿದವು. ಗಂಟಲುಬ್ಬಿ ಬಂದಿತು. ಶಾಂತಿ ಅವರ ಬಳಿ ಕುಳಿತು ಸಮಾಧಾನಪಡಿಸಲಾರಂಭಿಸಿದಳು. ಪ್ರೊಫೆಸರರು, ಹೇಮಂತ ತನ್ನೆದುರು ಕುಳಿತಿದ್ದನ್ನು ಗಮನಿಸದೇ ಆಕೆಯನ್ನು ತಬ್ಬಿಕೊಂಡು ಚುಂಬಿಸುತ್ತಾ, "ಶಾಂತಿ... ನಾನು ನಿನ್ನನ್ನು ನನ್ನ ಜೀವನಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತೇನೆ'' ಎಂದರು ಗದ್ಗದ ಕಂಠದಿಂದ.

ಶಾಂತಿ ನಾಚಿ ನೀರಾಗಿ ಭೂಮಿಗಿಳಿದು ಹೋದಳು. ಒಂದೆಡೆ ಲಜ್ಜೆ ಮನೆ ಮಾಡಿದರೆ ಇನ್ನೊಂದೆಡೆ ತನ್ನ ಪತಿ ತನ್ನನ್ನು ಎಷ್ಟೊಂದು ಪ್ರೀತಿಸುತ್ತಾರಲ್ಲ ಎಂದು ತಿಳಿದು ಅದರಿಂದ ಉಂಟಾದ ಸಂತಸ ಬೇರೆ. ಈ ರೀತಿ ಇಬ್ಬಗೆಯಲ್ಲಿ ಸಿಕ್ಕು ಕೆಲವು ಕ್ಷಣಗಳು ತನ್ನನ್ನು ತಾನು ಮರೆತಿದ್ದ ಶಾಂತಿ ಪುನಃ ಸುಧಾರಿಸಿಕೊಂಡು ಪತ್ನಿಯಿಂದ ಬಿಡಿಸಿಕೊಂಡು ತನ್ನ ಜಾಗೆಗೆ ಬಂದು ಕುಳಿತಳು. ಹೇಮಂತ ಒಂದೊಂದೇ ಮಾತನ್ನು ತೂಕ ಮಾಡುತ್ತಾ ಹೇಳಿದ:

"ಪ್ರೊಫೆಸರ್... ನೀವು ನಿಮ್ಮ ಪತಿಯನ್ನು ಎಷ್ಟು ಪ್ರೀತಿಸುತ್ತಿರೋ ಅಷ್ಟೇ ಅವಳನ್ನು ದ್ವೇಷಿಸುತ್ತೀರಿ. ಅವಳಿಗಾಗಿ ಜೀವ ಕೊಡಲು ಸಿದ್ಧರಾದಂತೆ ಅವಳ ಜೀವ ತೆಗೆಯಲೂ ಹಿಂಜರಿಯಲಾರಿರಿ ನೀವು ಅವಳನ್ನು ಪ್ರೀತಿಸುವುದು ಎಷ್ಟು ಸತ್ಯವೋ ಅಷ್ಟೇ ಅವಳನ್ನು ಕೊಲ್ಲಲು ಪ್ರಯತ್ನಿಸಿದ್ದೂ ಸತ್ಯ. ಒಂದು ಚೇತನವಾದರೆ ಮತ್ತೊಂದು ಅಚೇತನ. ನೀವು ನೀವಾಗಿದ್ದಾಗ ಆಕೆಯನ್ನು ಪ್ರೀತಿಸುತ್ತೀರಿ — ನೀವು ಬೇರೆ ಯಾರೋ ಆಗಿದ್ದಾಗ ಕೊಲ್ಲಲು ಪ್ರಯತ್ನಿಸುತ್ತೀರಿ. ನೀವು ಬೇರೆ ಯಾರೋ ಏಕೆ ಆಗುತ್ತೀರಿ? ಯಾವಾಗ ಆಗುತ್ತೀರಿ ಎಂಬುದನ್ನೇ ನಾನು ಕಂಡುಹಿಡಿಯಬೇಕಾಗಿದೆ.

"ನಿಮ್ಮ ಅಚೇತನದಲ್ಲಿ ನಿಮ್ಮ ಪತ್ನಿ ಕುಲಟೆ ಎಂಬುದು ಗಟ್ಟಿಯಾಗಿ ಬೇರೂರಿದೆ. ಅದನ್ನು ನೀವು ಮರೆಯಲಾರಿರಿ, ನೀವು ನಿದ್ರಿಸುತ್ತಿರುವಾಗ ಅಚೇತನ ಜಾಗೃತವಾಗಿರುತ್ತದೆ. ನಿಮ್ಮ ಪ್ರೀತಿಪಾತ್ರ ಪತ್ನಿ ಮಾಯವಾಗಿ ಅಲ್ಲಿ ಕುಲಟೆ, ಮೋಸಗಾತಿ ಪತ್ನಿ ಮೂಡಿಬರುತ್ತಾಳೆ. ಅವಳನ್ನು ನೀವು ಸಹಿಸಲಾರಿರಿ, ಅದಕ್ಕೆಂದೇ ಆಕೆಯನ್ನು ಕೊಲ್ಲಲು ಪ್ರಯತ್ನಿಸುತ್ತೀರಿ."

"ನಿಮ್ಮ ಮಾತು ನನಗರ್ಥವಾಗುತ್ತಿಲ್ಲ ಮೇಜರ್..."

"ಅದನ್ನು ನೀವು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗಬೇಡಿ. ಒಂದು ವಿಷಯ ಹೇಳಬೇಕೆಂದರೆ ದಯವಿಟ್ಟು ಒಂದು ಬಾರಿ ನಿಮ್ಮ ಮೆಡಿಕಲ್ ಚೆಕಪ್ ಆಗಬೇಕು. ನನ್ನ ಮಿತ್ರರೊಬ್ಬರಿದ್ದಾರೆ. ಡಾಕ್ಟರ್ ಶಾಹ ಅವರ ಬಳಿ ನಾಳೆ ಸಾಯಂಕಾಲ ಹೋಗುವಾ..."

"ನೋ... ನಾನು ಬರಲಾರೆ... ನನಗೇನೂ ಆಗಿಲ್ಲ. ನಾನು ಆರಾಮ

ವಾಗಿದ್ದೇನೆ."

"ನಿಮಗೇನೂ ಆಗಿಲ್ಲ ಡಿಯರ್...ದಯವಿಟ್ಟು ಹೇಮಂತ ಹೇಳಿದಂತೆ ಕೇಳಿ ನಿಮಗಾಗಿ ಅಲ್ಲದಿದ್ದರೂ ನನಗಾಗಿಯಾದರೂ ಒಪ್ಪಿಕೊಳ್ಳಿ."

"ಆಲ್‌ರೈಟ್ ಡಾರ್ಲಿಂಗ್ ... ನೀನು ಹೇಳಿದಂತೆ ಆಗಲಿ."

"ಥ್ಯಾಂಕ್ಯೂ ಪ್ರೊಫೆಸರ್ ನಾಳೆ ಸಾಯಂಕಾಲ ಆರು ಗಂಟೆಗೆ ನಾನು ಬರುತ್ತೇನೆ. ದಯವಿಟ್ಟು ಸಿದ್ಧವಾಗಿರಿ."

ಅಷ್ಟರಲ್ಲಿ ಹೊರಗಡೆ ಕಾರಿನ ಹಾರನ್ ಆಯಿತು. ಶಾಂತಿ ಕುಳಿತಲ್ಲಿಂದಲೇ ಕಿಟಕಿಯಲ್ಲಿ ದೃಷ್ಟಿ ಹಾಯಿಸಿದಳು. ಗೇಟಿನ ಮುಂದೆ ಟ್ಯಾಕ್ಸಿಯೊಂದು ಬಂದು ನಿಂತಿತ್ತು. ಅದರಿಂದ ಕೆಳಗೆ ಇಳಿಯುತ್ತಿದ್ದ ಮಧ್ಯ ವಯಸ್ಸಿನವರೊಬ್ಬರನ್ನು ಕಂಡು ಆಕೆ ಗಟ್ಟಿಯಾದ ಧ್ವನಿಯಲ್ಲಿ ನುಡಿದಳು. "ಓಹ್! ಡ್ಯಾಡಿ ಬಂದರು..."

"ಮಿಸೆಸ್ ಶಾಂತಿ...ನಿಮ್ಮ ತಂದೆಯವರ ಮುಂದೆ ಈ ವಿಷಯ ಕುರಿತು ಏನೂ ಮಾತಾಡಬೇಡಿ ನಾನಿನ್ನು ಬರುತ್ತೇನೆ."

ಪ್ರೊಫೆಸರರಿಗೆ 'ಬಾಯ್' ಹೇಳಿ ಹೇಮಂತ ಶಾಂತಿಯ ಹಿಂದೆಯೆ ಕೆಳಗೆ ಬಂದ. ಅಷ್ಟರಲ್ಲಿ ಕ್ಯಾಪ್ಟನ್ ಆನಂದ ಮನೆಯ ಒಳಗೆ ಬಂದಿದ್ದರು. ಶಾಂತಿ ಅವರ ಪರಿಚಯ ಮಾಡಿಕೊಟ್ಟಳು. ಹೇಮಂತ ಅವರ ಕೈ ಕುಲುಕಿ ವಂದನೆ ಸಲ್ಲಿಸಿ, ಹೊರಗೆ ಬಂದು ತನ್ನ ಕಾರಿನತ್ತ ನಡೆದ. ಆತ ಮನೆಗೆ ಬಂದಾಗ ಆಗಲೇ ರಾತ್ರಿ ಎಂಟೂವರೆ. ಕೈಕಾಲು ಮುಖ ತೊಳೆದುಕೊಂಡು ಒಂದು ಕಪ್ ಕಾಫಿ ಕುಡಿದು ವರಾಂಡದಲ್ಲಿ ಕುಳಿತುಕೊಳ್ಳುತ್ತಿದ್ದಂತೆ... ಒಂದರ ಹಿಂದೆ ಒಂದು ವಾಹನಗಳು ಬಂದು ನಿಂತವು. ಮುಂದಿದ್ದ ಟ್ಯಾಕ್ಸಿಯಿಂದ ಸುಷ್‌ಮಾ ಇಳಿದರೆ ಹಿಂದೆ ಅಶೋಕನ ಮೋಟಾರ್ ಬೈಕ್ ಇತ್ತು. ಇಬ್ಬರೂ ಹೇಮಂತ ಕುಳಿತಲ್ಲಿಗೆ ಬಂದು ವಂದಿಸಿ ತಾವು ಎರಡು ಕುರ್ಚಿ ಎಳೆದು ತಂದು ಕುಳಿತುಕೊಂಡರು. ಅವರಿಬ್ಬರೂ ತಮ್ಮ ತಮ್ಮ ವರದಿ ಸಲ್ಲಿಸಲು ಆತುರರಾಗಿದ್ದುದು ಕಂಡು ಮೇಜರ್ ಮನದಲ್ಲಿಯೇ ಸಂತೋಷಪಟ್ಟ.

"ಲೇಡೀಸ್ ಫಸ್ಟ್...ಮೊದಲು ಸುಷ್‌ಮಾ ನೀನು ಹೇಳು." ಅಶೋಕನ ಮುಖ ಹರಳೆಣ್ಣೆ ಕುಡಿದಂತಾಯಿತು. ಸುಷ್‌ಮಾ ಹೆಮ್ಮೆಯಿಂದ ಅವನ ಕಡೆ ದೃಷ್ಟಿ ಬೀರಿ ಹೇಳಲಾರಂಭಿಸಿದಳು:

"ನಾನು ಹತ್ತೂವರೆಯಿಂದ ಪ್ರೊಫೆಸರ್‌ರನ್ನ ಹಿಂಬಾಲಿಸಿದೆ. ಅವರು ಕಾರಿನಲ್ಲಿ ನೇರವಾಗಿ ಕಾಲೇಜಿಗೆ ಹೋದರು. ಸಾಯಂಕಾಲ ನಾಲ್ಕೂವರೆಗೆ ಕಾಲೇಜಿನಿಂದ ಹೊರಗೆ ಬಂದವರು ಬೇರೆಲ್ಲಿಗೂ ಹೋಗದೆ ಮನೆಗೆ ಬಂದರು.

ನಾನು ಬರುವ ವರೆಗೂ ಅವರು ಮನೆಯಲ್ಲಿಯೇ ಇದ್ದರು. ಸಂಶಯಕ್ಕೆ ಆಸ್ಪದವಾಗುದ ಯಾವ ಲಕ್ಷಣಗಳೂ ನನಗೆ ಕಂಡು ಬರಲಿಲ್ಲ. ನಾನು ಹತ್ತೆಂಟು ಕಾಲೇಜು ತರುಣಿಯರನ್ನು ವಿಚಾರಿಸಿದೆ, ಯಾರೊಂದಿಗೂ ಲವ್ ಅಫೇರ್ ಇಲ್ಲ. ತಾವಾಯಿತು ತಮ್ಮ ಕೆಲಸವಾಯಿತು ಎಂದುಕೊಂಡ ಸಾಧುಪ್ರಾಣಿ, ಎಂದು ತಿಳಿಯಿತು ಅಷ್ಟೇ.

"ಪಿಸ್... ಇಲ್ಲಿಯವರೆಗೂ ನೊಣ ಜಾಡಿಸುತ್ತಾ ನಿಂತು ಈಗ ಬಂದಿದ್ದಾರೆ ಬಾಯಿಯವರು."

ತಾತ್ಸಾರದಿಂದ ನುಡಿದ ಅಶೋಕ. ಸುಟ್ಟು ಬೆಂಕಿಯಾದ ಸುಷ್ಮಾ ಮುಷ್ಟಿ ಮಾಡಿ ಅವನ ಬೆನ್ನ ಮೇಲೆ ಗುದ್ದಿ "ನೀನು ಮಹಾಶೂರ ನಿನ್ನ ವೀರಗಾಥೆ ಹೇಳು" ಎಂದಳು. ಅವರ ತಂಟೆಯನ್ನು ಪ್ರೀತಿಯಿಂದ ನೋಡುತ್ತ ಕುಳಿತಿದ್ದ ಹೇಮಂತ ಸಹ ತಲೆಯಾಡಿಸಿದಾಗ ಅಶೋಕ ಪ್ರಾರಂಭ ಮಾಡಿದ:

"ಮೂರು ಗಂಟೆಯ ವರೆಗೂ ನಾನು ಮನೆಯ ಹೊರಗೆ ಕಾದಿದ್ದೆ. ಶಾಂತಿ ಮೂರೂವರೆಗೆ ಹೊರಗೆ ಬಂದಳು. ಬಹುಷಃ ಪೇಟೆಗೆ ಹೋಗುತ್ತಿರಬೇಕು ಎಂದುಕೊಂಡೆ. ಹುಬ್ಬಳ್ಳಿ ಟೋಲ್‌ನಾಕಾದ ವರೆಗೆ ನಡೆಯುತ್ತ ಬಂದು ಅಲ್ಲಿಂದ ರಿಕ್ಷಾ ಹಿಡಿದಳು. ನಾನು ಬೈಕ್‌ನಿಂದ ಹಿಂಬಾಲಿಸಿದೆ. ಮೊದಲು ಸ್ವಲ್ಪ ತರಕಾರಿ ತೆಗೆದುಕೊಂಡು ನಂತರ ಬಾಳಿಗಾ ಔಷಧಿ ಅಂಗಡಿಯಿಂದ ಆಕೆ ಕೆಲವು ಔಷಧಿಗಳನ್ನು ಕೊಂಡಳು ಆಮೇಲೆ ಮಿಶ್ರಾ ಅಂಗಡಿಯಲ್ಲಿ ಮಿಠಾಯಿ ತೆಗೆದುಕೊಂಡು ಬರುತ್ತಿರುವಾಗ ಟೌನ್ ಪೋಲಿಸ್ ಠಾಣೆಯ ಎದುರು ಓರ್ವ ಯುವಕ ಅವಳನ್ನು ತಡೆದ."

ಅಲ್ಲಿಯ ವರೆಗೂ ಹೇಳುತ್ತಾ ಬಂದಿದ್ದ ಅಶೋಕ ಬೇಕೆಂತಲೇ ಅಲ್ಲಿ ಅರ್ಧಕ್ಕೆ ನಿಲ್ಲಿಸಿ ಗಂಟಲು ಸರಿಪಡಿಸಿಕೊಳ್ಳುವ ನೆವಮಾಡಿ ಸುಷ್ಮಾಳತ್ತ ನೋಡಿದ, ಆಕೆಯ ಮುಖದ ಮೇಲೆ ಕುತೂಹಲ ಮೂಡಿತ್ತು. ಮೇಜರ್ ಮೆಚ್ಚಿಕೆಯಿಂದ ಅಶೋಕನೆಡೆ ನೋಡುತ್ತ, "ನಿನ್ನ ನಟನೆ ಸಾಕು. ಪುರಾಣ ಮುಂದುವರೆಸು ನಿನ್ನ ಗತ್ತೆನ್ನೆಲ್ಲ ನಾನು ಬಲ್ಲೆ" ಎಂದ. ಸುಷ್ಮಾ ಖಿಸಕ್ ಎಂದು ನಕ್ಕಳು. "ಏಯ್ ಹೀಗೇ ನಗು... ನಗು, ನಗುವಿನ ಬಣ್ಣ ಆಮೇಲೆ ತಿಳಿಯುತ್ತದೆ" ಎಂದು ಹಾಸ್ಯ ಮಾಡುತ್ತ ಅಶೋಕ ಮುಂದುವರೆಸಿದ.

"ಬಹಳವೆಂದರೆ ಆತನಿಗೆ ಇಪ್ಪತ್ತೈದು ಇಪ್ಪತ್ತಾರು ವರ್ಷಗಳಿರಬೇಕು. ನೋಡಲು ತುಂಬಾ ಸುಂದರ. ಆತ ಆಕಸ್ಮಿಕವಾಗಿ ಭೇಟಿಯಾದನೋ ಬೇಕೆಂತಲೇ ಭೇಟಿಯಾದನೋ ನಾ ಅರಿಯೆ, ಸ್ವಲ್ಪ ಹೊತ್ತು ಅವರು ಅಲ್ಲಿಯೇ ಮಾತನಾಡುತ್ತಾ ನಿಂತಿದ್ದು ಅಲ್ಲಿಂದ ನಡೆಯುತ್ತಾ ಧಾರವಾಡ ರೆಸ್ಟೋರೆಂಟ್

ವರೆಗೆ ಬಂದರು. ಕಾಫಿ ತಿಂಡಿಯಾದ ಮೇಲೆ ಶಾಂತಿ ಅಲ್ಲಿಂದಲೇ ರಿಕ್ಷಾ ಮಾಡಿಕೊಂಡು ಮನೆಯ ಕಡೆ ನಡೆದಳು. ಅವರು ರಿಕ್ಷಾದವನಿಗೆ ಸಾರಸ್ವತಪುರವೆಂದು ಹೇಳುವುದು ನನಗೆ ಕೇಳಿಸಿತು. ಹೀಗಾಗಿ ನಾನು ಶಾಂತಿಯ ಬದಲು ಅಪರಿಚಿತ ತರುಣನನ್ನು ಹಿಂಬಾಲಿಸಲು ನಿರ್ಧರಿಸಿದೆ."

"ಗುಡ್, ನೀನು ಸರಿಯಾದ ನಿರ್ಣಯ ತೆಗೆದುಕೊಂಡೆ". ಹೇಮಂತನ ಮಾತಿಗೆ ಉಬ್ಬಿಹೋದ ಅಶೋಕ ಸುಷ್ಮಾಳ ಕಡೆ ನೋಡಿ ನಕ್ಕ. ಆಕೆ ಹೆಬ್ಬೆಟ್ಟು ತೋರಿಸಿ ಮುಖ ಕಿವುಚಿದಳು, ಅಶೋಕ ಮುಂದುವರೆಸಿದ, "ಆ ತರುಣನೂ ಸಹ ರಿಕ್ಷಾ ಮಾಡಿಕೊಂಡು ಸಪ್ತಾಪುರದ ಕಡೆ ನಡೆದ. ಜಯನಗರದ ಎರಡನೇ ಕ್ರಾಸಿನಲ್ಲಿ ರಿಕ್ಷಾದಿಂದಿಳಿದು ಬೀಗ ಹಾಕಿದ ಮೂರು ರೂಮಿನ ಒಂದು ಮನೆಯೆದುರು ನಿಂತ. ನಂತರ ಗೇಟ್ ತೆಗೆದು ಒಳಗೆ ಪ್ರವೇಶಿಸಿದ. ನಾನು ಮೋಟಾರ್ ಬೈಕ್ ನಿಧಾನವಾಗಿ ಓಡಿಸುತ್ತ ಆ ಮನೆಯೆದುರು ಬಂದು ನಿಲ್ಲಿಸಿದೆ. ಕೆಳಗಿಳಿದು ಗಾಡಿ ಕೆಟ್ಟಿದೆ ಎಂಬ ಸಂಶಯ ಬರುವಂತೆ ವರ್ತಿಸಿದೆ. ಎರಡು ಮೂರು ಬಾರಿ ಕಿಕ್ ಹೊಡಿದೆ. ನನ್ನ ಊಹೆ ಸರಿಯಾಯಿತು. ಒಳಗಿನ ತರುಣ ಬಂದು ಏನಾಗಿದೆ ಎಂದು ಕೇಳಿದ. "ಬಹುಶಃ ಕಾರ್ಬನ್ ಸಿಕ್ಕಿರಬೇಕು" ಎಂದೆ, ಅಲ್ಲಿಂದ ಮಾತಿಗೆ ಎಳೆದೆ. ಆತನ ಹೆಸರು ಸುಧಾಕರ್, ಅವನೊಬ್ಬ ಮನೋರೋಗ ತಜ್ಞ. 'ಹಿಪ್ನೊಟಿಜಂ' ನಲ್ಲಿ ಎತ್ತಿದ ಕೈ, ಅದರ ಸಹಾಯದಿಂದ ಎಷ್ಟೋ ವ್ಯಾಧಿಗಳನ್ನು ಸಹ ಹೋಗಲಾಡಿಸಿದ್ದಾನಂತೆ. ಜರ್ಮನ್ ಹಾಸ್ಪಿಟಲ್‌ನಲ್ಲಿ ಕೇವಲ ಒಂದು ವಾರದ ಹಿಂದೆ ಗೌರವ ವೈದ್ಯನೆಂದು ಕೆಲಸ ಮಾಡುತ್ತಲಿದ್ದಾನೆ. ಸುಭಾಷ್ ಮಾರ್ಕೆಟಿನಲ್ಲಿ ಅಂಗಡಿಯೊಂದು ದೊರೆತಿದ್ದು ಶೀಘ್ರದಲ್ಲಿ ಆಸ್ಪತ್ರೆ ತೆರೆಯಲಿದ್ದಾನೆ."

"ಶಾಂತಿಯ ಬಗ್ಗೆ ನೀನು ಅವನನ್ನು ವಿಚಾರಿಸಿದೆಯಾ?"

"ನನ್ನನ್ನು ಅಷ್ಟು ಹುಚ್ಚನೆಂದು ತಿಳಿದಿರುವಿರಾ? ಆಕೆಯ ಬಗ್ಗೆ ವಿಚಾರಿಸಿದ್ದರೆ ಆತನಿಗೆ ನನ್ನ ಮೇಲೆ ಸಂಶಯ ಬರುತ್ತಿತ್ತು. ನಾನು ಅವನನ್ನು ಹಿಂಬಾಲಿಸಿಕೊಂಡು ಬಂದಿರುವೆನೆಂದು ಆತ ಸುಲಭವಾಗಿ ಗ್ರಹಿಸುತ್ತಿದ್ದ. ಅದಕ್ಕಾಗಿ ಆ ಗೋಜಿಗೆ ಹೋಗಲಿಲ್ಲ, ಅಲ್ಲಿಂದ ನೇರವಾಗಿ ಸಾರಸ್ವತಪುರಕ್ಕೆ ಬಂದೆ ಈ ಪೀಡೆಯೂ ಸಹ ಅಲ್ಲಿಯೇ ಇತ್ತು. ಇಷ್ಟರ ವರೆಗೂ ಅಲ್ಲಿದ್ದು ಈ ಕಡೆಗೆ ಬಂದೆ."

" ಗುಡ್...ನಿಮ್ಮಿಬ್ಬರ ವರದಿ ಕೇಳಿ ನನಗೆ ತುಂಬಾ ಸಂತಸವಾಗಿದೆ. ಒಂದು ದಿನದಲ್ಲಿ ಇಷ್ಟು ಸಾಧಿಸಿದ್ದು ಸಾಕು. ಮಿಕ್ಕಿದೆಲ್ಲ ನಾಳೆ ನೋಡುವಾ ಈಗ ಊಟಕ್ಕೆ ನಡೆಯಿರಿ."

ಮೂರು ಜನರು ಮೇಲಿದ್ದರು.

## 6. ಹೇಮಂತನ ಸಾಂತ್ವನ

ಮರುದಿನ ಸಾಯಂಕಾಲ ಆರು ಗಂಟೆಗೆ ಹೇಮಂತ ಪ್ರೊಫೆಸರರ ಬಳಿ ಹೋಗಬೇಕಾಗಿತ್ತೇನೋ ನಿಜ. ಆದರೆ ಸಂಜೆ ಹೋಗುವ ಬದಲು ಮುಂಜಾನೆ ಎಂಟು ಗಂಟೆಗೇ ಹೋಗಬೇಕಾದ ಪ್ರಸಂಗ ಒದಗಿತು. ಬೆಳಿಗ್ಗೆ ಎದ್ದು ಒಂದು ಗಂಟೆ ವ್ಯಾಯಾಮ ಮಾಡಿದ ನಂತರ ಸ್ನಾನ ಮಾಡಿ, ಅಶೋಕ ಹಾಗೂ ಸುಷ್ಮಾರೊಂದಿಗೆ ಉಪಹಾರ ಸೇವಿಸುತ್ತಿರುವಾಗಲೇ ಫೋನಿನ ಗಂಟೆ ಕರೆಯಿತು.

ಆಗಲೇ ಉಪಹಾರ ಮುಗಿಸಿ ಹೇಮಂತ ಕಾಫಿ ಕುಡಿಯುತ್ತಿದ್ದುದರಿಂದ ಆತನೇ ಮೇಲೆದ್ದು ಪಜಾರದಲ್ಲಿ ಫೋನಿನ ಬಳಿ ಬಂದು ರಿಸೀವರ್ ಎತ್ತಿ "ಹಲೋ ಹೇಮಂತ್ ದಿಸ್ ಎಂಡ್." ಎಂದ. ಆ ಕಡೆಯಿಂದ ಶಾಂತಿ ಮಾತನಾಡುತ್ತಿದ್ದಳು. ಅವಳ ಧ್ವನಿ ಭಾರವಾಗಿತ್ತು. ಅಷ್ಟೇ ಅಲ್ಲ... ಆಕೆಯಿಂದ ಸರಿಯಾಗಿ ಮಾತನಾಡಲೂ ಸಹ ಆಗುತ್ತಿರಲಿಲ್ಲ.

ಕೇವಲ ಹಲೋ ಹಲೋ ಎನ್ನುತ್ತಿದ್ದಳೇ ಹೊರತು ಅವಳ ಬಾಯಿಯಿಂದ ಮುಂದೆ ಯಾವ ಶಬ್ದಗಳೂ ಹೊರಡುತ್ತಿರಲಿಲ್ಲ. ಹೇಮಂತನಿಗೆ ಸ್ವಲ್ಪ ಗಾಬರಿ ಎನಿಸಿತು.

ಆತ ಶಾಂತಿಗೆ ಧೈರ್ಯ ಹೇಳಿದ. ಸಮಾಧಾನದಿಂದ ವಿಷಯ ತಿಳಿಸಲು ಕೇಳಿಕೊಂಡ. ಇಷ್ಟಾದರೂ ಕೇವಲ ಎರಡೇ ಮಾತನಾಡಿದಳು. ಮುಂದೆ ಅವಳಿಂದ ಮಾತನಾಡಲಾಗಲಿಲ್ಲ.

"ಮೇಜರ್, ಡ್ಯಾಡಿ ಸತ್ತಿದ್ದಾರೆ. ಬೇಗ ಬನ್ನಿ." ಅಷ್ಟು ಹೇಳಬೇಕಾದರೆ ಅವಳಿಗೆ ಸಾಕು ಸಾಕಾಯಿತು. ಮುಂದೆ ಕೇವಲ ಅಳು, ಬಿಕ್ಕಳಿಕೆ ಅಷ್ಟೇ ಕೇಳಿಬಂದವು.

ಹೇಮಂತ ತನ್ನ ಕಿವಿಗಳನ್ನೇ ತಾನು ನಂಬದಂತಾಯಿತು. ರಾತ್ರಿ ಮಾತನಾಡಿಸಿಕೊಂಡು ಬಂದ ವ್ಯಕ್ತಿ ಬೆಳಿಗ್ಗೆ ಮರಣ ಹೊಂದಿದ ಎಂದರೆ ಒಮ್ಮೆಲೇ ಹೇಗೆ ನಂಬುವುದು? ಕ್ಯಾಪ್ಟನ್ ಆನಂದ ಇಲ್ಲಿಗೆ ಸಾಯಲೆಂದೇ ಬಂದರೆ?

ಅವರನ್ನು ಕರೆಸಲು ಶಾಂತಿಗೆ ಪ್ರೇರಣೆ ನೀಡಿದ ಹೇಮಂತ ಅವರ ಸಾವಿಗೆ ತಾನೇ ಕಾರಣನೆಂದೂ ಸಹ ಯೋಚಿಸುವಂತಾಯಿತು. ಮಂಕಾಗಿ ಕುಳಿತ ಅತ ಒಮ್ಮೆಲೆ ಮೇಲೆದ್ದ. ಕೈ ಕಟ್ಟಿಕೊಂಡು ಕೂಡುವಂತಿರಲಿಲ್ಲ. ಸುಷ್ಮಾ ಹಾಗೂ ಅಶೋಕರಿಗೆ ನಡೆದ ವಿಷಯ ತಿಳಿಸಿ ತನ್ನ ಜೊತೆ ಹೊರಡಲು ಹೇಳಿದ.

ಹೇಮಂತನಿಗಿಂತ ಮೊದಲೇ ಪೋಲೀಸರ ಆಗಮನವಾಗಿತ್ತು. ಜೀಪು ಒಂದು ಪೋರ್ಟಿಕೊದಲ್ಲಿ ನಿಂತಿದ್ದರೆ. ಗೇಟಿಗೆ ಹೊಂದಿಕೊಂಡು ರಸ್ತೆಯಂಚಿಗೆ ಒಂದು ವ್ಯಾನ್ ಅಲ್ಲದೆ ಒಂದು ಆಂಬ್ಯುಲೆನ್ಸ್ ಸಹ ನಿಂತಿದ್ದು ಕಂಡುಬಂತು.

ಮೇಜರ್ ಆಂಬ್ಯುಲೆನ್ಸ್ ಬಳಿ ಕಾರು ನಿಲ್ಲಿಸಿ ಕೆಳಗಿಳಿದ.

ಸುಷ್ಮಾ, ಅಶೋಕ ಅವನನ್ನು ಹಿಂಬಾಲಿಸಿದರು.

ಹಜಾರದಲ್ಲಿಯೇ ಕುಳಿತಿದ್ದ ಶಾಂತಿ ಹೇಮಂತನನ್ನು ಕಾಣುತ್ತಲೇ ಓಡಿ ಬಂದು ಅವನನ್ನು ತಬ್ಬಿಕೊಂಡು ಅಳಲಾರಂಭಿಸಿದಳು. ಹೇಮಂತ ಅವಳನ್ನು ಸಮಾಧಾನಪಡಿಸಿ. ಸುಷ್ಮಾಳನ್ನು ಅವಳ ಬಳಿಬಿಟ್ಟು ಮೇಲೆದ್ದ.

ಅಷ್ಟರಲ್ಲಿ ಇನ್ಸ್‌ಪೆಕ್ಟರ್ ಚಂದ್ರನಾಥ ಪಕ್ಕದ ರೂಮಿನಿಂದ ಹೊರಗೆ ಬಂದರು. ಹೇಮಂತನನ್ನು ಕಂಡು ಅವರ ಮುಖ ಅರಳಿತು. ಕೈಕುಲುಕಿ ವಂದನೆ ಸಲ್ಲಿಸಿದ ಅವರು ಹೇಮಂತನ ವಿನಂತಿಯ ಮೇರೆಗೆ ಅವನನ್ನು ಶವವಿದ್ದ ಕೋಣೆಗೆ ಕರೆ ತಂದರು. ಮಂಚದ ಮೇಲೆ ಹೇಮಂತ ದೃಷ್ಟಿ ಹರಿಸಿದ.

ಕ್ಯಾಪ್ಟನ್ ಆನಂದ ಕುತ್ತಿಗೆಯ ವರೆಗೂ ಹೊದ್ದುಕೊಂಡು ಮಲಗಿದ್ದರು. ಕಣ್ಣುಗಳು ಮುಚ್ಚಿಕೊಂಡಿದ್ದವು. ಅವರ ಮುಖದ ಮೇಲೆ ನೋವಿನ ಅಥವಾ ವೇದನೆಯ ಲಕ್ಷಣಗಳು ಕಂಡುಬರುತ್ತಿರಲಿಲ್ಲ. ಅವರ ಮುಖ ವಿಕಾರ ವಾಗಿರಲಿಲ್ಲ, ತುಂಟ ಮಗುವಿನ ಮುಖದ ಮೇಲೆ ಇರಬೇಕಾದ ತುಂಟತದನ ಕಳೆ ಅಲ್ಲಿ ಸುಳಿಯುತ್ತಿತ್ತು.

ಅವರು ಸತ್ತಿದ್ದಾರೆ ಎನ್ನುವುದೇ ನಂಬದಂತಿತ್ತು. ಗಾದಿಯ ಮೇಲೆ ಹಾಸಿದ ಶುಭ್ರ ಬಿಳಿ ವರ್ಣದ ಮೇಲು ಹೊದಿಕೆ ಸ್ವಲ್ಪವೂ ಸುಕ್ಕಾಗಿರಲಿಲ್ಲ. ಅದರ ಮೇಲೆ ಎಲ್ಲಿಯೂ ರಕ್ತದ ಕಲೆಗಳಿರಲಿಲ್ಲ. ಹೃದಯಕ್ರಿಯೆ ನಿಂತೋ ಅಥವಾ ಹೃದಯ ಸ್ತಂಭನದಿಂದಲೋ ಅವರ ಪ್ರಾಣ ಹೋಗಿರಬಹುದೆಂದು ಹೇಮಂತ ಯೋಚಿಸಿದ.

ಚಂದ್ರನಾಥ ಸರಕಾರಿ ವೈದ್ಯ ನಾರಾಯಣನ್ ಅವರೊಂದಿಗೆ ಗುಪ್ತಾ ಲೋಚನೆ ನಡೆಸಿದ್ದ. ಹೇಮಂತ ಎದೆಯ ಮೇಲೆ ಬಂದಿದ್ದ ಬಲಗೈ ಹಿಡಿದು ನೋಡಿದ. ಅಷ್ಟೇನೂ ತಣ್ಣಗೆ ಅನಿಸಲಿಲ್ಲ. ಜೀವ ಹೋಗಿ ಬಹಳವೆಂದರೆ ಎರಡು ಮೂರು ಗಂಟೆ ಕಳೆದಿರಬಹುದು.

ಸುತ್ತಲೂ ಒಂದು ಬಾರಿ ದೃಷ್ಟಿ ಬೀರಿದ, ಸಂಶಯಕ್ಕೆ ಆಸ್ಪದವಾಗುವ ಇಲ್ಲವೇ ಕ್ಯಾಪ್ಟನ್ ಆನಂದರ ಕೊಲೆಯಾಗಿದೆ ಎಂಬುದಕ್ಕೆ ಪುಷ್ಟಿ ನೀಡುವ ಯಾವ ಸುಳಿವೂ ಕಂಡು ಬರಲಿಲ್ಲ. ಅಶೋಕ ಹಾಗೂ ಸುಷ್‌ಮಾರ ಕಡೆ ಒಂದು ಬಾರಿ ಸೂಕ್ಷ್ಮ ದೃಷ್ಟಿ ಬೀರಿ ವಿಶಿಷ್ಟ ಸಂಜ್ಞೆ ಮಾಡಿದ. ಅದರ ಅರ್ಥ ತಿಳಿದ ಅವರಿಬ್ಬರೂ ಕೋಣೆಯಿಂದ ಹೊರಗೆ ನಡೆದರು. ಹೇಮಂತ ನಾರಾಯಣನ್ ಅವರ ಕಡೆ ಹೊರಳಿ, "ಮಿಸ್ಟರ್ ನಾರಾಯಣನ್ ನಿಮ್ಮ ಅಭಿಪ್ರಾಯದ ಪ್ರಕಾರ ಆನಂದ ಅವರ ಮರಣ ಹೇಗೆ ಸಂಭವಿಸಿದೆ ಎಂಬುದನ್ನು ಹೇಳುವಿರಾ?"

ನಾರಾಯಣ ಪೋಲಿಸ್ ಇಲಾಖೆಯಲ್ಲಿಯೇ ಸರಕಾರಿ ವೈದ್ಯರೆಂದು ಕಳೆದ ಹದಿನೆಂಟು ವರ್ಷಗಳಿಂದ ಕೆಲಸ ಮಾಡುತ್ತ ಬಂದವರು. ಅನೇಕ ಕೊಲೆಯ ಪ್ರಸಂಗಗಳಲ್ಲಿ ಅವರು ಹಾಗೂ ಹೇಮಂತ ಬಹಳ ಸಲ ಒಂದುಗೂಡಿ ಅಭಿಪ್ರಾಯ ಹಂಚಿಕೊಂಡಿದ್ದರು. ಹೇಮಂತ್ ಅಂದರೆ ಅವರಿಗೆ ತುಂಬಾ ಪ್ರೀತಿ. ಈಗ ಹೇಮಂತ ಅವರನ್ನು ನೇರವಾಗಿ ವಿಷಯಕ್ಕೆ ಎಳೆದಿದ್ದ.

ಒಂದುಕ್ಷಣ ಯೋಚಿಸಿ ನಾರಾಯಣ ನುಡಿದರು. "ಮೇಲ್ನೋಟಕ್ಕೆ ಇದು ಹೃದಯಕ್ರಿಯೆ ನಿಂತುಹೋದ ಸಾವು ಎಂದೆನಿಸುತ್ತದೆ ಮೇಜರ್. ಆದರೂ ನಾನು ಅದನ್ನು ಸ್ಪಷ್ಟಪಡಿಸಲಾರೆ. ಯಾವುದಕ್ಕೂ ಶವ ಪರೀಕ್ಷೆಯಾದ ನಂತರ ಹೇಳುವುದು ಒಳಿತು."

ಡಾಕ್ಟರರ ಮಾತು ಕೇಳುತ್ತ ಹೇಮಂತ ಸುತ್ತಲೂ ದೃಷ್ಟಿ ಹರಿಸುತ್ತಿದ್ದ. ಆಕಸ್ಮಿಕವಾಗಿ ಮೇಜಿನ ಕೆಳಗಿದ್ದ ಕಸದ ಬುಟ್ಟಿಯ ಬದಿಗೆ ಬಿದ್ದಿದ್ದ ಬಿಳಿಯ ಲೇಬಲ್ ಮೇಲೆ ಅವನ ದೃಷ್ಟಿ ಬಿದ್ದಿತು. ಅದನ್ನು ಕೈಗೆತ್ತಿಕೊಂಡು, ಲೇಬಲ್ ಮೇಲಿದ್ದ ಹೆಸರು ಓದುತ್ತಿದ್ದಂತೆ ಹೇಮಂತನ ತುಟಿಗಳು ಗೋಲವಾದವು. ಮೆಲ್ಲನೆ ಸಿಳ್ಳು ಹಾಕುತ್ತಾ ಆತ. "ಕ್ಯಾಪ್ಟನ್‌ರ ಮರಣ ನಿದ್ದೆ ಗುಳಿಗೆಗಳ ಸೇವನೆಯಿಂದಾಗಿದೆ." ಎಂದ. ಈ ರಹಸ್ಯ ಸ್ಫೋಟದಿಂದ ಎಲ್ಲರ ಮೇಲೆ ಸಿಡಿಲೆರಗಿದಂತಾಯಿತು.

"ನಿದ್ದೆ ಗುಳಿಗೆಗಳಿಂದಲೇ ಸಾವು ಸಂಭವಿಸಿದೆ ಎಂದು ನಿರ್ದಿಷ್ಟವಾಗಿ ನೀವು ಹೇಗೆ ಹೇಳುತ್ತೀರಿ?" ಚಂದ್ರನಾಥ ಪ್ರಶ್ನಿಸಿದ.

"ಈ ಲೇಬಲ್ ನೋಡಿ ಸುಲಭವಾಗಿ ಗ್ರಹಿಸಬಹುದು. ಐವತ್ತು ಗುಳಿಗೆಗಳ ಸೀಸೆಯ ಮೇಲಿರುವ ಲೇಬಲ್ ಇದು. ನಿನ್ನೆ ತಾನೇ ಹೊಸದಾಗಿ ಖರೀದಿಸಿ ತಂದಿದ್ದು. ಗುಳಿಗೆ ಹೊರಗೆ ತಗೆಯುವಾಗ ಬೆರಳು ತಗುಲಿ ಸೀಸೆಯ ಮೇಲಿದ್ದ ಲೇಬಲ್ ಕಿತ್ತಿ ಹೊರಗೆ ಬಂದಿದೆ. ಲೇಬಲನ್ನು ಕಸದ ಬುಟ್ಟಿಗೆ ಎಸೆದಾಗ ಅದು ಬುಟ್ಟಿಯೊಳಗೆ ಬೀಳದೆ ಹೊರಗೆ ಬಿದ್ದಿದೆ. ಡಾಕ್ಟರರೆ, ನಾನು ಖಚಿತ

ವಾಗಿ ಹೇಳಬಲ್ಲೆ. ನಿದ್ದೆ ಗುಳಿಗೆಗಳ ಸೇವನೆಯಿಂದಲೇ ಆನಂದ ಮರಣ ಹೊಂದಿದ್ದಾರೆಂದು, ಅವರೆಷ್ಟು ಗುಳಿಗೆಗಳನ್ನು ಸೇವಿಸಿದ್ದಾರೆಂಬುದನ್ನು ಮಾತ್ರ ನಾನು ಹೇಳಲಾರೆ. ಸ್ವಲ್ಪ ನಿಲ್ಲಿ. ಕೋಣೆಯನ್ನು ಚೆನ್ನಾಗಿ ಪರೀಕ್ಷಿಸಿದರೆ ಬಹುಷಃ ಸೀಸೆ ಸಿಕ್ಕರೂ ಸಿಗಬಹುದು."

ಹೇಮಂತನ ಸೂಚನೆಯ ಮೇರೆಗೆ ಚಂದ್ರನಾಥ ಹಾಗೂ ನಾರಾಯಣ ಅಲ್ಲದೆ ಚಂದ್ರನಾಥನ ಸಹಾಯಕ ಶೇಖರ್ ಸಹ ಕೋಣೆಯ ಪರಿಶೀಲನೆಯನ್ನು ಪ್ರಾರಂಭಿಸಿದರು. ಅರ್ಧ ಗಂಟೆಯ ಪರಿಶ್ರಮ ವ್ಯರ್ಥವಾಯಿತು. ನಿದ್ದೆ ಮಾತ್ರೆಗಳ ಸೀಸೆ ಎಲ್ಲಿಯೂ ದೊರೆಯಲಿಲ್ಲ. ಆದರೆ ಅಚ್ಚರಿಗೊಳಿಸುವಂತಹ ಎರಡು ವಸ್ತುಗಳು ಮಾತ್ರ ಅಲ್ಲಿ ದೊರೆತವು. ಎರಡು ಜೊತೆ ಸ್ಲಿಪರ್. ಒಂದು ಡೈರಿ, ಡೈರಿಯ ಮಧ್ಯೆ ಸುವರ್ಣ ಬಣ್ಣದ ಬಾಲ್‌ಪೆನ್. ಹೇಮಂತ ಡೈರಿ ಹೊರಳಿಸಿದ. ಅದರ ಮೇಲೆ ಪ್ರೊಫೆಸರ್ ಸತ್ಯೇಂದ್ರ ಎಂದು ಬರೆಯಲಾಗಿತ್ತು.

ಬಾಲ್‌ಪೆನ್ ಇಟ್ಟಿದ್ದ ಪೇಜು ನೋಡಲಾಗಿ ಹಿಂದಿನ ದಿನದ ತಾರೀಖಿನದಾಗಿತ್ತು. ಅದರ ಮೇಲೆ ಸತ್ಯೇಂದ್ರ. 'ಇಂದು ಕ್ಯಾಪ್ಟನ್ ಆನಂದ ಅವರ ಜೊತೆ ಮಹತ್ವದ ವಿಷಯವೊಂದರ ಬಗ್ಗೆ ಚರ್ಚಿಸಬೇಕು." ಎಂದು ಬರೆದಿದ್ದರು...

ಆ ಡೈರಿಯ ಲೇಖನದ ಪ್ರಕಾರ ಹಿಂದಿನ ರಾತ್ರಿ ಸತ್ಯೇಂದ್ರ. ಕ್ಯಾಪ್ಟನ್ ಆನಂದ ಅವರೊಂದಿಗೆ ಯಾವುದೋ ಒಂದು ವಿಷಯದ ಬಗ್ಗೆ ಚರ್ಚಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತಿತ್ತು. ಆ ಮಹತ್ವದ ವಿಷಯ ಯಾವುದು? ಎಂಬುದನ್ನು ಮಾತ್ರ ಅವರು ಎಲ್ಲಿಯೂ ಕಾಣಿಸಿರಲಿಲ್ಲ.

ಡೈರಿಯನ್ನು ಮೇಜಿನ ಮೇಲಿಟ್ಟು ಹೇಮಂತ ಎರಡೂ ಸ್ಲಿಪರ್ ಕಡೆ ದೃಷ್ಟಿ ಹರಿಸಿದ ಬೇರೆ ಬೇರೆ ಬಣ್ಣದ ಬೇರೆ ಸೈಜಿನ ಆ ಎರಡೂ ಸ್ಲಿಪರ್‌ಗಳಲ್ಲಿ ಒಂದು ಜೊತೆ ಆನಂದ ಅವರದೆಂಬುದು ನಿರ್ವಿವಾದದಿಂದ ಹೇಳಬಹುದಾಗಿತ್ತು ಉಳಿದ ಇನ್ನೊಂದು ಜೊತೆ ಯಾರದೆಂದು ಮಾತ್ರ ಊಹಿಸುವಂತಿರಲಿಲ್ಲ. ಅದನ್ನು ಕೇಳಿ ತಿಳಿದುಕೊಳ್ಳಬೇಕು ಎಂದು ಹೇಮಂತ ಯೋಚಿಸುತ್ತಿದ್ದಂತೆ ಅಶೋಕ ಹಾಗೂ ಸುಷ್ಮಾ ಕೋಣೆಗೆ ಪ್ರವೇಶಿಸಿದರು. ಅಶೋಕ ವಸ್ತ್ರದಲ್ಲಿ ಹಿಡಿದು ತಂದಿದ್ದ ವಸ್ತುವನ್ನು ಎಲ್ಲರೆದುರು ಹಿಡಿಯುತ್ತ "ಇದು ನನಗೆ ಪ್ರೊಫೆಸರರ ರೂಮಿನಲ್ಲಿ ದೊರೆಯಿತು," ಎಂದು ಹೇಳಿದ.

ಒಮ್ಮೆಲೇ ಎಂಟು ಕಣ್ಣುಗಳು ಅತ್ತ ಹೊರಳಿದವು. ಅದೊಂದು ಚಿಕ್ಕ ಸೀಸೆ, ಅದನ್ನು ನೋಡುತ್ತಲೇ ಹೇಮಂತ ಒಮ್ಮೆಲೇ ನುಡಿದ:

"ಓಹ್...ಇದು ನಿದ್ದೆಯ ಮಾತ್ರೆಗಳ ಸೀಸೆ. ನಾನು ಮೊದಲೇ ಹೇಳಿ

ರಲಿಲ್ಲವೇ ಸೀಸೆ ಇರಬೇಕೆಂದು. ಆದರೆ ಇದು ಸತ್ಯೇಂದ್ರನ ಕೋಣೆಯಲ್ಲಿ ಹೇಗೆ ಬಂದಿತು?"

''ಇದರ ಬಗ್ಗೆ ಪ್ರೊಫೆಸರನ್ನು ವಿಚಾರಿಸಿದಿರಾ?"

''ಅವರನ್ನು ವಿಚಾರಿಸುವಂತಿಲ್ಲ"

"ಏಕೆ?"

ಅವರು ದೀರ್ಘ ನಿದ್ದೆಯಲಿದ್ದಾರೆ. ನನಗೆ ತಿಳಿದಂತೆ ಅವರೂ ನಿದ್ದೆಯ ಮಾತ್ರೆ ಸೇವಿಸಿದ್ದಾರೆ. ಟೀಪಾಯ್ ಮೇಲಿದ್ದ ಹಾಲಿನ ಗ್ಲಾಸು ನೋಡಿ ಅವರು ಹಾಲಿನಲ್ಲಿ ಮಾತ್ರೆ ಸೇವಿಸಿ ಕುಡಿದಿರಬೇಕು ಎಂದು ನಾನು ಊಹಿಸಿದೆ."

''ಓಹ್ ನಿಮಗೆ ಹೇಳಲು ಮರೆತೇಬಿಟ್ಟೆ ನೋಡಿ," ಇನ್ಸ್‌ಪೆಕ್ಟರ್ ಚಂದ್ರನಾಥ ಮಧ್ಯ ಬಾಯಿ ಹಾಕಿ ಹೇಳಿದರು. "ಮಿಸೆಸ್ ಶಾಂತಿ ಫೋನು ಮಾಡುತ್ತಲೇ ನಾನು ಧಾವಿಸಿ ಬಂದೆ. ಕ್ಯಾಪ್ಟನ್ ಆನಂದ ಅಂತೂ ತೀರಿ ಹೋಗಿದ್ದರು, ಆದರೆ ಪ್ರೊಫೆಸರ್ ಮಾತ್ರ ಎಳ್ಳಷ್ಟೂ ಮಿಸುಕಾಡದೆ ಮಲಗಿದ್ದರು. ಅವರನ್ನು ಎಚ್ಚರಿಸಲು ನಾನು ಪ್ರಯತ್ನಿಸಿ ಸೋತೆ. ಆಗ ಶಾಂತಿ ಹೇಳಿದರು. "ಅವರಿಗೆ ಒಂದು ಬಗೆಯ ರೋಗವಿದೆಯೆಂದು ಒಮ್ಮೊಮ್ಮೆ ಇದೇ ರೀತಿ ಮಲಗಿ ಬಿಡುತ್ತಾರೆ. ಅವರನ್ನು ಎಚ್ಚರಿಸುವುದೇ ಕಠಿಣ ಎಂದು. "ನನಗೆ ಅರ್ಥವಾಯಿತು ಅವರ ದೀರ್ಘ ನಿದ್ರೆಯ ಗುಟ್ಟು."

ಹೇಮಂತ ಟೀಪಾಯ್ ಮೇಲಿದ್ದ ಹಾಲಿನ ಲೋಟವನ್ನು ಕೈಗೆ ಬಟ್ಟೆ ಸುತ್ತಿ ತೆಗೆದುಕೊಂಡ. ಕೆಳಗಡೆ ಸ್ವಲ್ಪ ಹಾಲು ಇದ್ದುದು ಕಂಡು ಬಂದಿತು. ಅದನ್ನು ಚಂದ್ರನಾಥನ ಕಡೆ ಕೊಡುತ್ತ "ಈ ಗ್ಲಾಸು ಹಾಗೂ ಪ್ರೊಫೆಸರರ ಕೋಣೆಯ ಗ್ಲಾಸೂ ಎರಡನ್ನೂ ರಾಸಾಯನಿಕ ಪರೀಕ್ಷೆಗೆ ಕಳಿಸಿ, ಇದರ ಮೇಲೆ ಮೂಡಿರುವ ಬೆರಳಿನ ಗುರುತು ತೆಗೆಯಲು ತಿಳಿಸಿ ಬಹಳ ಸಹಾಯ ಆಗಬಹುದು."

ಚಂದ್ರನಾಥ "ಆಗಲಿ" ಎನ್ನುತ್ತ ಗ್ಲಾಸು ತೆಗೆದುಕೊಂಡು ಶೇಖರನ ಕೈಗೆ ನೀಡಿದ. ಸುಷ್ಮಾ ಹೇಳಿದಳು:

"ನಿನ್ನೆ ರಾತ್ರಿ ಹತ್ತು ಗಂಟೆಯ ಸುಮಾರಿಗೆ ಕ್ಯಾಪ್ಟನ್ ಆನಂದ ಹಾಗೂ ಪ್ರೊಫೆಸರ್ ಸತ್ಯೇಂದ್ರ ಅವರ ಮಧ್ಯೆ ತಂಟೆ ಆಯಿತಂತೆ. ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸಿದರಂತೆ. ಶಾಂತಿ ಮಧ್ಯೆ ಪ್ರವೇಶಿಸಿ ಇಬ್ಬರನ್ನು ಸಮಾಧಾನ ಪಡಿಸಿದಳಂತೆ."

ಕೋಣೆಯಲ್ಲಿ ಬಾಂಬು ಹಾಕಿದಂತಾಯಿತು.

"ಈ ವಿಷಯ ನಿನಗಾರು ಹೇಳಿದರು?" ಹೇಮಂತ ಸುಷ್ಮಾಳಿಗೆ ಕೇಳಿದ.

"ಪಕ್ಕದ ಮನೆಯವರು, ಅವರ ಬೆಡ್‌ರೂಮಿನಿಂದ ಈ ಕೋಣೆಯಲ್ಲಿ ನಡೆಯುವದನ್ನು ಸುಲಭವಾಗಿ ನೋಡಬಹುದು. ಎರಡೂ ಕಿಟಕಿಗಳು ಎದುರು ಬದುರಾಗಿವೆ. ಒಂದು ಪ್ರಸಂಗದಲ್ಲಿಯಂತೂ ಕ್ಯಾಪ್ಟನ್ ಆನಂದ ತಮ್ಮ ವಾಕಿಂಗ್ ಸ್ಟಿಕ್ ಸಹ ಪ್ರೊಫೆಸರರ ಮೇಲೆ ಎತ್ತಿದ್ದನ್ನು ಅವರು ಕಂಡಿದ್ದರಂತೆ.

ವಿಷಯ ಬಹಳ ಗಂಭೀರವಾಗಿದೆ. ಮಿಸೆಸ್ ಶಾಂತಿ ಅವರನ್ನು ಕರೆಸು ವುದು ಅವಶ್ಯ.

ಇನ್ಸ್‌ಪೆಕ್ಟರ್ ಕೂಡಲೇ ಶಾಂತಿಯನ್ನು ಕರೆತರಲು ತನ್ನ ಕಾನ್ಸ್‌ಸ್ಟೇಬಲ್‌ಗೆ ಹೇಳಿದ.

## 7. ಸಂದೇಹದ ಸುಳಿ

ಎರಡೇ ನಿಮಿಷಗಳಲ್ಲಿ ಶಾಂತಿ ಬಂದಳು. ಅತ್ತು ಅತ್ತು ಅವಳ ಕಣ್ಣುಗಳು ಕೆಂಡಮುಂಡೆಯಂತಾಗಿದ್ದವು. ಅವಳಿಗೆ ಕುರ್ಚಿಯ ಮೇಲೆ ಕುಳಿತು ಕೊಳ್ಳಲು ಹೇಳಿ ಚಂದ್ರನಾಥ ನೇರವಾಗಿ ಕೇಳಿದ. "ನಿನ್ನೆ ರಾತ್ರಿ ನಿಮ್ಮ ತಂದೆಯವರೂ, ನಿಮ್ಮ ಪತಿಯೂ ಕೈ ಕೈ ಮಿಲಾಯಿಸಿದರು ಎಂದು ನನಗೆ ತಿಳಿದಿದೆ. ಇದು ನಿಜವೇ?"

ಶಾಂತಿಯ ಮುಖ ಒಮ್ಮೆಲೆ ಕಪ್ಪಿಟ್ಟಿತು.

"ಹೌದು" ಆಕೆ ಮೆಲುವಾಗಿ ನುಡಿದಳು.

"ಯಾವ ವಿಷಯಕ್ಕೆ ಅವರು ಜಗಳ ಕಾಯ್ದರು ಎಂಬುದು ನಿಮಗೆ ತಿಳಿದಿದೆಯೇ?"

"ಇಲ್ಲ. ಆಗ ನಾನು ಕೆಳಗೆ ಅಡಿಗೆ ಮನೆಯಲ್ಲಿದ್ದೆ. ಅವರ ಧ್ವನಿ ಕೇಳಿ ಮೇಲೆ ಬಂದೆ. ಅಷ್ಟರಲ್ಲಿ ಅವರು ಕೈ ಕೈ ಕೂಡಿಸಿದ್ದರು. ನಾನೇ ಮಧ್ಯ ಪ್ರವೇಶಿಸಿ ಜಗಳ ಬಿಡಿಸಿದೆ. ಸತ್ಯೇಂದ್ರ ತಮ್ಮ ಬೆಡ್‌ರೂಮಿಗೆ ಹೋದ. ನಾನು ಸ್ವಲ್ಪ ಹೊತ್ತು ತಂದೆಯವರಿಗೆ ಸಮಾಧಾನ ಹೇಳಿ ಕೆಳಗೆ ಬಂದೆ."

"ಆ ಮೇಲೆ?"

"ಎಲ್ಲಾ ಕೆಲಸ ಮುಗಿಸುವವರಲ್ಲಿ ಅರ್ಧ ಗಂಟೆ ಕಳೆಯಿತು. ನಮ್ಮ ತಂದೆಯವರಿಗೆ ಮಲಗುವ ಮುನ್ನ ಹಾಲು ಕುಡಿಯುವ ಅಭ್ಯಾಸ. ಅವ

ಕ್ಕೆಂದೇ ಲೋಟದಲ್ಲಿ ಬಿಸಿಹಾಲು ಹಾಕಿಕೊಂಡು ಅವರಿಗೆ ಕೊಡಲು ಹೊರಟೆ."

" ನಿಮ್ಮ ತಂದೆ ನಿಮ್ಮೆದುರೇ ಹಾಲು ಕುಡಿದರೇ?

"ಇಲ್ಲ, ಅವರು ಹಾಲು ಕುಡಿದದ್ದನ್ನು ನಾನು ಕಂಡಿಲ್ಲ."

"ಏನಿದು ನಿಮ್ಮ ವಿಚಿತ್ರ ಉತ್ತರ ."

ಚಂದ್ರನಾಥ ಅಬ್ಬರಿಸಿದ. ಹೇಮಂತ, ಗೊಂಬೆಯಂತೆ ನಿಂತಿದ್ದ ಶಾಂತಿ ಬೆದರಿ ಭೂಮಿಗಿಳಿದು ಹೋದಳು.

"ಹಾಲು ಕೊಡಲು ಹೊರಟೆ ಎಂದು ನೀವೇ ಹೇಳಿದಿರಿ. ಈಗ ಅವರು ಹಾಲು ಕುಡಿದದ್ದು ನಾನು ಕಂಡಿಲ್ಲ ಎಂದು ಹೇಳುತ್ತೀರಲ್ಲ?"

"ನಾನು ಹೇಳಿದ್ದು ಸರಿಯಾಗಿಯೇ ಇದೆ. ಹಾಲು ಕೊಡಲು ಹೊರಟೆ ಎಂದು ನಾನು ಹೇಳಿದೆ. ಕೊಟ್ಟೆ ಎಂದು ನಾನು ಹೇಳಿಲ್ಲವಲ್ಲ?" ಸಟಕ್ ಎಂದು ಶಾಂತಿ ಉತ್ತರಿಸುವಾಗ ಚಂದ್ರನಾಥ ತಬ್ಬಿಬ್ಬಾಗಿ ಕೇಳಿದ, "ಅಂದರೆ ನಿಮ್ಮ ತಂದೆಯವರ ಕೈಗೆ ನೀವು ಹಾಲು ಕೊಡಲಿಲ್ಲ."

"ಇಲ್ಲ."

"ಹಾಗಾದರೆ ಯಾರು ಕೊಟ್ಟರು?"

"ಸತ್ಯೇಂದ್ರ!"

ಹೇಮಂತನ ಜೊತೆಗೆ ಕೋಣೆಯಲ್ಲಿದ್ದವರೆಲ್ಲ ಬೆಚ್ಚಿಬಿದ್ದರು. ಚಂದ್ರನಾಥ ಅಬ್ಬರಿಸಿದ, "ಸುಳ್ಳು... ಅರ್ಧಗಂಟೆಯ ಹಿಂದೆ ಖಡಾಖಡಿ ಬಡಿದಾದ ಸತ್ಯೇಂದ್ರ ಅದೆಂತು ಆನಂದರಿಗೆ ಹಾಲು ಕೊಡಲು ಮುಂದಾದ?"

"ನಾನು ಹೇಳುತ್ತಿರುವುದು ಪೂರ್ತಿ ಸತ್ಯ ಇನ್ಸ್‌ಪೆಕ್ಟರ್. ಮೊದಲು ನನಗೂ ಆಶ್ಚರ್ಯವಾಯಿತು. ಆದರೆ ಸತ್ಯೇಂದ್ರ ಏನು ಹೇಳಿದರು ಗೊತ್ತಿದೆಯೇ?"

"ಏನೆಂದು ಹೇಳಿದರು?"

"ಯಾವುದೋ ವಿಷ ವೇಳೆಯಲ್ಲಿ ನಾನು ಅವರೊಂದಿಗೆ ಜಗಳ ಕಾಯ್ದೆ, ಈಗ ಪಶ್ಚಾತ್ತಾಪವಾಗಿದೆ. ಹಾಲು ಕೊಡುವ ನೆಪ ಮಾಡಿಕೊಂಡು ಹೋಗಿ ನಾನವರ ಕ್ಷಮೆ ಕೇಳಿಕೊಳ್ಳುತ್ತೇನೆ ಎಂದರು. ನನಗೂ ಅವರ ತರ್ಕ ಸಂಗತವೆನಿಸಿತು. ಹೀಗಾಗಿ ಹಾಲಿನ ಲೋಟವನ್ನು ನಾನವರ ಕೈಗೆ ಕೊಟ್ಟು ಮಲಗಲು ಹೋದೆ,

ಆಮೇಲೆ?"

"ಆಮೇಲೇನು? ಬೆಳಿಗ್ಗೆ ಎಚ್ಚರವಾದಾಗ ಆಗಲೇ ಆರು ಗಂಟೆಯಾಗಿತ್ತು. ನನ್ನ ಪತಿ ಸತ್ಯೇಂದ್ರ ಯಾವಾಗ ಬಂದು ಮಲಗಿದ್ದರೋ ಗೊತ್ತಿಲ್ಲ. ನಾನು

ಎದ್ದು ಕೆಳಗೆ ಬಂದೆ. ಕಾಫಿ ಮಾಡಿಕೊಂಡು ಏಳು ಗಂಟೆಯ ಸುಮಾರಿಗೆ ತಂದೆಯವರ ಕೋಣೆಗೆ ಹೋದೆ. ಯಾವಾಗಲೂ ಒಂದು ಬಾರಿ ಕೂಗಿದರೆ ಸಾಕು ಎದ್ದು ಕುಳಿತುಕೊಳ್ಳುವ ನಮ್ಮ ತಂದೆ ನಾನು ಹತ್ತೆಂಟು ಬಾರಿ ಕೂಗಿದರೂ ಏಳಲಿಲ್ಲ. ಮತ್ತಿಷ್ಟು ಭಯವಾಯಿತು. ಮರಳಿ ಬೆಡ್‌ರೂಮಿಗೆ ಬಂದು ಸತ್ಯೇಂದ್ರನನ್ನು ಎಬ್ಬಿಸಿದೆ, ಅವರೂ ಏಳಲಿಲ್ಲ. ಮತ್ತಿಷ್ಟು ಭಯವಾಗಿ ಪಕ್ಕದ ಮನೆಯವರನ್ನು ಕರೆದೆ. ಅವರು ಬಂದು ನನ್ನ ತಂದೆ ಮೃತರಾಗಿದ್ದಾರೆ ಸತ್ಯೇಂದ್ರ ದೀರ್ಘ ನಿದ್ರೆಯಲ್ಲಿದ್ದಾರೆ ಎಂದು ಹೇಳಿದರು. ಆಕಾಶವೇ ಕಳಚಿ ನನ್ನ ಮೈಮೇಲೆ ಬಿದ್ದಂತಾಯಿತು. ನಿಮಗೆ ಫೋನು ಮಾಡಿದೆ."

"ನಿಮ್ಮ ತಂದೆ ಮಿಲಿಟರಿಯಲ್ಲಿದ್ದವರು ತಾನೆ?"

"ಹೌದು ಅಖಂಡ ಇಪ್ಪತ್ತು ವರ್ಷ ಸೇವೆ ಸಲ್ಲಿಸಿದ್ದಾರೆ."

"ಅಂದಮೇಲೆ ನಿನ್ನೆ ನಡೆದ ಜಗಳದಿಂದ ಮನನೊಂದು ತಮ್ಮ ಜೀವ ಕೊನೆಗಾಣಿಸಿಕೊಳ್ಳಲು ನಿದ್ದೆ ಮಾತ್ರೆ ಸೇವಿಸಿರಲು ಸಾಧ್ಯವಿಲ್ಲ ಅಲ್ಲವೆ?"

"ನನಗೆ ತಿಳಿಯದು."

"ಹಾಂ... ಅಂದಹಾಗೆ ನಿಮ್ಮ ತಂದೆಗೆ ನಿದ್ದೆ ಮಾತ್ರೆ ಸೇವಿಸುವ ಅಭ್ಯಾಸವಿತ್ತೇ?"

''ಇಲ್ಲ... ನಾನೆಂದೂ ಅವರು ನಿದ್ದೆ ಮಾತ್ರೆಯನ್ನು ಸೇವಿಸಿದ್ದನ್ನು ಕಂಡಿಲ್ಲ."

''ಹಾಗಾದರೆ ಈ ಸೀಸೆ ಹೇಗೆ ಬಂದಿತು? ಅವರಿಗೆ ಮಾತ್ರೆ ಯಾರು ನೀಡಿದರು? ನಿಮ್ಮ ಪತಿ ಸತ್ಯೇಂದ್ರ ನಿದ್ದೆ ಮಾತ್ರೆ ಸೇವಿಸುತ್ತಾರೆಯೇ? ಅವರೇನಾದರೂ ಈ ಸೀಸೆ ತಂದರೆ?"

"ನನಗೆ ತಿಳಿಯದು" ಅಸಹಾಯಕಳಾಗಿ ಶಾಂತಿ ನುಡಿದಳು. ಅವಳ ಮುಖದ ಮೇಲೆ ಚಿವುಟಿದರೆ ರಕ್ತ ಕಾಣಿಸುವಂತಾಗಿತ್ತು. ಹೇಮಂತನ ಸಂಶಯ ಗಾಢವಾಯಿತು.

ಚಂದ್ರನಾಥ ಬಲೆ ಎಸೆಯುತ್ತಿದ್ದಾನೆ, ಆ ಬಲೆ ಪ್ರೊಫೆಸರ್ ಸತ್ಯೇಂದ್ರ ಸುತ್ತ ಬಿಗಿಯುತ್ತಿದೆ ಎಂದು. ಒಮ್ಮೆಲೆ ಹೇಮಂತನಿಗೆ ಸ್ಲಿಪರಿನ ನೆನಪಾಯಿತು. ಶಾಂತಿಗೆ ಆ ಸ್ಲಿಪರ್ ತೋರಿಸುತ್ತ ಕೇಳಿದ, "ಶಾಂತಿ... ಈ ಸ್ಲಿಪರ್‌ಗಳನ್ನು ನೋಡಿ. ಇವು ಯಾರ ಸ್ಲಿಪರ್‌ಗಳೆಂದು ಹೇಳಿ."

ಒಂದು ಕ್ಷಣ ಅವುಗಳತ್ತ ನೋಡಿ ಶಾಂತಿ ಹೇಳಿದಳು, ''ಒಂದು ಜೊತೆ ತಂದೆಯವರದು ಇನ್ನೊಂದು..."

"ಹೂಂ ಹೇಳಿ... ಇನ್ನೊಂದು ಜೊತೆ ಯಾರದು?" ಕುತೂಹಲದಿಂದ

ಮಧ್ಯೆ ಬಾಯಿ ಹಾಕಿ ಚಂದ್ರನಾಥ ಕೇಳಿದ. ಶಾಂತಿ ಅನುಮಾನಿಸುತ್ತ ನುಡಿದಳು, "ಇನ್ನೊಂದು ಜೊತೆ ಸತ್ಯೇಂದ್ರನದು. ಅದು ಇಲ್ಲಿ ಹೇಗೆ ಬಂದಿತೋ ನನಗೆ ತಿಳಿಯದು."

''ಆಮೇಲೆ ಎಲ್ಲಾ ಅರ್ಥವಾಗುತ್ತದೆ," ವ್ಯಂಗ್ಯವಾಗಿ ನುಡಿದ ಚಂದ್ರ ನಾಥ; ಬಲೆ ಬಲವಾಗುತ್ತಿದೆ ಎಂದುಕೊಂಡ ಮನದಲ್ಲಿ ಹೇಮಂತ.

ಕಕ್ಕಾಬಿಕ್ಕಿಯಾದ ಶಾಂತಿ ಅವನೆಡೆ ನೋಡಿದಳು. ಹೆದರಬೇಡಿ, ಸುಮ್ಮನಿರಿ ಎಂಬ ಅರ್ಥ ಬರುವಂತೆ ಹೇಮಂತ ಕಣ್ಣನಲ್ಲಿಯೇ ಸಂಜ್ಞೆ ಮಾಡಿದ.

ಆಕೆಗೆ ಎಷ್ಟೋ ಧೈರ್ಯ ಬಂದಂತಾಯಿತು. ಚಂದ್ರನಾಥನಿಗೆ ಒಮ್ಮೆಲೆ ಸತ್ಯೇಂದ್ರನ ಡೈರಿ ನೆನಪು ಬಂದಿತು. ತಕ್ಷಣ ಅದನ್ನು ಶಾಂತಿಯ ಮುಂದೆ ಹಿಡಿದು, "ಈ ಡೈರಿ ಹಾಗೂ ಬಾಲ್‌ಪೆನ್ ಯಾರದೆಂದು ಹೇಳುವಿರಾ?" ಎಂದು ಕೇಳಿದ. ಸ್ವಲ್ಪ ಹೊತ್ತು ಅವೆರಡನ್ನು ದಿಟ್ಟಿಸಿದ ಆಕೆ ಹೇಳಿದಳು, "ಇವೆರಡೂ ಸತ್ಯೇಂದ್ರನವು."

"ಸ್ವಲ್ಪ ವಿಚಾರಿಸಿ ಹೇಳಿ ಶಾಂತಿ," ಅಷ್ಟರ ವರೆಗೂ ಮೌನವಾಗಿ ಕುಳಿತಿದ್ದ ಹೇಮಂತ ಮಧ್ಯೆ ನುಡಿದ. "ಡೈರಿಯ ಮೇಲಂತೂ ಪ್ರೊಫೆಸರರ ಹೆಸರಿದೆ. ಹೀಗಾಗಿ ಡೈರಿ ಅವರದೇ ಎಂಬುದು ನಿಶ್ಚಿತ.ಆದರೆ ಈ ಬಾಲ್‌ಪೆನ್ ಅವರದೇ ಎಂದು ಹೇಗೆ ಹೇಳುವಿರಿ?"

"ನಮ್ಮ ಮದುವೆಯ ವಾರ್ಷಿಕೋತ್ಸವದಂದು ನಾನು ಈ ಪೆನ್ನನ್ನು ಅವ ರಿಗೆ ಕಾಣಿಕೆಯಾಗಿ ನೀಡಿದ್ದೆ."

"ಸರಿ ಆದರೆ ಇವೆರಡು ಇಲ್ಲೇಕೆ ಬಂದವೆಂದು ಹೇಳುವಿರಾ?"

''ನನಗೆ ಗೊತ್ತಿಲ್ಲ.''

"ಸ್ವಲ್ಪ ಯೋಚಿಸಿ ಹೇಳಿ, ನೀವು ಹಾಲಿನ ಲೋಟ ಅವರ ಕೈಗೆ ನೀಡು ವಾಗ ಇವು ಅವರ ಬಳಿ ಇದ್ದವೇ?"

"ನನಗೆ ಚನ್ನಾಗಿ ನೆನಪಿದೆ. ಅವರು ಅಡಿಗೆ ಮನೆಗೆ ಬಂದಾಗ ಈ ಡೈರಿ ಅವರ ಎಡಗೈಯಲ್ಲಿತ್ತು, ಹಾಲಿನ ಲೋಟ ಬಲಗೈಯಲ್ಲಿ ಹಿಡಿದು ಮೇಲೆ ಹೋದರು. ಬಹುಷಃ ಮರಳಿ ಬರುವಾಗ ಮರೆತು ಬಂದಿರಬೇಕು."

''ಅವರ ಕೈಯಲ್ಲಿ ಕೇವಲ ಡೈರಿ ಇತ್ತೋ ಅಥವಾ ಅದರ ಜೊತೆ ನಿದ್ದೆ ಮಾತ್ರೆಯ ಸೀಸೆಯೂ ಇತ್ತೋ?"

''ಸೀಸೆ ನನ್ನ ದೃಷ್ಟಿಗೆ ಬೀಳಲಿಲ್ಲ'' ಇನ್ಸ್‌ಪೆಕ್ಟರ್ ಚಂದ್ರನಾಥರ ಮಾತಿಗೆ ಶಾಂತಿ ಉತ್ತರಿಸಿದಳು.

''ಸೀಸೆ ಕೈಯಲ್ಲಿಯೇ ಇರಬೇಕೆಂದು ಎಲ್ಲಿದೆ? ನೈಟ್‌ಗೌನಿನ ಜೇಬಿನ

ಲ್ಲಿಯೂ ಅದು ಇರಬಹುದಲ್ಲ."

''ಇನ್ಸ್‌ಪೆಕ್ಟರ್ ನಿಮ್ಮ ಮಾತಿನ ಅರ್ಥ ನನಗಾಗಲಿಲ್ಲ."

''ಎಲ್ಲಾ ಆಗುತ್ತೆ ನಿಧಾನವಾಗಿ. ಹಾಂ ಅಂದಹಾಗೆ ನಿಮ್ಮ ಪತಿ ಎದ್ದಿದ್ದಾರೆಯೇ ಎಂದು ನೋಡಿ ಹೇಳುತ್ತೀರಾ?''

"ಅವರು ಇನ್ನೂ ಒಂದು ಗಂಟೆ ಏಳರಾರರು.''

"ಅದೇನು ಅಷ್ಟು ನಿರ್ದಿಷ್ಟವಾಗಿ ಹೇಳುತ್ತೀರಿ?''

"ಏಕೆಂದರೆ ನಾನವರ ಹೆಂಡತಿ ಅದಕ್ಕೆ.''

ಓ.ಕೆ. ಓ.ಕೆ....ನಾನು ಒಂದೆರಡು ಗಂಟೆ ಬಿಟ್ಟು ಬರುವೆ. ಅವರೊಂದಿಗೆ ಮಾತನಾಡುವುದು ಅವಶ್ಯವಾಗಿದೆ. ಅವರಿಗೆ ಎಲ್ಲೂ ಹೊರಗಡೆ ಹೋಗಲು ತಿಳಿಸಬೇಡಿ. ನಾನು ಬಂದಾಗ ಅವರು ಇಲ್ಲಿಯೇ ಇರಲಿ, ನಾನು ಅವರ ಕೈ ಬೆರಳ ಗುರುತು ಪಡೆಯಬೇಕು."

''ಏಕೆ? ಅವರ ಮೇಲೆ ನಿಮಗೆ ಸಂಶಯವೆ?''

"ಸಂಶಯ ಬರುವ ರೀತಿ ಸಾವು ಸಂಭವಿಸಿದಾಗ, ನಾವು ಎಲ್ಲರ ಮೇಲೂ ಸಂಶಯಪಡಬೇಕಾಗುತ್ತದೆ. ಶಾಂತಿದೇವಿಯವರೇ...ನಿಮ್ಮ ಮೇಲೂ ಸಹ."

ಶಾಂತಿ ತುಟಿ ಎರಡು ಮಾಡಲಿಲ್ಲ.

## 8. ಪ್ರೀತಿಯ ಸೇಡು

ಚಂದ್ರನಾಥ ಶವವನ್ನು ಆಂಬ್ಯುಲೆನ್ಸ್‌ಗೆ ಸಾಗಿಸಲು ತಿಳಿಸಿದ. ಅಲ್ಲಿಯವರೆಗೂ ತಡೆಹಿಡಿದ ದುಃಖ ಒತ್ತರಿಸಿ ಬಂತು.

ಶಾಂತಿಯು ತಂದೆಯ ಶವದ ಮೇಲೆ ಬಿದ್ದು ಭೋರೆಂದು ಅಳಲಾರಂಭಿಸಿದಳು. ಹೇಮಂತನು ಸುಷ್ಮಾಳಿಗೆ ಸನ್ನೆ ಮಾಡಿದ. ಸುಷ್ಮಾ ಶಾಂತಿಯನ್ನು ಮೆಲ್ಲನೆ ಮೇಲೆತ್ತಿ ಒಳಗೆ ಕರೆದುಕೊಂಡು ಹೋದಳು. ಶವವನ್ನು ಆಂಬ್ಯುಲೆನ್ಸ್‌ಗೆ ಸಾಗಿಸಲಾಯಿತು. ಕೋಣೆಯ ಬಾಗಿಲು ಹಾಕಿ ಚಂದ್ರನಾಥ ಸೀಲುಮಾಡಿದ. ಒಬ್ಬ ಕಾನ್‌ಸ್ಟೇಬಲ್ಲನ್ನು ಪಹರೆಗೆ ನಿಲ್ಲಿಸಿ, ರೀವಿಯಿಂದ ಹೊರಟುಹೋದ.

ಶಾಂತಿಯನ್ನು ಕೆಳಗೆ ಕಳಿಸಿ ಬಂದಾಗ ಹೇಮಂತ ಟೆರೇಸ್ ಮೇಲೆನಿಂತು

ಸಿಗರೇಟು ಸೇದುತ್ತಿದ್ದ. ಗಹನವಾದ ಆಲೋಚನಯಲ್ಲಿದ್ದ ಆತನನ್ನು ಅಶೋಕ ಎಚ್ಚರಿಸಿದ.

''ಮೇಜರ್ ನನಗೊಂದು ಸಂಶಯ."

"ಏನದು?"

"ನಿನ್ನೆ ಸಾಯಂಕಾಲ ಷಾಪಿಂಗ್‌ಗೆ ಹೋದಾಗ ಶಾಂತಿ ಕೆಲವು ಔಷಧಿ ಕೊಂಡಳೆಂದು ಹೇಳಿದ್ದೆ ನೆನಪಿದೆಯೆ?''

"ನೆನಪಿದೆ ಏಕೆ?''

"ಶಾಂತಿಯೇಕೆ ನಿದ್ದೆ ಮಾತ್ರೆ ಸೀಸೆ ಕೊಂಡಿರಬಾರದು?'' ಅಶೋಕನ ಮಾತು ಕೇಳಿ ಹೇಮಂತ ಒಂದು ಕ್ಷಣ ದಂಗಾದ.

"ಅಶೋಕ...ನಿನ್ನ ಮಾತಿನ ಮೇಲೆ ಗಮನ ಕೊಟ್ಟು ನಾವು ವಿಚಾರಿಸುವಾ. ನಿದ್ದೆ ಮಾತ್ರೆಯ ಸೀಸೆಯನ್ನು ಆಕೆಯೇ ಕೊಂಡಿದ್ದಾಳೆಂದು ತಿಳಿಯುವಾ. ಇದರಿಂದ ಆಕೆ ತನ್ನ ತಂದೆಯ ಕೊಲೆ ಮಾಡಲು ಸಾಧ್ಯವಿಲ್ಲ.''

"ನಾನು ಹಾಗೆಂದು ಹೇಳಲಿಲ್ಲ. ಆಕೆ ಹಾಲನ್ನು ತಂದೆಗೆ ಕೊಡುವ ಬದಲು ಪತಿಗೆ ಕೊಟ್ಟಿದ್ದರೆ...?''

''ಅಂದರೆ?''

''ನಾನು ಸ್ಪಷ್ಟವಾಗಿ ಹೇಳುತ್ತೇನೆ. ಹಾಲಿನಲ್ಲಿ ಮಾತ್ರೆಗಳನ್ನು ಹಾಕಿ ತನ್ನ ಪತಿಗೆ ಕೊಡಬೇಕೆಂದು ಆಕೆ ಯೋಚಿಸಿರಲೂ ಸಾಕು, ಆದರೆ ಆಕಸ್ಮಿಕವಾಗಿ ಸತ್ಯೇಂದ್ರ ಅಡಿಗೆ ಮನೆಗೆ ಬಂದಿದ್ದರಿಂದ ಆಕೆ ತಬ್ಬಿಬ್ಬಾಗಿ ಇದು ತಂದೆಗೆ ಎಂದು ಹೇಳಿದ್ದಾಳೆ, ಆತ ಅದೇ ಗ್ಲಾಸನ್ನು ಒಯ್ದು ಕ್ಯಾಪ್ಟನ್‌ಗೆ ನೀಡಿದ್ದಾನೆ ಅಷ್ಟೆ.''

"ನಿನ್ನ ತರ್ಕ ಸರಿ ಎನಿಸಿದರೂ ಯಾಕೋ ಯೋಗ್ಯ ಎನಿಸುತ್ತಿಲ್ಲ... ಇರಲಿ, ಸುಷ್ಮಾ ನೀನು ಹೋಗಿ ಶಾಂತಿಯನ್ನು ವಿಚಾರಿಸು. ಆಕೆ ನಿದ್ದೆ ಮಾತ್ರೆ ಸೀಸೆ ತಂದಳೋ ಹೇಗೆ ಎಂದು. ತಂದಿದ್ದರೆ ಆ ಸೀಸೆಯನ್ನು ತೆಗೆದುಕೊಂಡು ಬಾ.''

ಕೆಳಗಡೆ ಹೋದ ಸುಷ್ಮಾ ಎರಡೇ ನಿಮಿಷಕ್ಕೆ ವಾಪಸಾಗಿ ಹೇಳಿದಳು. ''ಶಾಂತಿ ನಿನ್ನೆ ನಿದ್ದೆ ಮಾತ್ರೆಯ ಸೀಸೆ ತಂದಿದ್ದು ನಿಜ, ಅದೂ ತನಗೆಂದು ಆದರೆ ಈಗ ಆ ಸೀಸೆ ಇಟ್ಟ ಜಾಗೆಯಿಂದ ಮಾಯವಾಗಿದೆ.'' ಅದನ್ನು ಕೇಳಿ ಹೇಮಂತ ಜಡವಾಗಿ ನಿಂತುಬಿಟ್ಟ.

ಸತ್ಯೇಂದ್ರನಿಗೆ ಎಚ್ಚರವಾಗುವ ವರೆಗೂ ಅಲ್ಲಿ ನಿಲ್ಲುವದು ನಿರರ್ಥಕವೆನಿಸಿತು ಹೇಮಂತನಿಗೆ. ಮನೆಗೆ ಹೋಗಿ ಸ್ನಾನ ಮಾಡಬೇಕೆನಿಸಿತು.

ಈಗಾಗಲೇ ಬೆಳಿಗ್ಗೆ ಸ್ನಾನ ಮಾಡಿದ್ದರೂ ಪುನಃ ಸ್ನಾನ ಮಾಡಬೇಕೆನಿ

ಸಿದ್ದು ವಿಚಿತ್ರವೆನಿಸಿದರೂ, ಮಾನಸಿಕ ದಣಿವಿನ ಪರಿಹಾರಕ್ಕೆ ಸ್ನಾನ ಮಾಡುವುದೇ ಸರಿಯಾದ ಉಪಾಯವೆಂದು ನಿರ್ಧರಿಸಿದ. ಸುಷ್ಮಾ ಹಾಗೂ ಅಶೋಕನನ್ನು ಕರೆದು ಸಾಯಂಕಾಲದ ವರೆಗೂ ಮನೆಯಲ್ಲಿಯೇ ಇದ್ದುಕೊಂಡು ಬಂದು ಹೋಗುವವರ ಮೇಲೆ ಲಕ್ಷ್ಯವಿಡಬೇಕೆಂದು ತಿಳಿಸಿ ಶಾಂತಿಯ ಕೋಣೆಯ ಕಡೆ ನಡೆದ. ಹತ್ತಾರು ಮಹಿಳೆಯರ ಮಧ್ಯೆ ಕುಳಿತು ಮೂಕವಾಗಿ ಶೋಕಿಸುತ್ತಿದ್ದ ಶಾಂತಿ ಹೇಮಂತನನ್ನು ನೋಡಿ ಒಮ್ಮೆಲೇ ಎದ್ದುದನ್ನು ಕಂಡು ಒಂದಿಬ್ಬರು ಮಹಿಳೆಯರು ಸಂಶಯ ದೃಷ್ಟಿಯಿಂದ ಅವರತ್ತ ನೋಡಲು ಕಾರಣವಾಯಿತು. ಅತ್ತ ಲಕ್ಷ್ಯ ಕೊಡದೇ ಹೇಮಂತ ನುಡಿದ.

''ನಾನು ಸದ್ಯ ಹೋಗುತ್ತೇನೆ. ಸಾಯಂಕಾಲ ಬಂದು ಕಾಣುತ್ತೇನೆ. ಡೆಡ್‌ಬಾಡಿ ಬಂದ ಕೂಡಲೇ ಫೋನು ಮಾಡಿ.''

ಆಗಲಿ ಎನ್ನುವಂತೆ ಶಾಂತಿ ತಲೆಯಾಡಿಸಿದಳು. ಒಮ್ಮೆಲೆ ಹೇಮಂತನಿಗೆ ನಿದ್ರೆಮಾತ್ರೆಯ ನೆನಪಾಯಿತು. ಕೇಳಿದ; ''ಅಂದ ಹಾಗೆ ನಿನ್ನೆ ನೀವೇಕೆ ನಿದ್ದೆ ಮಾತ್ರೆಯ ಸೀಸೆ ಕೊಂಡಿರಿ?''

ಒಂದು ಕ್ಷಣ ಹೇಳಲೋ ಬೇಡವೋ ಎಂದು ಯೋಚಿಸಿದ ಆಕೆ ಸ್ವಲ್ಪ ಸಮಯದ ನಂತರ ಹೇಳಿದಳು.''ನಿಜ ಹೇಳಬೇಕೆಂದರೆ ನನ್ನ ಪತಿಯಿಂದ ನನಗೆ ಭಯವಾಗುತ್ತಿದೆ. ಯಾವ ಹೊತ್ತಿನಲ್ಲಿ ಎದ್ದು ಏನು ಮಾಡುತ್ತಾರೋ ಎಂಬ ಹೆದರಿಕೆ. ಅದಕ್ಕಾಗಿ ಅವರು ರಾತ್ರಿ ಮಲಗುವಾಗ ಅವರಿಗೆ ನಿದ್ದೆ ಗುಳಿಗೆ ಕೊಟ್ಟು ನಾನು ಹಾಯಾಗಿ ನಿದ್ರಿಸಬೇಕೆಂದು ಮಾಡಿದ್ದೆ.''

ಹೇಮಂತನಿಗೆ ಶಾಂತಿಯ ಉತ್ತರದಿಂದ ಸಮಾಧಾನವಾಯಿತು. ಸ್ವತಃ ಪತಿಯಿಂದ ಮೂರು ಬಾರಿ ಕಂಟಕ ತಂದುಕೊಂಡ ಶಾಂತಿ ಈ ನಿರ್ಣಯ ತೆಗೆದು ಕೊಂಡದ್ದು ಸಮಂಜಸವೆನಿಸಿತು.

''ಹಾಂ...ಅಂದಹಾಗೆ. ಡಾಕ್ಟರ್ ಸುಧಾಕರನ ಪರಿಚಯ ನಿಮಗೆ ಹೇಗೆ ಆಯಿತು?''

ಶಾಂತಿ ಬೆಚ್ಚಿಬಿದ್ದಳು. ಹೇಮಂತನಿಗೆ ಈ ವಿಷಯ ಹೇಗೆ ತಿಳಿಯಿತು? ಎಂಬುದು ಒಗಟಾಗಿತ್ತು. ಆಕೆ ಕೇಳಿದಳು, ''ನಿಮಗೆ ಸುಧಾಕರನ ವಿಷಯ ಹೇಗೆ ತಿಳಿಯಿತು?''

''ಮಿಸೆಸ್‌ಶಾಂತಿ, ನಾನೊಬ್ಬ ಪತ್ತೆದಾರ ಎಂಬುದನ್ನು ನೀವು ಮರೆತಂತಿದೆ. ನಿಮ್ಮ ಜೀವ ಗಂಡಾಂತರದಲ್ಲಿರುವಾಗ ನಿಮ್ಮ ರಕ್ಷಣೆಗೆಂದೇ ನನ್ನ ನಿಯುಕ್ತಿಯಾಗಿದೆ ಎಂದು ತಿಳಿದುಕೊಂಡ ನಾನು ನಿಮ್ಮನ್ನು ನೆರಳಿನಂತೆ ಅನುಸರಿಸುತ್ತಿದ್ದೇನೆ. ನನ್ನ ಸಹಾಯಕ ನಿನ್ನೆಯಿಂದಲೇ ನಿಮ್ಮ ಹಿಂದೆ ಇದ್ದಾನೆ. ಅವನಿಂದಲೇ ಈ

ವಿಷಯ ತಿಳಿದದ್ದು. ದಯವಿಟ್ಟು ಯಾವುದನ್ನು ಮುಚ್ಚಿಡದೇ ಹೇಳಿ.''

''ನೀವು ತಿಳಿದಂತೆ, ಮುಚ್ಚಿಡುವ ವಿಷಯ ಯಾವುದು ಇಲ್ಲ ಮೇಜರ್. ನಾನೂ ಸುಧಾಕರ ಇಬ್ಬರೂ ಒಂದೇ ಕಾಲೇಜಿನಲ್ಲಿ ಓದುತ್ತಿದ್ದೆವು. ನನಗಿಂತ ಎರಡು ವರ್ಷ ಆತ ಮುಂದಿದ್ದ. ಕಾಲೇಜಿನಲ್ಲಿದ್ದ ಹಲವಾರು ತರುಣರಂತೆ ಅವನೂ ನನ್ನ ಕಡೆ ಆಕರ್ಷಿತನಾದ. ನಾನೂ ಸ್ವಲ್ಪ ಲಿಫ್ಟ್ ಕೊಟ್ಟೆ. ಇಬ್ಬರೂ ಕೂಡಿ ಕಾಲೇಜಿನ ನಾಲ್ಕಾರು ನಾಟಕಗಳಲ್ಲಿ ಪಾತ್ರ ವಹಿಸಿದೆವು ಅಷ್ಟೇ.''

''ನೀವು ಒಬ್ಬರನ್ನೊಬ್ಬರು ಪ್ರೀತಿಸಲಿಲ್ಲವೇ?''

''ನನಗಂತೂ ಆ ವಿಚಾರ ಬರಲೇ ಇಲ್ಲ. ಆದರೆ ಸುಧಾಕರ ಮಾತ್ರ ನನ್ನನ್ನು ಪ್ರೀತಿಸುವಂತೆ ಕಂಡಿತು. ಒಂದೆರಡು ಬಾರಿ ಆತ ಅದನ್ನು ತೋರಿಸಲು ಪ್ರಯತ್ನಿಸಿದ. ನಾನೇ ಅನಾದರ ಮಾಡಿಬಿಟ್ಟೆ.''

''ಅದನ್ನು ನೆನಪಿಟ್ಟುಕೊಂಡೇ ಈಗ ಸುಧಾಕರ ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಿರಬಾರದೇಕೆ?''

''ಮೇಜರ್ ನೀವೇನು ಹೇಳುತ್ತಿರುವಿರಿ?''

''ನಾನು ಸರಿಯಾದುದನ್ನೇ ಹೇಳುತ್ತಿರುವೆ ಸ್ವಲ್ಪ ಕೇಳಿ. ಸುಧಾಕರ ನಿಮ್ಮನ್ನು ಪ್ರೀತಿಸಿದ, ನೀವು ಆತನನ್ನು ನಿರ್ಲಕ್ಷ್ಯ ಮಾಡಿದಿರಿ. ಮುಂದೆ ನಿಮ್ಮ ಮದುವೆ ಸತ್ಯೇಂದ್ರನ ಜೊತೆ ಆಯಿತು. ಆಗ ಸುಧಾಕರ ಸೇಡು ತೀರಿಸಿಕೊಳ್ಳಲು ಹೊಂಚು ಹಾಕಿದ. ಬಹುಶಃ ನಿಮಗೆ ತಿಳಿದಿರಲಿಕ್ಕಿಲ್ಲ; ಆತ ಮನೋವಿಜ್ಞಾನಿ. ಹಿಪ್ನಾಟಿಸಂನಲ್ಲಿ ಎತ್ತಿದ ಕೈ.''

''ಅದರಿಂದೇನಾಗಬೇಕಾಗಿದೆ?''

''ಅದರಿಂದ ಎಲ್ಲಾ ಆಗುತ್ತಿದೆ. ಪ್ರೊಫೆಸರರು ನಿಮ್ಮ ಮೇಲೆ ಆಕ್ರಮಣ ಮಾಡುತ್ತಿರುವದೂ ಹಿಪ್ನಾಟಿಸಂದಿಂದಲೇ. ಅದಕ್ಕೆ ''ಪೋಸ್ಟ್ ಹಿಪ್ನಾಟಿಸಂ'' ಎನ್ನುತ್ತಾರೆ. ಅದನ್ನು ಬಲ್ಲವರು ತಾವು ಕುಳಿತಲ್ಲಿಂದಲೇ ಬೇಕಾದವರ ಮೇಲೆ ಅದನ್ನು ಪ್ರಯೋಗಿಸಬಹುದು. ನನಗೆ ತಿಳಿದ ಮಟ್ಟಿಗೆ ತಮ್ಮ ಯಜಮಾನರೂ ಸಹ ಹಿಪ್ನೊಟಿಸಂ ಪ್ರಭಾವಕ್ಕೆ ಒಳಗಾಗಿ ಈ ರೀತಿ ವರ್ತಿಸುತ್ತಿದ್ದಾರೆ.''

ಒಂದು ವೇಳೆ ನಿಮ್ಮ ಮಾತು ಸರಿಯಾಗಿದ್ದರೆ ಸುಧಾಕರ ನನ್ನನ್ನೇಕೆ ಕೊಲ್ಲಲು ಬಯಸುತ್ತಿದ್ದ? ಪ್ರೊಫೆಸರರನ್ನು ನನ್ನ ಕೈಯಿಂದ ಸಾಯಿಸ-ಬಹುದಿತ್ತು.''

''ಇಲ್ಲಿಯೇ ನೀವು ತಪ್ಪುತ್ತಿರುವುದು. ಕೊಲೆ ಮಾಡುವ ಉದ್ದೇಶ ಆತನಿಗಿರಲಿಲ್ಲ. ಕೇವಲ ಬೆದರಿಸುತ್ತಿದ್ದಾನೆ, ನಿಮ್ಮ ಕೈಯಿಂದ ಪ್ರೊಫೆಸರರ ಕೊಲೆ ಮಾಡಿಸಿದರೆ ನೀವು ಆತನಿಗೆ ದಕ್ಕಲಾರಿರಿ ನಿಮ್ಮ ಮೊಕದ್ದಮೆ ನಡೆದು

ನಿಮಗೆ ಶಿಕ್ಷೆಯಾಗಬಹುದು. ಅದು ಆತನಿಗೆ ಬೇಕಾಗಿರಲಿಲ್ಲ, ನಿಮ್ಮನ್ನು ಬೆದರಿಸಿ ವಿವಾಹ ವಿಚ್ಛೇದನ ಪಡೆಯಲು ಪ್ರೋತ್ಸಾಹಿಸುತ್ತಿದ್ದಾನೆ. ನೀವು ಪ್ರೊಫೆಸರ-ರಿಂದ ಮುಕ್ತಿ ಪಡೆದರೆ ಆತ ನಿಮ್ಮನ್ನು ಸುಲಭವಾಗಿ ವಿವಾಹವಾಗಬಹುದು ಅಲ್ಲವೇ?"

"ಓಹ್ ಇದೊಂದು ಕಾರಸ್ಥಾನ."

"ಕರೆಕ್ಟ್ . ಈಗ ನೀವದನ್ನ ತಿಳಿದುಕೊಂಡಿರಿ."

ಅಷ್ಟರಲ್ಲಿ ಪೋರ್ಟಿಕೋದ ಬಳಿ ಜೀಪಿನ ಸದ್ದಾಯಿತು. ಇಬ್ಬರೂ ಹೊರಗೆ ಬಂದರು. ಜೀಪಿನಿಂದ ಚಂದ್ರನಾಥ ಕೆಳಗಿಳಿಯುತ್ತಿದ್ದ. ಅವನ ಮುಖದ ಮೇಲೆ ತೃಪ್ತಿಯ ನಗು ಲಾಸ್ಯವಾಡುತ್ತಿತ್ತು. ಅವನ ಕೈಯಲ್ಲಿ ಕಬ್ಬಿಣದ ಕೋಳ ತೂಗಾಡುತ್ತಿತ್ತು. ಹೇಮಂತನ ಕಡೆ ನೋಡಿ ಕೈ ಬೀಸಿ ವಿಷ್ ಮಾಡಿದ ಆತ ಆಥ್ಮತೆಯಿಂದ ನುಡಿದ, "ಮೇಜರ್ ಇನ್ನೂ ನೀವು ಇಲ್ಲಿಇದ್ದದ್ದು ಸಂತೋಷ. ನೀವಿರದಿದ್ದರೆ ಫೋನ್ ಮಾಡಿ ಕರೆಸಬೇಕೆಂದು ಮಾಡಿದ್ದೆ."

"ಏಕೆ? ಅಂತಹದೇನು ವಿಶೇಷ?"

"ವಿಶೇಷವಿದೆ, ನಾನು ಅಪರಾಧಿಯನ್ನು ಬಂಧಿಸಲು ಬಂದಿದ್ದೇನೆ."

"ಏನು? ಅಪರಾಧಿಯ ಬಂಧನವೇ!"

"ಎಸ್."

"ಯಾರು ಅಪರಾಧಿ?"

"ಬೇರೆ ಯಾರು ಅಲ್ಲ. ಪ್ರೊಫೆಸರ್ ಸತ್ಯೇಂದ್ರ..."

"ಇನ್‌ಸ್ಪೆಕ್ಟರ್ ಚಂದ್ರನಾಥ, ನೀವೇನೂ ಚೇಷ್ಟೆ ಮಾಡುತ್ತಿಲ್ಲ ತಾನೆ?"

"ಮೇಜರ್ ನನಗೆ ಗೊತ್ತು. ಇದು ಚೇಷ್ಟೆ ಮಾಡುವ ಸಮಯವಲ್ಲವೆಂದು. ಆದರೆ ನಾನು ವಿವಶನಾಗಿ ಈ ತೀರ್ಮಾನ ಕೈಕೊಳ್ಳಬೇಕಾಗಿದೆ."

"ಏನೆಂದು?...ಪ್ರೊಫೆಸರ್ ಸತ್ಯೇಂದ್ರ ಅಪರಾಧಿ ಎಂದೆ? ಅವರೇ ಕ್ಯಾಪ್ಟನ್ ಆನಂದರ ಕೊಲೆ ಮಾಡಿದ್ದಾರೆಂದೆ?"

"ಹೌದು, ನಿಸ್ಸಂಶಯವಾಗಿ."

ಶಾಂತಿಗೆ ತಡೆದುಕೊಳ್ಳಲಾಗಲಿಲ್ಲ. ಅವಳು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಹೇಮಂತ ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸಲಿಲ್ಲ.

"ಚಂದ್ರನಾಥ ಸ್ವಲ್ಪ ಯೋಚಿಸಿ ತೀರ್ಮಾನ ತೆಗೆದುಕೊಳ್ಳಿ, ಆಡಿದ ಮಾತು, ಬಿಟ್ಟ ಬಾಣ ವಾಪಸು ತೆಗೆದುಕೊಳ್ಳಲಾಗದು."

"ಮೇಜರ್ ಹೇಮಂತ ನಾನು ಸಾವಿರ ಬಾರಿ ಯೋಚಿಸಿಯೇ ಈ ತೀರ್ಮಾನಕ್ಕೆ ಬಂದಿದ್ದೇನೆ.

ಅದೇನೇ ಇರಲಿ, ಈಗಿನ ಸಂದರ್ಭದಲ್ಲಿ ನೀವಿಂತು ವರ್ತಿಸಬಾರದು. ಶಾಂತಿಯ ಪರಿಸ್ಥಿತಿಯನ್ನು ಸ್ವಲ್ಪ ಗಮನಿಸಿ, ತಂದೆ ತೀರಿಕೊಂಡಿದ್ದು, ಅವರ ಶವ ಸಂಸ್ಕಾರವಿನ್ನೂ ಆಗಿಲ್ಲ, ಪತಿ ಎಚ್ಚರತಪ್ಪಿ ಮಲಗಿಕೊಂಡವರು ಇನ್ನೂ ಎದ್ದಿಲ್ಲ. ಹೀಗಿರುವಾಗ ನೀವು ಅವರೇ ಅಪರಾಧಿ ಎಂದು ಬಂಧಿಸಲು ಬಂದಿದ್ದೀರಿ."

"ಮೇಜರ್ ಹೇಮಂತ...ನಾನಿದನ್ನೆಲ್ಲಾ ಯೋಚಿಸಿಯೇ ಈ ತೀರ್ಮಾನ ಕೈಗೊಂಡಿರುವುದು. ನಾನೇನೂ ಸಂಶಯದ ಆಧಾರದ ಮೇಲೆ ಈ ರೀತಿ ಹೇಳುತ್ತಿಲ್ಲ. ನನ್ನ ಬಳಿ ಇದಕ್ಕೆ ಸಾಕ್ಷ್ಯಾಧಾರಗಳು ಸಹ ಇವೆ."

"ಆಂ? ಏನೆಂದಿರಿ? ಸತ್ಯೇಂದ್ರರೇ ಕೊಲೆ ಮಾಡಿದ್ದಾರೆಂದು ನೀವು ಸಿದ್ಧ ಪಡಿಸಬಲ್ಲಿರಾ?"

ಓಹ್...ಅವಶ್ಯವಾಗಿ. ಇದೋ ನೋಡಿ . ನೆನ್ನೆ ರಾತ್ರಿ ಅವರಿಗೂ ಆನಂದ ಅವರಿಗೂ ಯಾವದೋ ಮಹತ್ವದ ವಿಷಯದ ಬಗ್ಗೆ ಚರ್ಚೆ ನಡೆಯುವದಿತ್ತು. ಇದು ಅವರೇ ತಮ್ಮ ಡೈರಿಯಲ್ಲಿ ಬರೆದಿದ್ದುರಿಂದ ಸ್ಪಷ್ಟವಾಗುತ್ತದೆ. ಎಂದೂ ಇಲ್ಲದೆ ನಿನ್ನೆ ಸಾಯಂಕಾಲವೇ ಕ್ಯಾಪ್ಟನ್ ಆನಂದ ಅವಸರದಿಂದ ಧಾರವಾಡಕ್ಕೆ ಬಂದದ್ದು ಇದಕ್ಕೆ ಪುಷ್ಟಿ ಕೊಡುತ್ತದೆ. ನಿರ್ಧರಿತ ಕಾರ್ಯಕ್ರಮದಂತೆ ರಾತ್ರಿ ಊಟವಾದ ನಂತರ ರಾತ್ರಿ ಚರ್ಚೆ ನಡೆಯಿತು. ಆದರೆ ಆನಂದ ಪ್ರೊಫೆಸರರ ಮಾತಿಗೆ ಒಪ್ಪಲಿಲ್ಲ. ಆದರಲ್ಲೇ ಭಿನ್ನಾಭಿಪ್ರಾಯ ಉಂಟಾಯಿತು. ವಾದವಿವಾದ ದಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಕೈ ಕೈ ಮಿಲಾಯಿಸಿತು. ಇದನ್ನು ಪಕ್ಕದ ಮನೆಯವರು ಕಂಡಿದ್ದಾರೆ. ಅಷ್ಟೆ ಏಕೆ ಸ್ವತಃ ಶಾಂತಿದೇವಿ ಸಹ ಈ ಮಾತನ್ನು ಪುಷ್ಟೀಕರಿಸಿದ್ದಾರೆ.

ಪ್ರೊಫೆಸರರು ತಮ್ಮ ರೂಮಿಗೆ ಹೋಗಿ ಶಾಂತ ರೀತಿಯಿಂದ ವಿಚಾರಿಸಿ-ದರು. ತಾವು ದುಡುಕಬಾರದು. ದುಡುಕಿದ್ದು ತಪ್ಪಾಯಿತು ಅನ್ನಿಸಿತು.

ಆದರೆ ತಮ್ಮ ಯೋಜನೆ ಅವರು ಕೈ ಬಿಡುವಂತಿರಲಿಲ್ಲ. ಯಾವದೇ ರೀತಿಯಲ್ಲಿ ಕ್ಯಾಪ್ಟನ್ ಆನಂದ ಅವರನ್ನು ಒಪ್ಪಿಸಲೇ ಬೇಕು. ಒಂದು ವೇಳೆ ಅವರು ಒಪ್ಪದಿದ್ದರೆ ಬೇರೆ ದಾರಿ ಯೋಚಿಸಬೇಕೆಂದು ಅವರು ಮೇಲೆದ್ದರು. ಅಷ್ಟರಲ್ಲಿ ಅವರ ದೃಷ್ಟಿ ಟೇಬಲ್ ಬಳಿ ಹೋಯಿತು. ತಮಗೆಂದೇ ತಂದು ಕೊಂಡಿದ್ದ ನಿದ್ದೆ ಮಾತ್ರೆಯ ಸೀಸೆ ಅವರನ್ನು ಆಕರ್ಷಿಸಿತು. ಅದನ್ನೆತ್ತಿಕೊಂಡು ನೈಟ್‌ಗೌನಿನ ಜೇಬಿಗೆ ಸೇರಿಸಿ, ಒಂದು ಕೈಯಲ್ಲಿ ಡೈರಿ ಹಿಡಿದುಕೊಂಡು ಸ್ಲಿಪರ್ ಹಾಕಿಕೊಂಡು ಕೆಳಗಡೆ ಬಂದರು. ಶಾಂತಿ ತಂದೆಗೆಂದು ಹಾಲು ಒಯ್ಯುತ್ತಿದ್ದಳು.

# 9 ಡಾರ್ಲಿಂಗ್ ಇದೇನು?

ಆ ಸಮಯವನ್ನು ಪ್ರೊಫೆಸರ್ ಉಪಯೋಗಿಸಿಕೊಂಡರು, ಆಕೆಗೆ ಸಬೂಬು ಹೇಳಿ ಹಾಲಿನ್ಗ್ಲೋಟವನ್ನು ತಾವೇ ತೆಗೆದುಕೊಂಡು ಮೇಲೆ ನಡೆದರು. ಮಧ್ಯೆ ಸೀಸೆಯಿಂದ ಇಪ್ಪತ್ತು ಗುಳಿಗೆ ತೆಗೆದು ಹಾಲಿಗೆ ಸೇರಿಸಿದರು."

"ಇಪ್ಪತ್ತೇ ಗುಳಿಗೆ ಎಂದು ಹೇಗೆ ಹೇಳುತ್ತೀರಿ?"

"ವೈದ್ಯಕೀಯ ಪರೀಕ್ಷೆಯಲ್ಲಿ ಇದು ತಿಳಿದು ಬಂದಿದೆ."

"ಏನು? ವೈದ್ಯಕೀಯ ಪರೀಕ್ಷೆಯ ವರದಿ ಬಂದಿದೆಯೇ? ಮತ್ತೆ ಏನೇನು ತಿಳಿಯಿತು?"

''ಎಲ್ಲಾ ಸಮಯ ಬಂದಾಗ ನಾನೇ ತಿಳಿಸುವೆ. ಹಾಂ ಮುಂದೆ ಕೇಳಿ ಮೇಲಿನ ರೂಮಿಗೆ ಬಂದು ಆನಂದ ಅವರ ಕ್ಷಮೆ ಕೇಳಿ, ಸ್ಲಿಪರ್ ಕೆಳಗೆ ಬಿಟ್ಟು ಡೈರಿ ಮೇಜಿನ ಮೇಲೆ ಇಟ್ಟು, ಆನಂದ ಅವರೊಂದಿಗೆ ಮಂಚದ ಮೇಲೆ ಕುಳಿತರು. ಪುನಃ ತಮ್ಮ ವಿಚಾರದ ಬಗ್ಗೆ ಮಾತನಾಡಿದರು. ಆನಂದ ಒಪ್ಪದಾಗಲು ಸಿಟ್ಟಿನಲ್ಲಿ ಮೈಮರೆತ ಸತ್ಯೇಂದ್ರ ದುಮುಗುಡುತ್ತ ತಮ್ಮ ರೂಮಿಗೆ ಬಂದರು. ಸ್ಲಿಪರ್ ಹಾಕಿಕೊಳ್ಳಲು, ಡೈರಿ ತೆಗೆದುಕೊಳ್ಳಲು ಮರತೇ ಹೋಯಿತು.

"ಶಾಂತಿ ಆಗಲೇ ಮಲಗಿದ್ದಳು. ಆನಂದ ಆ ಹಾಲು ಕುಡಿದೇ ಕುಡಿಯುತ್ತಾರೆಂದು ಅರಿತಿದ್ದ ಸತ್ಯೇಂದ್ರ ತಮಗಾಗಿ ಇಟ್ಟಿದ್ದ ಹಾಲಿನ ಗ್ಲಾಸಿಗೆ ಐದು ಆರು ಮಾತ್ರೆ ಸೇರಿಸಿ ತಾವೇ ಕುಡಿದುಬಿಟ್ಟರು. ಹೆಚ್ಚಿಗೆ ಮಾತ್ರೆ ಬೆರೆಸಿದ್ದರಿಂದ ಕ್ಯಾಪ್ಟನ್ ಆನಂದ ಅಲ್ಲಿಯೇ ತೀರಿಹೋದರೆ, ಕಡಿಮೆ ಮಾತ್ರೆ ತೆಗೆದುಕೊಂಡ ಸತ್ಯೇಂದ್ರ ಇನ್ನೂ ಮಲಗೇ ಇದ್ದಾರೆ."

ಪ್ರೊಫೆಸರ್ ಸತ್ಯೇಂದ್ರ ಸರಿಯಾಗಿ ಸಿಕ್ಕಿಹಾಕಿಕೊಂಡಿದ್ದರು. ಚಂದ್ರನಾಥರ ಸಂಶಯ ಪೊಳ್ಳಾಗಿರಲಿಲ್ಲ. ಬಲವಾದ ಬಲೆಯಲ್ಲಿ ಅವರು ಸತ್ಯೇಂದ್ರನನ್ನು ಸೆರೆ ಹಿಡಿದಿದ್ದರು. ಶಾಂತಿಗಂತು ದಿಕ್ಕೇ ತೋಚದಂತಾಯಿತು.

"ಇಲ್ಲ ಇನ್ಸ್‌ಪೆಕ್ಟರ್, ಸತ್ಯೇಂದ್ರ ಆ ರೀತಿ ಮಾಡಲು ಸಾಧ್ಯವೇ ಇಲ್ಲ... ನನ್ನ ತಂದೆಗೆ ಹಾಲು ಕೊಟ್ಟವಳು ನಾನು."

"ಈ ಮೊದಲು ಕೇಳಿದಾಗ ಹಾಲು ಸತ್ಯೇಂದ್ರ ಕೊಟ್ಟರೆಂದು ನೀವೇ ಹೇಳಿಕೆ ನೀಡಿದ್ದು ಮರೇತಿರೇನು ಶಾಂತಿದೇವಿ?"

"ಆ ಹೇಳಿಕೆಯನ್ನು ನಾನೀಗ ಬದಲಿಸುತ್ತೇನೆ."

"ಅದರಿಂದ ಯಾವ ಪ್ರಯೋಜನವು ಆಗಲಾರದು. ಏಕೆಂದರೆ ಹಾಲಿನ ಲೋಟದ ಮೇಲಿನ ಗುರುತುಗಳು, ಸತ್ಯೇಂದ್ರನ ಬೆರಳ ಗುರುತುಗಳೇ ಆಗಿವೆ. ಅದನ್ನು ಬೆರಳು ಗುರುತಿನ ತಜ್ಞರು ಪುಷ್ಟೀಕರಿಸಿದ್ದಾರೆ."

"ನಿಮಗೆ ಸತ್ಯೇಂದ್ರನ ಬೆರಳ ಗುರುತುಗಳು ಎಲ್ಲಿ ದೊರೆತವು? ನನಗಂತೂ ನೀವು ಅವನ ಬೆರಳ ಗುರುತನ್ನು ಮುದ್ರಿಸಿಕೊಂಡಿದ್ದ ನೆನಪಿಲ್ಲ.''

ಚಂದ್ರನಾಥ ವ್ಯಂಗ್ಯ ನಗೆ ನಕ್ಕ.

''ಮೇಜರ್...ಪೊಲೀಸ್ ಇಲಾಖೆಯಲ್ಲಿ ನಾನು ಹನ್ನೆರಡು ವರ್ಷ ಸೇವೆ ಸಲ್ಲಿಸಿದ್ದೇನೆ...ಮರೆಯಬೇಡಿ, ಡೈರಿಯ ಮೇಲೆ ಕೇವಲ ಏಕಮಾತ್ರ ವ್ಯಕ್ತಿಯ ಗುರುತುಗಳಿದ್ದು ಅವೇ ಗುರುತುಗಳು ಹಾಲಿನ ಲೋಟದ ಮೇಲಿವೆ. ಅದೇ ಗುರುತು ಸ್ವತಃ ಸತ್ಯೇಂದ್ರ ಕುಡಿದ ಹಾಲಿನ ಲೋಟದ ಮೇಲೂ ಇವೆ. ಅಂದಮೇಲೆ ಅವು ಸತ್ಯೇಂದ್ರನ ಬೆರಳ ಗುರುತುಗಳೇ ಎಂದು ಬೇರೆ ಹೇಳಬೇಕಾಗಿಲ್ಲ. ಆದರೂ ಇನ್ನೊಂದು ಬಾರಿ ನಾನು ಸತ್ಯೇಂದ್ರನ ಬೆರಳ ಗುರುತು ಪಡೆದು ಪರಿಶೀಲಿಸುತ್ತೇನೆ."

"ನಿಮ್ಮ ಕಾರ್ಯಕುಶಲತೆಯನ್ನು ನಾನು ಮೆಚ್ಚುತ್ತೇನೆ ಚಂದ್ರನಾಥ. ಕೇವಲ ಸಾವು ನಡೆದ ನಾಲ್ಕು ಗಂಟೆಗಳಲ್ಲಿ ನೀವು ನಿರ್ಧಾರಕ್ಕೆ ಬಂದದ್ದು ಅಭಿನಂದನೀಯ, ಆದರೆ..."

ಮೇಜರ್ ಹೇಮಂತನಂತಹ ದಕ್ಷ ಪತ್ತೇದಾರನ ಮುಖದಿಂದ ತನ್ನ ಪ್ರಶಂಸೆಯನ್ನು ಕೇಳಿ ಚಂದ್ರನಾಥ ಉಬ್ಬಿಹೋದ. ಆದರ ಹಿಂದೆಯೇ ಬಂದ ಆದರೆ ಎಂಬ ಶಬ್ದ ಅವರನ್ನು ಯೋಚನೆಯ ಕಡಲಲ್ಲಿ ಕೆಡವಿತು.

"ಆದರೆ...?ಮುಂದೇನು ಹೇಳಿ."

"ಆದರೆ...ನಿಮ್ಮ ತೀರ್ಮಾನದಲ್ಲಿ ಒಂದೆರಡು ತೊಡಕುಗಳು ಬರುತ್ತಿವೆ. ಅವುಗಳನ್ನು ನೀವು ಪರಿಹರಿಸಬೇಕು."

"ಯಾವ ತೊಡಕುಗಳು?" ಗೊಂದಲದಲ್ಲಿ ಬಿದ್ದ ಚಂದ್ರನಾಥ ಕೇಳಿದ.

"ಮೊದಲನೆಯದಾಗಿ ಆನಂದ ಅವರ ಕೊಲೆಯಾಗಿದೆ ಎಂಬುದನ್ನು ಸಿದ್ಧಪಡಿಸಬೇಕು. ಅವರೇ ಏಕೆ ನಿದ್ದೆ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿ ಮಾಡಿಕೊಂಡಿರಬಾರದು."

"ನೋ, ನೋ ಮೇಜರ್. ಹಿಂದಿನ ದಿವಸ ನಡೆದ ಜಗಳದಿಂದಾಗಿ ಬೇಕೆಂತಲೇ ಸತ್ಯೇಂದ್ರ ಅವರನ್ನು ಕೊಲೆ ಮಾಡಿದ್ದಾರೆಂದು ಹೇಳಬಹುದು. ಅಲ್ಲದೇ ಇಂಥ ಸಣ್ಣ ಸಣ್ಣ ತಂಟೆಗೆ ಬೆದರಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಪುಳ್ಳೆದೆ ಕ್ಯಾಪ್ಟನ್ ಆನಂದ ಅವರದಲ್ಲ."

"ನಾನು ನನ್ನ ಸಂಶಯಗಳನ್ನು ಹೇಳುತ್ತಿದ್ದೇನೆ, ಕೇಳುತ್ತಾ ಹೋಗಿ...

ಎರಡನೆಯದಾಗಿ ನಿದ್ದೆ ಮಾತ್ರೆಯ ಸೀಸೆ ಎಲ್ಲಿಂದ ಬಂದಿತು? ಅದನ್ನಾರು ತಂದರು? ಅದನ್ನು ಪ್ರೊಫೆಸರರೇ ಖರೀದಿಸಿದರೆಂಬುದನ್ನು ನೀವು ಸ್ಪಷ್ಟಪಡಿಸ ಬೇಕು. ಯಾರೋ ಮಾತ್ರೆ ತಂದು, ಸೀಸೆಯನ್ನು ಅವರ ಕೋಣೆಯಲ್ಲಿ ಚೆಲ್ಲಿದ ಮಾತ್ರಕ್ಕೆ ಅವರೇ ಕೊಲೆಗಾರರಾಗಲಾರರು. ಅವರೇ ಕೊಂದಿದ್ದಾರೆ ಎಂದು ಸಿದ್ಧಪಡಿಸಲು ನಿಮ್ಮ ಬಳಿ ಸಾಕ್ಷಿ ಇಲ್ಲ."

ಇನ್ಸ್‌ಪೆಕ್ಟರ್ ಚಂದ್ರನಾಥನ ಮುಖ ಒಮ್ಮೆಲೆ ಕಪ್ಪಾಯಿತು. ಮರು ಕ್ಷಣವೇ ಆತ ನುಡಿದ, "ಮೇಜರ್ ನನ್ನನ್ನು ಅಷ್ಟು ಹುಚ್ಚನೆಂದು ತಿಳಿಯ ಬೇಡಿ. ನಿದ್ದೆಯ ಮಾತ್ರೆಯ ಸೀಸೆಯ ಮೇಲೆ ಪ್ರೊಫೆಸರರ ಬೆರಳ ಗುರತು ಗಳಿವೆ."

"ಆ ಬೆರಳ ಗುರುತಿನ ಮೇಲಿಂದ ನೀವು ಅವರನ್ನು ನೇಣುಗಂಬಕ್ಕೆ ಒಯ್ಯಲು ಸಾಧ್ಯವಿಲ್ಲ ಚಂದ್ರನಾಥ. ನಿಮ್ಮದಲ್ಲದ ಯಾವುದೇ ಒಂದು ವಸ್ತು ನಿಮ್ಮ ಮೇಜಿನ ಮೇಲಿದ್ದರೆ ನೀವು ಸಹಜವಾಗಿ ಅದನ್ನೆತ್ತಿಕೊಂಡು ಪರೀಕ್ಷಿಸು ತ್ತೀರಿ, ಕೈಯಲ್ಲಿ ಹಿಡಿದುಕೊಂಡು ಯೋಚಿಸುತ್ತೀರಿ ಇದು ಯಾರದಿರಬಹು ದೆಂದು. ಅದೇ ರೀತಿ ಸತ್ಯೇಂದ್ರನೂ ಮಾಡಿರಬಹುದು."

ಚಂದ್ರನಾಥನ ಬಾಯಿ ಕಟ್ಟಿಹೋಯಿತು. ಕಬ್ಬಿಣ ಕಾದಿದೆ, ಈಗಲೇ ಬಡಿಯಬೇಕೆಂದು ಮೇಜರ್ ಯೋಚಿಸಿದ. ಚಂದ್ರನಾಥನಿಗೆ ಮಾತನಾಡಲು ಆಸ್ಪದ ಕೊಡದೆ ಮಾತನಾಡಲಾರಂಭಿಸಿದ, "ಒಂದು ನಿಮಿಷ ಯೋಚಿಸಿ ಚಂದ್ರನಾಥ. ನಿಮ್ಮದು ಈ ಇಲಾಖೆಯಲ್ಲಿ ಹನ್ನೆರಡು ವರ್ಷ ಸೇವೆಯಾಗಿದೆ. ಯಾವಾಗಲೂ ಅಪರಾಧಿ ಅಪರಾಧ ಮಾಡುವಾಗ ತನ್ನ ಸುಳಿವು ಸಿಗದಂತೆ, ಅಲ್ಲಿ ಯಾವ ಸಾಕ್ಷ್ಯಾಧಾರಗಳು ಉಳಿಯದಂತೆ ಎಚ್ಚರವಹಿಸುತ್ತಾನೆ. ಯಾವ ಅಪರಾಧಿಯೂ ತಾನೇ ಅಪರಾಧ ಮಾಡಿದ್ದೇನೆಂದು ಡಂಗುರ ಸಾರುವ ಹಾಗೆ ಹತ್ತಿಪ್ಪತ್ತು ಆಧಾರ ಬಿಟ್ಟು ಹೋಗಲಾರ. ಅದಷ್ಟು ಚಾಣಾಕ್ಷತನದಿಂದ ತನ್ನ ಮೇಲೆ ಅಪರಾಧದ ಸಂಶಯ ಬರದ ಹಾಗೆ ವರ್ತಿಸುತ್ತಾನೆ. ನೀವೇ ನೋಡಿ ಇಲ್ಲಿ ಪ್ರತಿಯೊಂದರಲ್ಲಿಯೂ ಸತ್ಯೇಂದ್ರರ ಮೇಲೆ ಸಂಶಯ ಬರುವಂತಿದೆ. ಹಾಲಿನ ಲೋಟದ ಮೇಲೆ, ಸೀಸೆ ಮೇಲೆ ಅವರ ಕೈ ಬೆರಳ ಗುರುತುಗಳಿವೆ. ಡೈರಿ ಇಲ್ಲೇ ಬಿಟ್ಟಿದ್ದಾರೆ, ಸ್ಲಿಪರ್ ಸಹ ಇಲ್ಲೇ ಇದೆ. ಒಂದು ವೇಳೆ ಅವರೇ ಕೊಲೆ ಮಾಡಿದ್ದರೆ ಇಷ್ಟೆಲ್ಲ ಗುರುತುಗಳನ್ನು ಅವರು ಬಿಟ್ಟಿರುತ್ತಿದ್ದರೆ? ಹಿಂದಿನ ರಾತ್ರಿ ಜಗಳ ಕಾದಿದ್ದಾರೆ, ಅಂಥದರಲ್ಲಿ ಕೊಲೆ ಮಾಡಲು ಅವರು ಹುಚ್ಚರಲ್ಲ, ಸುಸಂಸ್ಕೃತರು. ಅಪರಾಧ ಮಾಡಬೇಕೆಂದರೆ ಕೂದಲೆಳೆಯಷ್ಟು ಸಂಶಯ ಬರದಂತೆ ಮಾಡಬಲ್ಲರು. ಈ ಒಂದೇ ಮಾತಿನ

ಮೇಲೆ ಯಾವುದೇ ವಕೀಲರು ಅವರನ್ನು ನಿರ್ದೋಷಿ ಎಂದು ಬಿಡಿಸಬಲ್ಲರು. ನೆನಪಿಡಿ ಆಮೇಲೆ ನಿಮ್ಮ ಮೇಲೆ ಮಾನಹಾನಿ ದಾವಾ ಹೂಡಬಹುದು.''

ಚಂದ್ರನಾಥನ ಬಾಯಿಯಿಂದ ಮಾತೇ ಹೊರಡದಂತಾಯಿತು. ನಾಲಿಗೆಗೆ ಲಕ್ವ ಹೊಡೆದಂತಾಗಿತ್ತು. ಆತ ಏರಿ ಬಂದ ಕುದುರೆ, ಆತನನ್ನು ಮೇಲಿನಿಂದ ಪಾತಾಳಕ್ಕೆ ಒಗೆದಂತಹ ಅನುಭವ. ಆತ ಯೋಚಿಸಿದ್ದೇನು? ಇಲ್ಲಿ ಆದದ್ದೇನು?

ಅವನ ಅವಸ್ಥೆ ಕಂಡು ಹೇಮಂತನಿಗೆ ನಗೆ ಬಂದಿತು. ಹೊರಗಡೆ ಗೇಟಿನ ಬಳಿ ಕಾವಲಿದ್ದ ಸುಷ್ಮಾ ಹಾಗೂ ಅಶೋಕ ಬಿಸಿಬಿಸಿ ಮಾತು ನಡೆದದ್ದು ಕಂಡು ಒಳಿ ಬಂದವರೂ ಸಹ ಮುಸಿ ಮುಸಿ ನಗತೊಡಗಿದರು. ಶಾಂತಿಯ ಬಾಡಿದ ಮುಖದ ಮೇಲೆ ಕೆಂಪು ಛಾಯೆ ಮೂಡಿತು.

ಹೇಮಂತ ಚಂದ್ರನಾಥನನ್ನು ಉದ್ದೇಶಿಸಿ ನುಡಿದ, "ಇನ್‌ಸ್ಪೆಕ್ಟರ್– ನಾನು ಇನ್ನು ಒಂದು ಮಾತು ಹೇಳುತ್ತೇನೆ. ಬಹುಶಃ ನಿಮಗೆ ಗೊತ್ತಿರಬಹುದು. ನಾನು ಎಂ.ಎಸ್.ಸಿ. ಯೊಂದಿಗೆ ಎಲ್.ಎಲ್.ಎಂ. ಸಹ ಮಾಡಿರುವೆ. ಪ್ರಸಂಗ ಬಂದರೆ ಈ ಕೇಸನ್ನು ನನ್ನ ಕೈಗೆ ತೆಗೆದುಕೊಂಡು ನಿಮಗೆ ಏಳು ಕೆರೆ ನೀರು ಕುಡಿಸಬಲ್ಲೆ."

ಇನ್‌ಸ್ಪೆಕ್ಟರ್ ಚಂದ್ರನಾಥ ಹುಚ್ಚನಂತಾದ. ಜೇಬಿನಿಂದ ಕಾಗದವೊಂದನ್ನು ತೆಗೆದು ಅದನ್ನು ಪರಪರ ಹರಿದು ಬಿಸಾಡಿದ.

"ಯಾವ ಕಾಗದವದು?"

"ಪ್ರೊಫೆಸರರನ್ನು ಬಂಧಿಸಲಿಕ್ಕೆ ಅನುಮತಿ ಪತ್ರ." ಹೇಮಂತ ಅವನ ಕೈಯನ್ನು ತನ್ನ ಕೈಗೆ ತೆಗೆದುಕೊಂಡು ಸಮಾಧಾನ ಪಡಿಸುವ ಧ್ವನಿಯಲ್ಲಿ ನುಡಿದ, "ಚಂದ್ರನಾಥ ನಡೆದದ್ದಕ್ಕೆ ವ್ಯಥೆ ಪಡಬೇಡಿ. ಒಂದು ವೇಳೆ ಪ್ರೊಫೆಸರರೆ ನಿಜವಾದ ಅಪರಾಧಿಗಳಾಗಿದ್ದರೆ ನಾನೇ ಅವರನ್ನು ನಿಮ್ಮ ಕೈಗೆ ಒಪ್ಪಿಸುತ್ತೇನೆ...ಇನ್ನೂ ಒಂದು ವಿಷಯ ಪ್ರೊಫೆಸರರ ಮಾನಸಿಕ ಪರಿಸ್ಥಿತಿ ಸರಿಯಿಲ್ಲ."

"ಅಂದರೆ?"

"ಅಂದರೆ ಅವರ ಪರಿಸ್ಥಿತಿ ಹುಚ್ಚರಂತಾಗಿದೆ. ಅವರು ಮೂರು ಬಾರಿ ತಮ್ಮ ಪತ್ನಿಯನ್ನು ಕೊಲ್ಲಲು ಪ್ರಯತ್ನಿಸಿದ್ದಾರೆ."

ಮುಂದೆ ಹೇಮಂತ ಎಲ್ಲಾ ವಿಷಯ ವಿವರಿಸಿದ. "ಓಹ್ ಗಾಡ್ ನಾನೆಂಥ ತಪ್ಪು ಮಾಡುತ್ತಿದ್ದೆ. ಒಂದು ವೇಳೆ ನಾನು ಪ್ರೊಫೆಸರರನ್ನು ಬಂಧಿಸಿದ್ದರೆ, ಅವರ ಮಾನಸಿಕ ಪರಿಸ್ಥಿತಿ ಸರಿಯಿಲ್ಲವೆಂದು ನೀವು ವೈದ್ಯರಿಂದ

ಪ್ರಮಾಣ ಪತ್ರ ಪಡೆದು ನನ್ನೆಣಿಕೆ ಬುಡಮೇಲು ಮಾಡುತ್ತಿದ್ದಿರಿ ಅಲ್ಲವೇ?"

"ಕರೆಕ್ಟ್ ಇನ್‌ಸ್ಪೆಕ್ಟರ್...ಆದದ್ದೆಲ್ಲಾ ಆಯಿತು. ಬನ್ನಿ ಒಳಗೆ ಹೋಗುವಾ...ಪ್ರೊಫೆಸರರನ್ನು ನೋಡೋಣ."

ಅವರೆಲ್ಲಾ ಬಂದಾಗ ಸತ್ಯೇಂದ್ರ ಎದ್ದು ಕೂತು ಹುಚ್ಚರಂತೆ ಸುತ್ತಲೂ ನಿರೀಕ್ಷಿಸುತ್ತಿದ್ದರು. ಇನ್‌ಸ್ಪೆಕ್ಟರ್‌ರೊಂದಿಗೇ ಒಂದು ಗುಂಪೇ ಬಂದಿದ್ದನ್ನು ಕಂಡು ಗಾಬರಿಯಾಗಿ, ಶಾಂತಿಯತ್ತ ನೋಡಿ ಕೇಳಿದರು. "ಡಾರ್ಲಿಂಗ್... ಇದೇನು ಇಷ್ಟು ಜನ?"

ಶಾಂತಿಗೆ ದುಃಖ ಉಕ್ಕಿ ಬಂದಿತು. ಮಾತನಾಡಲಿಲ್ಲ. ಆಕೆ ಮಂಚದ ಮೇಲೆ ಕುಳಿತಿದ್ದ ಸತ್ಯೇಂದ್ರನ ಮಡಿಲಲ್ಲಿ ಉರುಳಿ ಘೋರೆಂದು ಅಳಲಾರಂಭಿಸಿದಳು. ಸತ್ಯೇಂದ್ರ ಸಮಾಧಾನಪಡಿಸಿದಷ್ಟು ಆಕೆಯ ಅಳು ಹೆಚ್ಚಾಯಿತೇ ವಿನಃ ಕಡಿಮೆಯಾಗಲಿಲ್ಲ . ಹೇಮಂತ ಪ್ರೊಫೆಸರರಿಗೆ ಎಲ್ಲಾ ವಿಷಯ ತಿಳಿಸಿದ.

ಸತ್ಯೇಂದ್ರ ದಂಗು ಬಡಿದು ಕುಳಿತುಬಿಟ್ಟ. ಶಾಂತಿಯ ದುಃಖ ಶಮನವಾಗಿತ್ತು. ಆಕೆ ಎದ್ದು ಬಾತ್‌ರೂಮಿಗೆ ಹೋಗಿ ಮುಖ ತೊಳೆದುಕೊಂಡು ಬಂದಳು. ಹೇಮಂತ ಕೇಳಿದ. "ಪ್ರೊಫೆಸರ್ ನಿನ್ನೆ ರಾತ್ರಿ ನಿಮಗೂ ಕ್ಯಾಪ್ಟನ್ ಆನಂದ ಅವರಿಗೂ ಯಾವ ವಿಷಯದ ಬಗ್ಗೆ ತಂಟೆ ನಡೆಯಿತು?''.

''ಏಕೆ ಇದಕ್ಕೆ ಉತ್ತರ ಕೊಡುವುದು ಅವಶ್ಯವೇ?''

"ಅವಶ್ಯ ಪ್ರೊಫೆಸರ್ ಇಲ್ಲದಿದ್ದರೆ ನೀವು ತಪ್ಪಿತಸ್ಥರಾಗುತ್ತೀರಿ ನಿಮ್ಮ ಮೇಲೆ ಸಂಶಯ ಗಾಢವಾಗುತ್ತದೆ."

ಒಂದು ನಿಮಿಷ ಶಾಂತಿಯತ್ತ ನೋಡಿ ಸತ್ಯೇಂದ್ರ ನುಡಿದ. ''ನಾನೊಂದು ಪ್ರಕಾಶನ ಸಂಸ್ಥೆ ಸ್ಥಾಪಿಸಲು ಯೋಚಿಸಿದ್ದೆ. ಅದಕ್ಕಾಗಿ ನನಗೆ ಐವತ್ತು ಸಾವಿರ ರೂಪಾಯಿ ಬೇಕಾಗಿದ್ದವು. ಶಾಂತಿಯ ಹೆಸರಿಗಿದ್ದ ವಿಮೆಯ ಮೇಲೆ ಸಾಲ ತೆಗಿಸಿ ಕೊಡಿ ಎಂದು ಕೇಳಿದೆ. ಅದಕ್ಕವರು ಒಪ್ಪಲಿಲ್ಲ. ಹೆಂಡತಿಯ ಹಣದ ಮೇಲೆ ಬದುಕುವವ ಎಂದರು. ನನಗೆ ಕೋಪ ತಡೆಯಲಾಗಲಿಲ್ಲ. ಬಾಯಿ ಮುಚ್ಚಿ ಎಂದೆ. ಅವರು ಕೋಪದಿಂದ ಅರಚುತ್ತ ವಾಕಿಂಗ್ ಸ್ಟಿಕ್ ತೆಗೆದುಕೊಂಡು ಹೊಡೆಯಲು ಬಂದರು. ಅಷ್ಟರಲ್ಲಿ ಶಾಂತಿ ಬಂದಳು. ಅನರ್ಥ ಅಲ್ಲಿಗೆ ನಿಂತಿತು.''

"ಆಮೇಲೂ ನೀವೇ ಮುಂದಾಗಿ ಹಾಲು ಕೊಡಲು ಹೋದಿರಲ್ಲ?... ಇದು ಸಂಶಯಕ್ಕೆ ಆಸ್ಪದ ನೀಡುವುದಿಲ್ಲವೇ?" ಚಂದ್ರನಾಥ ಕೇಳಿದನು.

‥ಅವಶ್ಯವಾಗಿ ನೀಡುತ್ತದೆ ಇನ್‌ಸ್ಪೆಕ್ಟರ್, ಇಲ್ಲವೆಂದವರು ಯಾರು? ಆದರೆ ನಾನು ಹೋದ ಉದ್ದೇಶ ಅವರೊಂದಿಗೆ ನನ್ನ ಉದ್ಧಟತನಕ್ಕಾಗಿ ಕ್ಷಮೆ ಕೇಳಲು ನಾನು ಅವರ ಬಳಿ ಹೋದೆ. ಗಟ್ಟಿಯಾಗಿ ಕಾಲು ಹಿಡಿದುಕೊಂಡು

ನಾನು ಕ್ಷಮಿಸಲು ಕೇಳಿದೆ ''

ಆಮೇಲೆ ಹೇಮಂತ ಕೇಳಿದ, ''ಅವರೇ ನನಗೆ ಸಮಾಧಾನ ಹೇಳಿದರು. ತಾವು ದುಡುಕಿದ್ದು ತಪ್ಪಾಯಿತು ಎಂದರು. ನನಗೆ ಸಮಾಧಾನವಾಯಿತು. ನಾನು ಸಂತೋಷದಿಂದ ಹುಚ್ಚನಂತಾಗಿದ್ದ ಮೇಲೆದ್ದೆ. ಅಷ್ಟರಲ್ಲಿ ಮೇಜಿನ ಬಳಿ ಒಂದು ಸೀಸೆ ಬಿದ್ದಿದ್ದನ್ನು ಕಂಡೆ. ಅದನ್ನು ಎತ್ತಿಕೊಂಡು ಮೇಜಿನ ಮೇಲಿಟ್ಟು ರೂಮಿಗೆ ಬಂದೆ.''

## 10. ಸಾವಿಗೆ ಏನು ಕಾರಣ?

ಹೇಮಂತ ಅರ್ಥಪೂರ್ಣವಾಗಿ ಇನ್‌ಸ್ಪೆಕ್ಟರ್ ಕಡೆ ನೋಡಿದ. ಚಂದ್ರನಾಥನಿಗೆ ತಿಳಿಯಿತು. ನಿದ್ದೆ ಮಾತ್ರೆಯ ಸೀಸೆಯ ಮೇಲೆ ಪ್ರೊಫೆಸರರ ಬೆರಳಿನ ಗುರುತು ಮೂಡಿದ್ದು ಸ್ಪಷ್ಟವಾಗಿತ್ತು.

''ಆಮೇಲೆ ರೂಮಿಗೆ ಬಂದ ನೀವು ನಿದ್ದೆ ಗುಳಿಗೆ ಸೇವಿಸಿ ಮಲಗಿಕೊಂಡಿರಾ?''

''ಇಲ್ಲವಲ್ಲ, ಹೀಗೆಂದು ನಿಮಗಾರು ಹೇಳಿದರು? ನಿದ್ದೆ ಮಾತ್ರೆ ಸೇವಿಸಿ ನನಗೆ ಅಭ್ಯಾಸವಿಲ್ಲ. ಅಲ್ಲದೆ, ನನ್ನ ಬಳಿ ಮಾತ್ರೆಗಳು ಇರಲಿಲ್ಲ.''

ಹೇಮಂತನಿಗೆ ತಲೆ ಸುತ್ತಿ ಬಂದಂತಾಯಿತು. ಹಾಗಾದರೆ ಪ್ರೊಫೆಸರರ ಹಾಲಿನ ಗ್ಲಾಸಿನಲ್ಲಿ ನಿದ್ದೆ ಮಾತ್ರೆ ಕೂಡಿಸಿದವರು ಯಾರು? ಮನೆಯಲ್ಲಿದ್ದವರು ತಾನೇ?

''ಹಾಗಾದರೆ...ಹಾಗಾದರೆ...ಶಾಂತಿ...ಶಾಂತಿ'' ಮುಂದೆ ಅವನಿಂದ ಯೋಚಿಸಲಿಕ್ಕಾಗಲಿಲ್ಲ. ಯೋಚಿಸುವದನ್ನೇ ಬಿಟ್ಟ. ಅಷ್ಟರಲ್ಲಿ ಫೋನಿನ ಗಂಟೆ ಬಾರಿಸಿತು. ಶಾಂತಿಯೇ ಮುಂದಾಗಿ ಎತ್ತಿ ಮಾತನಾಡಿದಳು. ನಂತರ ಚಂದ್ರನಾಥರ ಕಡೆ ಹೊರಳಿ ''ನಿಮಗೆ'' ಎಂದಳು. ಚಂದ್ರನಾಥ ಮುಂದೆ ಬಂದು ಫೋನು ಹಿಡಿದುಕೊಂಡು ಮಾತನಾಡಿದ, ಎರಡೇ ಎರಡು ಮಾತುಗಳು, ''ಹಾಂ ಸರಿ...ಬಂದೆ.'' ಫೋನು ಕೆಳಗಿಟ್ಟು ನಿಮ್ಮ ತಂದೆಯವರ ಬಾಡಿ ಕೊಡುತ್ತೇವೆ. ಪ್ರೊಫೆಸರ್ ಸಹ ಹೊರಡಲು ಸಹ ಸಿದ್ದರಾದರು. ಆಸ್ಪತ್ರೆಯಿಂದ ಹಾಗೆಯೇ ಶವವನ್ನು ಸ್ಮಶಾನಕ್ಕೆ ಒಯ್ಯಬೇಕೆಂದು ನಿರ್ಧಾರವಾಯಿತು. ಮುಂದಿನ ವ್ಯವಸ್ಥೆ ಮಾಡಲು ಪಕ್ಕದ ಮನೆಯ ನಾಲ್ಕಾರು ಜನ ಮುಂದಾದರು.

ಎರಡು ಗಂಟೆಯಾಗುವಷ್ಟರಲ್ಲಿ ಎಲ್ಲಾ ಕೆಲಸ ಮುಗಿದು ಹೋಗಿತ್ತು. ಹೇಮಂತ ಅವರಿಂದ ಬೀಳ್ಕೊಟ್ಟು ಸಂಜೆ ಏಳು ಗಂಟೆಗೆ ಬರುವದಾಗಿ ತಿಳಿಸಿ ಮನೆ ಕಡೆ ನಡೆದ. ಅಶೋಕ, ಸುಷಮಾ ಅವನನ್ನು ಹಿಂಬಾಲಿಸಿದರು. ಹೇಮಂತನ ತಲೆ ಯೋಚನೆಯಿಂದ ಭಾರವಾಗಿತ್ತು. ಎಂತಹ ವಿಚಿತ್ರವಾದ ಕೇಸು ಈ ಕೇಸಿಗೆ ಸಂಬಂಧಪಟ್ಟ ಎಲ್ಲ ವ್ಯಕ್ತಿಗಳು ಒಂದು ಬಾರಿ ಅಪರಾಧಿಗಳೆಂದು ಕೊಂಡರೆ ಮತ್ತೊಮ್ಮೆ ನಿರಪರಾಧಿಗಳಾಗಿ ತೋರುತ್ತಿದ್ದರು. ಯಾವ ಕಡೆಯಿಂದ ಯೋಚಿಸಿದರೂ ಅದು ಕೊನೆಗೆ ಬಂದು ನಿಲ್ಲುತ್ತಿದ್ದುದು ಒಂದೇ ಕಡೆ. ಅದು ಎಲ್ಲಿಂದ ಪ್ರಾರಂಭವಾಗಿತ್ತೋ ಅಲ್ಲಿಗೆ.

ಮನೆಗೆ ಬಂದು ಸ್ನಾನ ಊಟ ಮುಗಿಸಿದ ನಂತರ, ಹೇಮಂತ ಸುಷ್ಮಾಳಿಗೆ ಸುಧಾಕರನ ವಿಳಾಸ ತಿಳಿಸಿ ಅವನ ಮೇಲೆ ನಿಗಾ ಇಡಲು ಕಳಿಸಿದ. ಅಶೋಕ ಶಾಂತಿಯ ಮನೆ ಕಡೆ ನಡೆದ. ಹೇಮಂತ ತನ್ನ ಡೈರಿ ತೆಗೆದು ಅದರಲ್ಲಿ ಕೇಸಿನ ವಿಷಯ ಒಂದೊಂದಾಗಿ ಬರೆಯತೊಡಗಿದ. ಸಮಸ್ಯೆಗಳ ಪಟ್ಟಿಮಾಡಿ ಅವುಗಳನ್ನು ಬಿಡಿಸುತ್ತ ನಡೆದ. ಸಂಶಯ ಬರುವ ವ್ಯಕ್ತಿಗಳ ಹೆಸರು ಬರೆದು ತೆಗೆದ. ನಂತರ ಹೊಡೆದು ಹಾಕಿದ. ಕೊನೆಗೆ ಅವನ ತಲೆಯಲ್ಲಿ ಉಳಿದದ್ದು ಒಂದೇ ವ್ಯಕ್ತಿ. ಸಂಜೆ ಪ್ರೊಫೆಸರರನ್ನು ಡಾಕ್ಟರ್ ಶಹಾರ ಬಳಿ ಕರೆದುಕೊಂಡು ಹೋಗಿ ಬಂದ ನಂತರ ಮುಂದಿನ ನಿರ್ಣಯ ತೆಗೆದುಕೊಂಡರಾಯಿತೆಂದು ನಿರ್ಧರಿಸಿ ಡೈರಿಮುಚ್ಚಿ ಮೇಲೆದ್ದಾಗ ಸಂಜೆ ಐದು ಗಂಟೆ ಸಮೀಪಿಸಿತು.

"ಹೀಗೆ ಏಕಾಗುತ್ತದೆಯೋ ನನಗೇ ತಿಳಿಯದು. ಒಮ್ಮೆಲೆ ಮೈಯಲ್ಲಿ ಮಿಂಚು ಸುಳಿದಂತಾಗುತ್ತದೆ. ಮಲಗಿದ್ದರೆ ಬಡಿದು ಎಬ್ಬಿಸಿದಂತಾಗುತ್ತದೆ. ಎದ್ದು ಕೂಡುತ್ತೇನೆ, ಯಾರೋ ಕಿವಿಯಲ್ಲಿ ಅತೀ ಮೆಲುವಾಗಿ ''ನಿನ್ನ ಹೆಂಡತಿ ಕುಲಟೆ ಮೋಸಗಾತಿ ಆಕೆಯನ್ನು ಕೊಲ್ಲು'' ಎಂದು ಹೇಳುತ್ತಾರೆ. ನಾನು ಮೇಲೇಳುತ್ತೇನೆ. ನನ್ನ ಪತ್ನಿಯ ಮೇಲೆ ಆಕ್ರಮಣ ಮಾಡುತ್ತೇನೆ. ಅದರ ಹಿಂದೆಯೇ ''ನೀನು ಪಾಪಿ. ನಿನ್ನ ಹೆಂಡತಿಯನ್ನು ಕೊಲ್ಲಬಯಸಿದೆ, ನೀನು ಪಾಪಿ'' ಎಂದಂತಾಗುತ್ತದೆ,ನಾನು ಅಳಲಾರಂಭಿಸುತ್ತೇನೆ. ಸ್ವಲ್ಪ ಹೊತ್ತು ಅತ್ತ ನಂತರ '' ಇನ್ನು ಅಳುವದು ಸಾಕು ನೀನಿನ್ನು ಮಲಗು, ನಿನಗೆ ವಿಶ್ರಾಂತಿ ಬೇಕಾಗಿದೆ. ಬೆಳಗಿನ ಹತ್ತು ಗಂಟೆಯ ತನಕ ಮಲಗಿಕೊ'' ಎಂದು ಆಜ್ಞೆ ಆಗುತ್ತದೆ. ನಾನು ಮಲಗಿಕೊಳ್ಳುತ್ತೇನೆ.''

ಪ್ರೊಫೆಸರ್ ಸತ್ಯೇಂದ್ರ ಹೇಳುತ್ತ ನಡೆದಿದ್ದರು. ಅವರ ಸುತ್ತಲೂ ನಿಂತಿದ್ದ ಹೇಮಂತ, ಶಾಂತಿ, ಚಂದ್ರನಾಥ ಹಾಗೂ ಡಾಕ್ಟರ್ ಶಹಾ ತನ್ಮಯರಾಗಿ ಕೇಳುತ್ತಿದ್ದರು. ಪ್ರೊಫೆಸರರ ದೃಷ್ಟಿ ಎದುರಿಗೆ ಗೋಡೆಗೆ ತೂಗು

ಹಾಕಿದ ದೊಡ್ಡ ಗಡಿಯಾರದ ಪೆಂಡ್ಯುಲಮ್ ಮೇಲೆ ಕೇಂದ್ರೀಕೃತವಾಗಿತ್ತು. ಪೆಂಡ್ಯುಲಮ್ ಹೊರತಾಗಿ ಕೋಣೆಯ ಯಾವ ಭಾಗದಲ್ಲಿಯೂ ಬೆಳಕಿರಲಿಲ್ಲ. ಕೇವಲ ಪೆಂಡ್ಯುಲಮ್ ಮಾತ್ರ ಬೆಳಕಿನಲ್ಲಿ ಮಿಂದು ಥಳ ಥಳ ಹೊಳೆಯುತ್ತ ಅತ್ತಿತ್ತ ಚಲಿಸುತ್ತಿತ್ತು. ಡಾಕ್ಟರ್ ಶಹಾ ಕೇಳಿದರು,

''ನಿಮ್ಮ ಕಿವಿಯಲ್ಲಿ ಉಸುರುವವರು ಯಾರು ಎಂದು ಗೊತ್ತಿದೆಯೆ?''

''ಇಲ್ಲ.''

''ಅವರ ಧ್ವನಿಯ ಗುರುತು ಹತ್ತುತ್ತದೆಯೆ?''

"ಇಲ್ಲ.''

''ಅವರು ಪುರುಷರೋ ಸ್ತ್ರೀಯರೋ?"

"ಅದು ನನಗೆ ತಿಳಿಯದು."

"ಅವರ ಮಾತನ್ನು ಧಿಕ್ಕರಿಸಲು ಆಗದೆ?"

"ಸಾಧ್ಯವಾಗದು. ಹಾಗೇನಾದರೂ ಆದರೆ ನನ್ನ ಹೃದಯಕ್ರಿಯೆ ನಿಂತು ನಾನು ಸತ್ತೇ ಹೋಗುತ್ತೇನೆ."

ಡಾಕ್ಟರ್ ಶಹಾ ಅವರನ್ನು ಹಿಡಿದು ಅಲ್ಲಿದ್ದವರೆಲ್ಲ ಪ್ರೊಫೆಸರರ ಮಾತು ಕೇಳಿ ಬೆಚ್ಚಿ ಬಿದ್ದರು. ಎಂತಹ ವಿಚಿತ್ರ ಮಾತು. ಶಹಾ ಒಂದು ಕ್ಷಣ ಬಿಟ್ಟು ಕೇಳಿದರು, "ಹೃದಯಕ್ರಿಯೆ ನಿಂತು ಸಾಯಲು ಕಾರಣವೇನು?"

"ನನಗೆ ಗೊತ್ತಿಲ್ಲ. ಕಿವಿಯಲ್ಲಿ ಉಸುರಿದಂತೆ ನಾನು ನಡೆಯದಿದ್ದರೆ ನನ್ನ ಹೃದಯಕ್ರಿಯೆ ನಿಂತತಾಗುತ್ತದೆ. ನಾನು ಪ್ರತಿಭಟಿಸುವಂತಿಲ್ಲ, ಪ್ರತಿಭಟಿಸಿದರೆ ಮೀನಿನಂತೆ ಚಡಪಡಿಸಿ ಸಾಯುತ್ತೇನೆ."

"ಈ ರೀತಿ ಯಾರು ಹೇಳಿದರು ಪ್ರೊಫೆಸರ್?"

"ಅವರು ಯಾರೋ ನನಗೆ ಗೊತ್ತಿಲ್ಲ. ಕಿವಿಯಲ್ಲಿ ಪಿಸುಗುಡುತ್ತಾರೆ. ಅಷ್ಟೇ ಅವರು ಹೇಳಿದಂತೆ ಕೇಳಬೇಕಾಗುತ್ತದೆ. ನನಗೆ ಸಾಯಲು ಇಷ್ಟವಿಲ್ಲ."

"ನೀವು ಬದುಕಿ ಪ್ರೊಫೆಸರ್ ಆದರೆ ನೀವೇ ನಿಮ್ಮ ಪತ್ನಿಯನ್ನು ಕೊಲ್ಲ ಬಯಸುವದೆಂದರೆ..."

"ನಾನೆಲ್ಲಿ ನನ್ನ ಪತ್ನಿಯನ್ನು ಕೊಲ್ಲಬಯಸುತ್ತೇನೆ?"

"ಹಾಗಾದರೆ ಮೂರು ಸಾರಿ ಪ್ರಯತ್ನಿಸಿದ್ದು ಸುಳ್ಳೆ?"

"ಅದು ನಾನಾಗಿ ಮಾಡಿದ್ದಲ್ಲ; ಅವರು ಹೇಳಿದಂತೆ ಮಾಡಿದ್ದು, ನಾನು ಶಾಂತಿಯನ್ನು ಬಹಳ ಪ್ರೀತಿಸುತ್ತೇನೆ. ಅವಳನ್ನು ಬಿಟ್ಟು ನಾನು ಒಂದು ಅರೆ ಘಳಿಗೆ ಸಹ ಇರಲಾರೆ...ಆದರೆ...ಆದರೆ"

ಒಮ್ಮೆಲೆ ಕೋಣೆಯಲ್ಲಿ ಬಿಕ್ಕಳಿಕೆಯ ಸದ್ದು. ಹೇಮಂತನಿಗೆ ತಿಳಿಯಿತು

ಆ ಬಿಕ್ಕಳಿಕೆ ಶಾಂತಿಯದೆಂದು. ಆತ ಶಹಾರ ಕಡೆ ಹೊರಳಿ ಹೇಳಿದ, "ಡಾಕ್ಟರ್ ಶಹಾ. ಸಾಕು ನನಗೆಲ್ಲಾ ಅರ್ಥವಾಗಿದೆ..."

ಡಾಕ್ಟರ್ ಶಹಾ ಪ್ರೊಫೆಸರರನ್ನೇ ದಿಟ್ಟಿಸುತ್ತ ನುಡಿದರು, "ಪ್ರೊಫೆಸರ್ ಸತ್ಯೇಂದ್ರ...ನೀವು ಬಹಳ ದಣಿದಿದ್ದೀರಿ, ನಿಮಗೆ ವಿಶ್ರಾಂತಿಯ ಅವಶ್ಯಕತೆಯಿದೆ, ಒಂದು ಗಂಟೆ ಮಲಗಿ ಸುಖವಾಗಿ ನಿದ್ರಿಸಿ...ಆದರೆಒಂದು ಮಾತು... ಇದೀಗ ನಡೆದದ್ದು ನಾವು ಕೇಳಿದ್ದು...ನೀವು ಹೇಳಿದ್ದು ಎಲ್ಲಾ ಮರೆತುಬಿಡಿ. ತಿಳಿಯಿತೆ? ನಿಮಗೇನೂ ತಿಳಿಯದು . ನೀವೆಲ್ಲ ಮರೆತಿದ್ದೀರಿ''

''ಹೌದು ನನಗೇನೂ ತಿಳಿಯದು.''

"ಗುಡ್...ನೀವಿನ್ನು ಮಲಗಿ...ನಿದ್ರಿಸಿ ಒಂದು ಗಂಟೆ..."

ಪೆಂಡ್ಯುಲಮ್ ದೃಷ್ಟಿಸುತ್ತಿದ್ದ ಸತ್ಯೇಂದ್ರನ ಕಣ್ಣುಗಳು ನಿಧಾನವಾಗಿ ಮುಚ್ಚಿಕೊಳ್ಳಲಾರಂಭಿಸಿದವು. ಮರುಕ್ಷಣ ಅವರು ದೀರ್ಘ ನಿದ್ರೆಯ ಸೆರೆಯಾಳಾದರು. ಅವರನ್ನು ಬದಿಯಲ್ಲಿದ್ದ ಮಂಚದ ಮೇಲೆ ಎತ್ತಿಹಾಕಿ ಮಲಗಿಸಿದ ಮೇಲೆ ಒಬ್ಬೊಬ್ಬರಾಗಿ ಹೊರಗೆ ಬಂದರು. ಡಾಕ್ಟರ್ ಸಹ ಗಂಭೀರವಾಗಿದ್ದರು. ಹೇಮಂತ ಅವರೊಡನೆ ಸಂಭಾಷಣೆಗಿಳಿದ.

"ಡಾಕ್ಟರ್ ನಿಮ್ಮ ಅಭಿಪ್ರಾಯವೇನು?"

"ಹೇಮಂತ...ನನಗೆನಿಸುವ ಮಟ್ಟಿಗೆ ಪ್ರೊಫೆಸರ್ ಮೇಲೆ ಸಮ್ಮೋಹಿನಿಯ ಪ್ರಭಾವವಾಗಿದೆ. ಯಾರೋ ಹಿಪ್ನಾಟಿಸಂ ಮೂಲಕ ಅವರಿಂದ ಈ ಕೆಲಸ ಮಾಡಿಸುತ್ತಿದ್ದಾರೆ."

"ಇದರಿಂದ ಬಿಡುಗಡೆ ಇಲ್ಲವೇ?" ಶಾಂತಿ ಕೇಳಿದಳು. ಅವಳ ಧ್ವನಿ ಗವಿಯಿಂದ ಬಂದಂತಿತ್ತು. ಶಹಾ ಅವಳ ಕಡೆ ನೋಡುತ್ತ ನುಡಿದರು:

'ಇದೆ, ಅದಕ್ಕೆ ಆತ್ಮವಿಶ್ವಾಸವೊಂದೇ ದಾರಿ. ನಾನು ಸಮ್ಮೋಹಿನಿಗೆ ಒಳಗಾಗಲಾರೆ. ನಾನು ನಿನ್ನ ಶಕ್ತಿಗೆ ತಲೆ ಬಾಗಲಾರೆ ಎಂದು ದೃಢಸಂಕಲ್ಪ ಮಾಡಬೇಕು. ಯಾವದೇ ಕೆಲಸ ಹೇಳಿದರೂ ನಾನು ಮಾಡುವದಿಲ್ಲ ಎಂದು ಹಟ ಮಾಡಬೇಕು...ಆದರೆ ಆ ಶಕ್ತಿ ಪ್ರೊಫೆಸರರ ಬಳಿ ಇಲ್ಲ. ಅವರನ್ನು ಬಹಳಷ್ಟು ಮಟ್ಟಿಗೆ ಭಯಪಡಿಸಲಾಗಿದೆ. ನಮ್ಮ ಮಾತು ಕೇಳದಿದ್ದರೆ ನಿಮ್ಮ ಹೃದಯ ಕ್ರಿಯೆ ನಿಂತೇ ಹೋಗುತ್ತದೆ ಎಂದು ಭೀತಿ ಹುಟ್ಟಿಸಿದ್ದರಿಂದ ಪ್ರೊಫೆಸರ್ ಪೂರ್ತಿ ಆ ಅದೃಷ್ಟ ವ್ಯಕ್ತಿಯ ಕೈಗೊಂಬೆಯಾಗಿದ್ದಾರೆ...ನೋಡೋಣ ಎರಡು ಮೂರು ದಿನಗಳಲ್ಲಿ ಸರಿಹೋಗದಿದ್ದರೆ ನಾನೊಂದು ಉಪಾಯ ಮಾಡುತ್ತೇನೆ. ದಯವಿಟ್ಟು ಎರಡು ಮೂರು ದಿವಸ ಅವರ ಚಲನವಲನದ ಮೇಲೆ ಕಣ್ಣಿಡಿರಿ."

"ಕಣ್ಣಿಡಿರಿ ಅಂದರೆ..."

"ಅಂದರೆ ಇನ್ನು ಮೇಲೆ ಅವರ ವರ್ತನೆಯಲ್ಲಿ ಬದಲಾವಣೆ ಆಗಬಹುದು. ಕ್ಯಾಪ್ಟನ್ ಆನಂದರ ಸಾವು ಅವರನ್ನು ಪ್ರಚೋದಿಸಬಹುದು. ಹೀಗಾಗಿ ಪ್ರೊಫೆಸರ್ ಮತ್ತಷ್ಟು ಉದ್ರಿಕ್ತರಾಗಿ ಹಿಂಸಾಪ್ರವೃತ್ತಿಗಿಳಿದರೂ ಇಳಿಯಬಹುದು."

"ಓಹ್...ಹಾಗಾದರೆ ಶಾಂತಿಯವರು ಬಹಳ ಎಚ್ಚರಿಕೆಯಿಂದಿರಬೇಕು ಎಂದಾಯಿತು."

"ಹೌದು ..ಅದಕ್ಕಾಗಿಯೇ ನಾನೀ ಮಾತನ್ನು ಹೇಳುತ್ತಿರುವದು" ಮಧ್ಯೆ ಮಾತನಾಡಿದ ಹೇಮಂತ್‌ಗೆ ಡಾಕ್ಟರ್ ಶಹಾ ಉತ್ತರಿಸಿದರು.

ಅಲ್ಲಿಗೆ ವಾರ್ತಾಲಾಪ ಮುಗಿಯಿತು.

ಶಹಾ ಆಳನ್ನು ಕರೆದು ಕಾಫಿ ತರಲು ತಿಳಿಸಿ ತಮ್ಮ ಕಾರ್ಯದಲ್ಲಿ ವ್ಯಸ್ತರಾದರು. ಕಾಫಿ ಬರುತ್ತಲೂ ಕಾಫಿ ಕುಡಿದ ಚಂದ್ರನಾಥ ಪುನಃ ಭೇಟಿಯಾಗುವದಾಗಿ ತಿಳಿಸಿ ಹೊರಟು ಹೋದ. ಶಾಂತಿ ಹೇಮಂತನಿಗೆ ಸಂಜ್ಞೆ ಮಾಡಿದಳು. ಹೇಮಂತನಿಗೆ ಅರ್ಥವಾಯಿತು. ಆಕೆ ತನ್ನೊಂದಿಗೆ ರಹಸ್ಯವಾಗಿ ಮಾತನಾಡಬಯಸಿದ್ದಾಳೆಂದು ಆಕೆಯೊಂದಿಗೆ ಹೊರಬಂದ.ಚಿಕ್ಕ ಪಾರ್ಕಿನಲ್ಲಿ ಹಾಸಿದ್ದ ಕಲ್ಲು ಹಾಸಿಗೆಯ ಮೇಲೆ ಅವರಿಬ್ಬರೂ ಕುಳಿತರು. ಶಾಂತಿ ಮಾತು ಪ್ರಾರಂಭಿಸಿದಳು:

"ಮೇಜರ್ ನನಗೆ ನಿಮ್ಮ ಮಾತು ಸರಿ ಎನ್ನಿಸುತ್ತದೆ."

"ಯಾವ ಮಾತು?"

"ಸುಧಾಕರನೇ ಏಕೆ ಪ್ರೊಫೆಸರರ ಮೇಲೆ ಸಮ್ಮೋಹಿನಿ ಪ್ರಯೋಗಿಸುತ್ತಿರಬಾರದು?"

"ನಿನ್ನೆ ನಾನು ಈ ಮಾತು ಹೇಳಿದಾಗ ನೀವು ಅದು ಸಾಧ್ಯವಾಗದ ಮಾತು ಎಂದಿದ್ದೀರಿ?"

"ಹೌದು, ಆದರೆ ನಿನ್ನೆಯ ಪರಿಸ್ಥಿತಿ ಬೇರೆಯಾಗಿದೆ. ಈಗಿನ ಪರಿಸ್ಥಿತಿ ಬೇರೆಯಾಗಿದೆ. ಸುಧಾಕರ ಹೇಗೂ ಈ ವಿದ್ಯೆಯಲ್ಲಿ ನುರಿತವ. ಮೊದಲಿನಿಂದಲೂ ಆಸೆ ಇಟ್ಟುಕೊಂಡವ. ಅದಕ್ಕಾಗಿ ಹೀಗೆ ಮಾಡುತ್ತಿರಬಹುದು."

"ಒಂದು ದೃಷ್ಟಿಯಿಂದ ನಿಮ್ಮ ಮಾತನ್ನು ಒಪ್ಪುವಾ, ಆದರೆ ಸುಧಾಕರ ಇಷ್ಟು ದಿವಸ ಅಂದರೆ ನಾಲ್ಕು ವರ್ಷ ಎಲ್ಲಿದ್ದ? ನಾಲ್ಕು ವರ್ಷದ ಮೇಲೇ ಈಗೇಕೆ ಈ ಕೆಲಸ ಮಾಡುತ್ತಿದ್ದಾನೆ. ಈ ಕೆಲಸ ಮೊದಲೇ ಏಕೆ ಮಾಡಲಿಲ್ಲ?"

ಒಂದು ನಿಮಿಷ ಯೋಚಿಸಿ ಶಾಂತಿ ನುಡಿದಳು: "ಆಗಲೇ ಆತ ಈ ದಾರಿ ಹಿಡಿದಿದ್ದರೆ ಒಮ್ಮೆಲೆ ಆತನ ಮೇಲೆ ಸಂಶಯ ಬರುತ್ತಿತ್ತು. ಅಲ್ಲದೇ ಆತ ಆಗ ಹಿಪ್ನೊಟಿಸಂ ಕಲಿತಿರಲಿಕ್ಕಿಲ್ಲ . ನನ್ನ ಮದುವೆಯಾದ ಮೇಲೆ ಧಾರವಾಡದಲ್ಲಿ

ರುವದು ಆತನಿಗೆ ತಿಳಿದಿರಲಿಕ್ಕಿಲ್ಲ."

ಶಾಂತಿಯ ಆ ವಾದಕ್ಕೆ ಹೇಮಂತ ಒಪ್ಪಲೇಬೇಕಾಯಿತು. ಒಂದು ದೃಷ್ಟಿಯಿಂದ ಅವನಿಗೆ ಅಚ್ಚರಿ, ಶಾಂತಿ ಒಮ್ಮೆಲೇ ಇಷ್ಟೇಕೆ ಚುರುಕಾದಳು? ಸುಧಾಕರನ ಬಗ್ಗೆ ವಕಾಲತ್ತು ಏಕೆ ವಹಿಸುತ್ತಿದ್ದಾಳೆ? ಅವನ ಮೇಲೆ ಈಕೆಗೇಕೆ ದ್ವೇಷ ಒಮ್ಮೆಲೆ ಹುಟ್ಟಿಕೊಂಡಿತು? ಒಂದು ವೇಳೆ ಸುಧಾಕರ ಹಾಗೂ ಶಾಂತಿ ಕೂಡಿಕೊಂಡೇ ಈ ನಾಟಕ ಆಡುತ್ತಿದ್ದಾರೆಯೇ? ಆನಂದ ಅಂತೂ ತೀರಿಕೊಂಡರು. ಇನ್ನು ಸತ್ಯೇಂದ್ರ ಶಾಂತಿ ಒಮ್ಮೆಲೇ ಇಪ್ಪತ್ತು ಮೂವತ್ತು ಲಕ್ಷ ರೂಪಾಯಿಯ ಒಡತಿಯಾಗುತ್ತಾಳೆ. ಸುಧಾಕರನೊಂದಿಗೆ ಮಜವಾಗಿರಬಹುದು...

"ಹೇಮಂತ...ನಿಮಗೆ ಫೋನಿದೆ...ಚಂದ್ರನಾಥರು ಕರೆಯುತ್ತಿದ್ದಾರೆ."

ಶಂಕರ ಮಾತಿಗೆ ಹೇಮಂತ ಯೋಚನಾಲಹರಿಯಿಂದ ಮೇಲೆ ಬಂದ. ಫೋನು ಇದ್ದ ರೂಮಿಗೆ ಧಾವಿಸಿದ. ಹಿಂಬಾಲಿಸಿದಳು ಶಾಂತಿ. ಒಳಗೆ ಬರುವಷ್ಟರಲ್ಲಿ ಹೇಮಂತ ಮಾತು ಮುಗಿಸಿದ್ದ. ಫೋನು ಕೆಳಗಿಡುತ್ತ ಶಾಂತಿಗೆ ಹೇಳಿದ, "ಮಿಸೆಸ್ ಶಾಂತಿ...ನಾನು ಹೋಗುತ್ತಿದ್ದೇನೆ ನೀವು ಆಮೇಲೆ ಸತ್ಯೇಂದ್ರನ ಜೊತೆ ಬನ್ನಿ...ನಾನು ನಾಳೆ ಬೆಳಿಗ್ಗೆ ನಿಮ್ಮನ್ನು ಭೇಟಿಯಾಗುತ್ತೇನೆ..."

## 11. ಬೆಕ್ಕಿನ ಹೆಜ್ಜೆ

ಡಾಕ್ಟರ್ ಶಹಾರಿಗೆ ವಂದಿಸಿದ ಹೇಮಂತ ತನ್ನ ಕಾರಿನತ್ತ ನಡೆದ. ಒಂದೇ ಕ್ಷಣದ ನಂತರ ಅವನ ಕಾರು ಪೋಲಿಸ್ ಸ್ಟೇಷನ್ ಕಡೆ ಬಂದೂಕಿನಿಂದ ಹೊರಟ ಗೋಲಿಯಂತೆ ಓಡತೊಡಗಿತು.

ಅವನ ತಲೆಯ ತುಂಬಾ ಶಾಂತಿಯೇ ತುಂಬಿಕೊಂಡಿದ್ದಳು. ಅವಳ ಹಿಂದೆ ಸುಧಾಕರ ನಿಂತು ನಗುತ್ತಿದ್ದಂತೆ ಭಾಸವಾಗುತ್ತಿತ್ತು.

ಚಂದ್ರನಾಥ ಆಫೀಸಿನಲ್ಲಿದ್ದ. ಅವನೆದುರು ಸುಮಾರು ಇಪ್ಪತ್ತು ವರ್ಷದ ಯುವಕನೊಬ್ಬ ಕುಳಿತಿದ್ದ. ಚಂದ್ರನಾಥ ಹೇಮಂತನನ್ನು ಸ್ವಾಗತಿಸಿ ಕುಳ್ಳಿರಿಸಿದ. ಎದುರಿಗಿದ್ದ ಯುವಕನ ಪರಿಚಯ ಮಾಡಿಕೊಟ್ಟ.

''ಇವರ ಹೆಸರು ರಮಾಕಾಂತ, ಬಿ. ಎ. ಫೈನಲ್‌ನಲ್ಲಿ ಓದುತ್ತಿದ್ದಾರೆ. ಇವರು ಹೇಮಂತ, ಪತ್ತೆದಾರರು.''

ಹೇಮಂತ ಬೇಕೆಂತಲೇ ಅವನ ಕೈ ಕುಲುಕಿದ. ರಮಾಕಾಂತನಿಗೆ ಬಹಳ ಖುಷಿಯಾಯಿತು. ಚಂದ್ರನಾಥ ಮುಂದುವರೆದ, 'ನಿನ್ನೆ ರಾತ್ರಿ ಹನ್ನೊಂದು ಗಂಟೆಯ ಸುಮಾರಿಗೆ ಇವರು ಪ್ರೊಫೆಸರರ ಮನೆಯ ಕಿಟಕಿಯಿಂದ ಓರ್ವ ವ್ಯಕ್ತಿ ಪೈಪ್ ಮೂಲಕ ಕೆಳಗಿಳಿಯುವದನ್ನು ಕಂಡರಂತೆ.''

ಹೇಮಂತ ಬೆಚ್ಚಿ ಬಿದ್ದ. ರಾತ್ರಿ ಹನ್ನೊಂದು ಗಂಟೆಯೆಂದರೆ ಸತ್ಯೇಂದ್ರ ತನ್ನ ರೂಮಿಗೆ ಹೋದ ಸಮಯ. ಆನಂದ ಅವರ ಹಾಲಿನಲ್ಲಿ ಆ ವ್ಯಕ್ತಿಯೇ ಏಕೆ ನಿದ್ರೆ ಮಾತ್ರೆ ಸೇರಿಸಿರಬಾರದೆಂದು ಎಂಬ ಯೋಚನೆ.

ಹೇಮಂತ ರಮಾಕಾಂತನಿಗೆ ಕೇಳಿದ, ''ರಮಾಕಾಂತ ಆ ಸಮಯದಲ್ಲಿ ಅಲ್ಲೇಕೆ ಇದ್ದಿರಿ? ನಿಮ್ಮ ದೃಷ್ಟಿ ಅಲ್ಲೇಕೆ ಹೋಯಿತು?''

''ನಾನು ರಾತ್ರಿಯ ಆಟಕ್ಕೆ ಸಿನಿಮಾ ನೋಡಲು ಹೋಗಿದ್ದೆ. ಆದರೆ ಟಿಕೇಟು ದೊರೆಯಲಿಲ್ಲ. ಸ್ವಲ್ಪ ಹೊತ್ತು ಸುತ್ತಾಡಿ ಟೀ ಕುಡಿದು ನಡೆಯುತ್ತ ಬರುವಷ್ಟರಲ್ಲಿ ಹನ್ನೊಂದು ಗಂಟೆ ಹೊಡೆಯಿತು. ನನ್ನ ಮನೆಯೂ ಸಹ ಪ್ರೊಫೆಸರರ ಮನೆಯ ಹತ್ತಿರವೇ ಇದೆ. ಅವರ ಮನೆಯ ಮುಂದೆಯೇ ಹಾದು ಹೋಗಬೇಕು. ನನಗೆ ಪ್ರೊಫೆಸರರ ಪರಿಚಯವಿದೆ. ಹೀಗಾಗಿ ಸಹಜವಾಗಿ ನನ್ನ ದೃಷ್ಟಿ ಅವರ ಕೋಣೆಯತ್ತ ಹರಿಯಿತು. ಆಗ ಆ ವ್ಯಕ್ತಿ ಪ್ರೊಫೆಸರರ ಬದಿಯ ಕೋಣೆಯ ಕಿಟಕಿ ಬಳಿ ಇದ್ದ ಪೈಪಿನಿಂದ ಕೆಳಗಿಳಿಯುವದು ಕಂಡು ಬಂದಿತು.''

"ಸರಿ ನೀವೇಕೆ ಅವನನ್ನು ಹಿಡಿಯಲು ಪ್ರಯತ್ನಿಸಲಿಲ್ಲ. ಅಥವಾ ಇದರ ಬಗ್ಗೆ ಪ್ರೊಫೆಸರರಿಗೆ ಸೂಚನೆ ಕೊಡಬೇಕೆಂದು ಯೋಚಿಸಲಿಲ್ಲ.''

''ಅರೆ ಬಾಪ್‌ರೆ! ಇಷ್ಟೆಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗುತ್ತದೆ ಎಂದು ಮೊದಲೇ ತಿಳಿದಿದ್ದರೆ ನಾನಿಲ್ಲಿಗೆ ಬರುತ್ತಲೇ ಇರಲಿಲ್ಲ."

"ಗಾಬರಿಯಾಗಬೇಡಿ... ನೀವು ನೀಡುತ್ತಿರುವ ಸೂಚನೆ ಸತ್ಯವಾಗಿದೆ ಎಂಬುದು ಸಿದ್ಧವಾಗಬೇಕಾದರೆ ಇವೆಲ್ಲಾ ಪ್ರಶ್ನೆಗಳಿಗೆ ಉತ್ತರಿಸಲೇಬೇಕಾಗುತ್ತದೆ. ಒಂದು ವೇಳೆ ನೀವು ನೀಡಿದ ಸೂಚನೆ ತಪ್ಪೆಂದು ಸಿದ್ಧವಾದರೆ ಅದಕ್ಕೆ ನಾವು ಜವಾಬು ನೀಡಬೇಕಾಗುತ್ತದೆ. ದಯವಿಟ್ಟು ಭಯಪಡದೇ ಉತ್ತರ ನೀಡಿ."

ರಮಾಕಾಂತ ಗೊಂದಲದಲ್ಲಿ ಬಿದ್ದ. ಒಂದುಕ್ಷಣ ಅವನ ಮುಖದಮೇಲೆ ಅನೇಕ ಭಾವನೆಗಳು ಮೂಡಿ ಮಾಯವಾದವು. ಕೊನೆಗೆ ನಿರ್ಧಾರ ಮಾಡಿಕೊಂಡು ಉತ್ತರಿಸಿದ: "ಹೇಗೂ ಮಳೆಯಲ್ಲಿ ತೋಯಿಸಿಕೊಂಡಿದ್ದೇನೆ, ಅಂದ-ಮೇಲೆ ಚಳಿಗೇಕೆ ಹೆದರುವುದು? ಕೇಳಿ ಮೊದಲನೆಯದಾಗಿ ನನಗೆ ಆತನನ್ನು

ತಡೆಯಲು ಧೈರ್ಯ ಸಾಲಲಿಲ್ಲ. ಆತನ ಬಳಿ ಯಾವುದಾದರೂ ಆಯುಧ ವಿದ್ದರೆ ನನಗೆ ಅಪಾಯವಾಗುವದೆಂದು ಆತನನ್ನು ತಡೆಯುವ ಗೋಜಿಗೆ ಹೋಗಲಿಲ್ಲ.

"ಎರಡನೆಯದಾಗಿ, ಆತ ಕಾಂಪೌಂಡಿನ ಒಳಗಿದ್ದ; ನಾನು ಹೊರಗೆ. ಅಲ್ಲಿಯ ವರೆಗೆ ನಾನು ಹೋಗಬೇಕೆಂದರೆ ಸಮಯ ತಗುಲುತ್ತಿತ್ತು. ಅಷ್ಟರಲ್ಲಿ ಆತ ಹಿಂಭಾಗದ ಗೋಡೆಯೇರಿ ಪರಾರಿಯಾದ. ಮೂರನೆಯದಾಗಿ ಆತ ಬರಿಗೈ ಯಲ್ಲಿದ್ದ, ಆತನ ಬಳಿ ಯಾವ ವಸ್ತುವೂ ಇರಲಿಲ್ಲ. ಬಹುಷಃ ಕೈಗೆ ಏನೂ ದೊರೆತಿರಲಿಲ್ಲ. ನಿರಾಶನಾಗಿ ಹೋಗುತ್ತಿದ್ದಾನೆಂದು ತಿಳಿದು ಪ್ರೊಫೆಸರರಿಗೆ ತಿಳಿಸುವ ಗೋಜಿಗೆ ಹೋಗಲಿಲ್ಲ.

"ಇಂದು ಮುಂಜಾನೆ ಆನಂದ ಅವರ ಕೊಲೆ ನಡೆದ ಸುದ್ದಿ ಕೇಳಿ ಈ ವಿಷಯ ತಿಳಿಸುವುದು ಅವಶ್ಯವೆನಿಸಿತು. ಅದಕ್ಕಾಗಿ ನೇರವಾಗಿ ಇಲ್ಲಿಗೆ ಬಂದೆ."

"ನಿಮಗೆ ವಂದನೆಗಳು...ನಿಮ್ಮಂಥ ಪ್ರಜ್ಞಾವಂತ ನಾಗರಿಕರಿಂದ ಪೋಲಿಸ್ ಇಲಾಖೆಗೆ ಸಹಾಯ ಬೇಕೇಬೇಕು. ನಿಮ್ಮ ಸಹಾಯಕ್ಕೆ ವಂದನೆ ಗಳು."

"ಅದೇನೋ ನಿಜ. ನಮ್ಮಂಥವರು ಬಂದರೆ ನಿಮಗೆ ಸಹಾಯವಾದೀತು. ಆದರೆ ನಮಗೇ ನಿಮ್ಮಿಂದ ತೊಂದರೆಯಾದರೇನು ಮಾಡುವುದು? ನೂರೆಂಟು ಪ್ರಶ್ನೆಗಳಿಗೆ ಉತ್ತರಿಸಬೇಕು, ಕೋರ್ಟು ಕಚೇರಿಗೆ ಓಡಾಡಬೇಕು, ಇದೆಲ್ಲಾ ಯಾರಿಗೆ ಬೇಕು ನೀವೇ ಹೇಳಿ?"

ಮಿಸ್ಟರ್ ರಮಾಕಾಂತ...ಸಮಾಜದ ಕಲ್ಯಾಣಕ್ಕಾಗಿ, ನಿಮ್ಮ ಇನ್ನಿತರ ಬಂಧುಗಳ ಒಳಿತಿಗಾಗಿ ಇಂತಹ ತೊಂದರೆ ಎದುರಿಸಬೇಕಾಗುತ್ತದೆ. ನಿಮ್ಮಂ- ತೆಯೇ ಎಲ್ಲರೂ ಯೋಚಿಸಿದರೆ ಮುಂದೆ ನಮ್ಮ ಗತಿ ಏನು? ನಾವೆಂದು ಕಾರ್ಯ ನೆರವೇರಿಸುವದು? ನೀವೇ ಹೇಳಿ. ಈ ಕಾಗದದ ಮೇಲೆ ನಿಮ್ಮ ನಿಮ್ಮ ವಿಳಾಸ ಗುರುತುಹಾಕಿಕೊಟ್ಟು ತಾವು ಹೋಗಬಹುದು."

ರಮಾಕಾಂತನಿಗೂ ಅಷ್ಟೇ ಬೇಕಾಗಿತ್ತು. ಅಲ್ಲಿಂದ ಎದ್ದು ಹೋದರೆ ಸಾಕಾ- ಗಿತ್ತು ಎಂದು ಕಾಣಿಸುತ್ತದೆ. ಸರಸರನೆ ತನ್ನ ವಿಳಾಸ ಬರೆದುಕೊಟ್ಟು ಹೊರಗೋಡಿದ. ಹೇಮಂತ ಕೂಡಲೇ ಅವನ ಹಿಂದೆಯೇ ಅವನನ್ನು ಅಟ್ಟಿಸಿ ಕೊಂಡು ಹೋಗಿ ಪುನಃ ಒಳಗೆ ಕರೆತಂದ. ರಮಾಕಾಂತನ ಕೈಕಾಲುಗಳು ಗಡ ಗಡ ನಡುಗುತ್ತಿದ್ದವು. ಮುಖದ ಮೇಲೆ ಬೆವರುಕಾಣಿಸಿಕೊಂಡಿತು. ಆತ ಅಷ್ಟು ಭಯಪಟ್ಟಿದ್ದು ಕಂಡು ಮೇಜರ್‌ನಿಗೆ ಅಚ್ಚರಿ. ಅವನಿಗೆ ಕುಳಿತು ಕೊಳ್ಳಲು ಹೇಳಿ...ಕೇಳಿದ:

"ಒಂದೇ ಒಂದು ಪ್ರಶ್ನೆ...ನಿನ್ನೆ ರಾತ್ರಿ ನೀವು ಕಿಟಕಿಯಲ್ಲಿ ಕಂಡವ್ಯಕ್ತಿ ಯಾವ ಬಟ್ಟೆ ತೊಟ್ಟಿದ್ದ ಸ್ವಲ್ಪ ತಿಳಿಸಿ." ರಮಾಕಾಂತ ಸಮಾಧಾನದ ಉಸಿರು ಬಿಟ್ಟಿದ್ದು ಹೇಮಂತನಿಗೆ ಸ್ಪಷ್ಟವಾಗಿ ಕೇಳಿಸಿತು. ಆತ ಮುಗುಳುನಗೆ ನಕ್ಕ. ರಮಾಕಾಂತ ಹೇಳಲಾರಂಭಿಸಿದ. "ಕಿಟಕಿಯ ಬಳಿ ದೀಪವೇನೂ ಇರಲಿಲ್ಲ. ಆದರೂ ನಿನ್ನೆ ಹುಣ್ಣಿಮೆಯಾದ್ದರಿಂದ ಚೆನ್ನಾಗಿ ಬೆಳದಿಂಗಳು ಬಿದ್ದಿತ್ತು. ಆ ಬೆಳಕಿನಲ್ಲಿ ಆತ ಬಿಳೀ ಬಣ್ಣದ ಪ್ಯಾಂಟು, ಗುಲಾಬಿ ವರ್ಣದ ಷರ್ಟು ತೊಟ್ಟಂತೆ ಅನಿಸಿತು. ಇನ್‌ಶರ್ಟ್ ಮಾಡಿ ಬಿಳಿವರ್ಣದ ಟೈ ಕಟ್ಟಿದ್ದ, ಕಾಲಲ್ಲಿ ಕಪ್ಪು ಫುಲ್‌ಷೂಗಳಿದ್ದವು. ಅಷ್ಟೆ."

"ಪುನಃ ವಂದನೆಗಳು, ತಾವು ಹೋಗಬಹುದು."

"ಬದುಕಿದೆಯಾ ಬಡಜೀವವೇ" ಎಂದು ಒಂದೇ ಹಾರಿಕೆಯಿಂದ ಕೋಣೆಯ ಹೊರಗೆ ಓಡಿದ. ಪುನಃ ಹಿಂತಿರುಗಿ ನೋಡುವ ಸಾಹಸವನ್ನು ಆತ ಮಾಡಲಿಲ್ಲ. ಮಾಡಿದ್ದರೆ ಹೇಮಂತ ಹಾಗೂ ಚಂದ್ರನಾಥ ಹೊಟ್ಟೆ ಹಿಡಿದುಕೊಂಡು ನಗುತ್ತಿ-ರುವುದು ಕಾಣಿಸುತ್ತಿತ್ತು.

ಮುಂದೆ ಹತ್ತು ಹದಿನೈದು ನಿಮಿಷಗಳ ವರೆಗೆ ಮಾತನಾಡುತ್ತ ಕುಳಿತಿದ್ದ, ಹೇಮಂತ ಮೇಲೆದ್ದಾಗ ರಾತ್ರಿ ಎಂಟುವರೆ ಮೀರಿತ್ತು. ಪುನಃ ಕಾಣು ವುದಾಗಿ ಹೇಳಿಹೊರಬಂದ. ಈಗ ಕಾರಿನ ಮುಖ ಮನೆಯ ಕಡೆಗಿತ್ತು.

ಹೇಮಂತ ಮನೆಗೆ ಬಂದಾಗ ಸುಷ್ಮಾ ಹಾಗೂ ಅಶೋಕ ಆತನ ದಾರಿ ಕಾಯುತ್ತ ಕುಳಿತಿದ್ದರು. ಹೇಮಂತ ಯಾವ ಮಾತು ಆಡದೆ ಬಟ್ಟೆ ಬದಲಿಸಿದ. ಕೈಕಾಲು ಮುಖ ತೊಳೆದು ನೇರವಾಗಿ ಊಟದ ಟೇಬಲಿಗೆ ಬಂದ. ಅಶೋಕ ಹಾಗೂ ಸುಷ್ಮಾ ಅವನನ್ನು ಹಿಂಬಾಲಿಸಿದರು. ಊಟದ ಮಧ್ಯ ಯಾರೂ ಮಾತ-ನಾಡಲಿಲ್ಲ. ಊಟ ಮುಗಿದ ನಂತರ ಮೂವರಲ್ಲಿ ಸಮಾಲೋಚನೆ ನಡೆಯಿತು. ಇಬ್ಬರೂ ಅಂದಿನ ದಿವಸ ಸಂಶಯಕ್ಕೆ ಆಸ್ಪದ ನೀಡುವಂತಹ ಯಾವ ಘಟನೆಗಳು ನಡೆಯಲಿಲ್ಲವೆಂದೂ ತಿಳಿಸಿದರು. ಹೇಮಂತ ಆದಿಯಿಂದ ಅಂತ್ಯದವ ರೆಗೂ ನಡೆದ ವಿಷಯ ತಿಳಿಸಿದಾಗ ಸುಷ್ಮಾ ಮೂಗ ಮೇಲೆ ಬೆರಳು ಇಟ್ಟು ಕೊಂಡರೆ ಅಶೋಕ ಕೊನೆಕೊನೆಗೆ ಬೆಚ್ಚಿಬಿದ್ದು ಕೇಳಿದ: "ಇನ್ನೊಮ್ಮೆ ಕಿಟಕಿ ಯಲ್ಲಿ ಕಂಡ ವ್ಯಕ್ತಿಯ ಬಟ್ಟೆಗಳ ಬಗ್ಗೆ ಹೇಳಿರಿ."

ಹೇಮಂತ ಪುನಃ ಹೇಳಿದ,ಬಿಳಿಪ್ಯಾಂಟ್ ಗುಲಾಬಿ ಶರ್ಟ್...ಬಿಳಿ ಬಣ್ಣದ ಟೈ...ಕಪ್ಪು ಷೂಗಳು ..ಏಕೆ ಈ ಪ್ರಶ್ನೆಗಳು ಕೇಳುತ್ತಿರುವೆ?"

"ಷೂ ವಿಷಯ ನನಗೆ ಗೊತ್ತಿಲ್ಲ. ಆದರೆ ಬಟ್ಟೆ ಮಾತ್ರ ಸುಧಾಕರ ತೊಟ್ಟಂತವೇ. ನಿನ್ನೆ ನಾನೇ ನೋಡಿರುವೆ. ಆತ ನೀವು ಹೇಳಿದಂತಹ ಬಟ್ಟೆಗ

ಳನ್ನೇ ತೊಟ್ಟುಕೊಂಡಿದ್ದ."

ಈಗ ಬೆಚ್ಚಿ ಬೀಳುವ ಸರದಿ ಹೇಮಂತನದು. ಕೂಡಲೇ ಅಶೋಕನಿಗೆ ಬಟ್ಟೆ ತೊಟ್ಟುಕೊಂಡು ಸುಧಾಕರನನ್ನು ಕಂಡುಬರಲು ತಿಳಿಸಿದ. ಈ ಬಾರಿ ತನ್ನ ನಿಜವಾದ ಪರಿಚಯ ಮಾಡಿಕೊಡಲು ಹೇಳಿದ.

ಹತ್ತು ನಿಮಿಷಗಳಲ್ಲಿ ಅಶೋಕ ಹೊರಗೆ ಹೋದವನು ಅರ್ಧ ಗಂಟೆ ಬಿಟ್ಟು ಬಂದ. ಈ ಮಧ್ಯ ಸುಷ್ಮಾ ಕಾದಂಬರಿ ಓದುತ್ತಿದ್ದರೆ, ಹೇಮಂತ ಡೈರಿ ಬರೆಯುತ್ತಿದ್ದ, ಅಶೋಕ ಒಳಗೆ ಬಂದವನೇ ಹೇಳಿದ:

"ನಾನು ಹೇಳಿದ್ದು ನಿಜವಾಯಿತು. ಅವು ಸುಧಾಕರನು ತೊಟ್ಟ ಬಟ್ಟೆಗಳೇ... ಆದರೆ ರಾತ್ರಿ ಹತ್ತು ಗಂಟೆಯ ಸಮಯಕ್ಕೆ ಯಾರೋ ಕಿಟಕಿಯಲ್ಲಿ ಕೋಲು ಹಾಕಿ ಆ ಬಟ್ಟೆ ಅಪಹರಿಸಿದ್ದಾರಂತೆ."

"ಆ ವೇಳೆ ಸುಧಾಕರ ಕೋಣೆಯಲ್ಲಿರಲಿಲ್ಲ. ಸೆಕೆಂಡ್ ಶೋ ಸಿನಿಮಾಕ್ಕೆ ಹೋಗಿದ್ದ. ನನಗೆ ಟಿಕೆಟ್ ಸಹ ತೋರಿಸಿದ."

"ಏನೇ ಆಗಲಿ ಒಂಬತ್ತರಿಂದ ಹನ್ನೆರಡು ಗಂಟೆಯ ವರೆಗೆ ರೂಮಿನಲ್ಲಿರಲಿಲ್ಲ ಎಂಬುದು ತಿಳಿದಂತಾಯಿತು."

"ಹೌದು, ಆತನಿಗೆ ಒಬ್ಬ ತರುಣನ ಮೇಲೆ ಸಂಶಯ ಬಂದಿದೆಯಂತೆ. ಸುಮಾರು ಹದಿನೆಂಟು ಇಪ್ಪತ್ತು ವರ್ಷದ ಆ ತರುಣ ಸುಧಾಕರನ ಮನೆಯ ಮುಂದೆ ಎಂಟು ಹತ್ತು ಸಾರಿ ಓಡಾಡಿದ್ದನಂತೆ. ಅವನೇ ಬಟ್ಟೆ ಕದ್ದಿರಬೇಕೆಂದು ಅವರ ಗುಮಾನಿ."

"ಆ ತರುಣನ ಪರಿಚಯ ಹೇಳಿದನೇ?''

"ಹಾಂ... ಕ್ರಾಪು ಬಿಟ್ಟಿದ್ದ, ಸಾದುಗಪ್ಪು, ಎಡಕೆನ್ನೆ ಮೇಲೆ ಮಚ್ಚೆ ಇದೆ. ನೀಲಿ ಪ್ಯಾಂಟು, ತಿಳಿನೀಲಿ ಬುಶ್ ಶರ್ಟ್. ಕಾಲಲ್ಲಿ ಹವಾಯಿ ಚಪ್ಪಲು.''

''ಓಹ್... ದೇವರೇ ಇದೆಂತಹ ವಿಚಿತ್ರ'' ಹೇಮಂತ ಉದ್ಗಾರ ತೆಗೆದು ನುಡಿದ. ''ಅಶೋಕ ಇದೀಗ ನೀನು ಹೇಳಿದ ತರುಣ ಬೇರೆ ಯಾರೂ ಅಲ್ಲ... ಆತ ರಮಾಕಾಂತ, ಏನಿದು ಗೋರಖ ದಂಧೆ? ರಮಾಕಾಂತ ಸುಧಾಕರನ ಮೇಲೆ ಸಂಶಯ ಬರುವಂತೆ ಹೇಳಿದ. ಈಗ ಸುಧಾಕರ ರಮಾಕಾಂತನ ಮೇಲೆ ಸಂಶಯ ಬರುವಂತೆ ಹೇಳುತ್ತಿದ್ದಾನೆ. ಇಬ್ಬರಲ್ಲಿ ಯಾರು ಸತ್ಯ ಹೇಳುತ್ತಿದ್ದಾರೋ ತಿಳಿಯದು? ಏನೇ ಆಗಲಿ, ನಾಳೆ ಬೆಳಿಗ್ಗೆ ನೀನು ರಮಾಕಾಂತನನ್ನು ಹಿಂಬಾಲಿಸು. ಸುಧಾಕರನನ್ನು ಸುಷ್ಮಾ ಹಿಂಬಾಲಿಸುತ್ತಾಳೆ, ನಾನು ಪ್ರೊಫೆಸರರನ್ನು ಹಿಂಬಾಲಿಸುತ್ತೇನೆ.''

ಮರು ದಿನದ ಕಾರ್ಯಕ್ರಮ ನಿರ್ಧಾರವಾಯಿತು. ಬೆಳಿಗ್ಗೆ ಬರುವದಾಗಿ

ಹೇಳಿ ಅಶೋಕ ಮನೆಗೆ ನಡೆದ. ಹೇಮಂತ ತನ್ನ ಮಲಗುವ ಕೋಣೆಗೆ ಬಂದಾಗ ಅವನಿಗಾಗಿ ಕಾಯುತ್ತಿದ್ದ ಸುಷ್ಮಾ ಅವನ ಕೊರಳಿಗೆ ತನ್ನೆರಡೂ ಕೈಗಳನ್ನು ಮಾಲೆಯಂತೆ ಹಾಕಿ ಚುಂಬಿಸಿದಳು. ಮಗುವನ್ನು ಎತ್ತಿಕೊಳ್ಳುವಂತೆ ಹೇಮಂತ ಅವಳನ್ನೆತ್ತಿ ಮಂಚದ ಮೇಲೆ ಉರುಳಿಸಿದ.

ರಾತ್ರಿ ಮೂರು ಗಂಟೆಯ ಸಮಯ. ಎಲ್ಲೆಡೆ ಮೌನ ಸಾಮ್ರಾಜ್ಯ, ನಾಯಿಗಳಿಗೂ ಸಹ ಒಂದು ಕ್ಷಣ ನಿದ್ದೆ ತಗಲುವ ಸಮಯ ಅಂಥ ಸಮಯದಲ್ಲಿ ಮೈ ತುಂಬ ಕಪ್ಪು ಬಟ್ಟೆ ಧರಿಸಿದ್ದ ವ್ಯಕ್ತಿಯೊಂದು ಬೆಕ್ಕಿನ ಹೆಜ್ಜೆಯಲ್ಲಿ ಪ್ರೊಫೆಸರ್ ಮನೆಯತ್ತ ಬರುತ್ತಿತ್ತು. ಮುಖಕ್ಕೂ ಸಹ ಕಪ್ಪು ವಸ್ತ್ರ ಸುತ್ತಿದ್ದರಿಂದ ತಲೆಗೆ ಕಪ್ಪು ಫೆಲ್ಟ್ ಹ್ಯಾಟ್ ಹಾಕಿಕೊಂಡಿದ್ದರಿಂದ ಆ ವ್ಯಕ್ತಿ ಹೆಣ್ಣೋ ಗಂಡೋ ಹೇಳುವುದು ಸಹ ಸಾಧ್ಯವಾಗದಂತಿತ್ತು.

## 12. ಕಾಗದದ ತುಂಡು

**ಪ್ರೊ**ಫೆಸರರ ಮನೆಯ ಹತ್ತಿರ ಬಂದು ಒಂದು ಕ್ಷಣ ನಿಂತ ಆ ವ್ಯಕ್ತಿ, ಆಮೇಲೆ ಚಿಗರೆಯಂತೆ ನೆಗೆದು ಒಂದೇ ಹಾರಿಕೆಗೆ ಕಾಂಪೌಂಡು ಗೋಡೆ ದಾಟಿ ಒಳಗಡೆ ಬಂದಿತು. ಕಾಲಲ್ಲಿ ಪಂಪ್ ಶೂ ಹಾಕಿಕೊಂಡಿದ್ದರಿಂದ ಸ್ವಲ್ಪವೂ ಸದ್ದಾಗಲಿಲ್ಲ, ಸದ್ದಾದರೂ ಅದನ್ನು ಆಲಿಸಲು ಯಾರೂ ಇರಲಿಲ್ಲ. ಪ್ರೊಫೆಸರರ ಬೆಡ್‌ರೂಮಿನ ಕೆಳಗೆ ಬಂದು ನಿಂತ ಆ ವ್ಯಕ್ತಿ ಒಂದು ಬಾರಿ ಮೇಲೆ ತಲೆಎತ್ತಿ ನೋಡಿತು. ಚಂದ್ರನ ಶೀತಲ ಕಿರಣಗಳ ಬೆಳಕಿನಲ್ಲಿ ಆ ವ್ಯಕ್ತಿಯ ಕಣ್ಣುಗಳು ಸ್ಫಟಿಕದಂತೆ ಹೊಳೆದವು. ಆಮೇಲೆ ಆ ವ್ಯಕ್ತಿ ಪೈಪ್ ಸಹಾಯದಿಂದ ಕೋತಿ ಮರವೇರುವಂತೆ, ಸರಸರನೇ ಮೇಲೇರಿ ಒಂದೇ ನಿಮಿಷದಲ್ಲಿ ಕಿಟಕಿಯಲ್ಲಿ ತೂರಿ ಮೆಲ್ಲನೆ ಒಳಗೆ ಪ್ರವೇಶಿಸಿತು.

ಸತ್ಯೇಂದ್ರ ಹಾಗೂ ಶಾಂತಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಮಲಗಿದ್ದರು. ಇಬ್ಬರು ಪೂರ್ತಿ ನಿರ್ವಸ್ತ್ರರಾಗಿದ್ದರು. ಕಾಮಕೇಳಿಯಲ್ಲಿ ತೊಡಗಿದ್ದಾಗಲೇ ಅವರು ನಿದ್ದೆ ಹೋಗಿದ್ದರು. ಒಂದು ಕ್ಷಣ ಅವರನ್ನು ನಿರ್ವಸ್ತ್ರದಲ್ಲಿ ನೋಡಿದ ಆ ವ್ಯಕ್ತಿ ವಿಚಲಿತನಾದಂತೆ ಕಂಡರೂ, ಮುಂದೆ ಎದೆ ಗಟ್ಟಿಮಾಡಿಕೊಂಡು ಮೆಲ್ಲ-ಮೆಲ್ಲನೆ ಮಂಚ ಸಮೀಪಿಸಿತು. ಪ್ಯಾಂಟಿನ ಜೇಬಿಗೆ ಕೈಹಾಕಿ

ಎರಡು ಬಿಳಿವಸ್ತ್ರ ತೆಗೆದು, ಒಂದೇ ಬಾರಿ ಸತ್ಯೇಂದ್ರ ಹಾಗೂ ಶಾಂತಿಯ ಮೂಗುಗಳಿಗೆ ಒತ್ತಿ ಹಿಡಿಯಿತು. ಎರಡು ಸೆಕೆಂಡು ಕಾಲ ಇಬ್ಬರೂ ವಿಲಿವಿಲಿ ಒದ್ದಾಡಿ ಮುಂದೆ ಶಾಂತರಾದರು. ಆ ವ್ಯಕ್ತಿ ಇಬ್ಬರೂ ಮೂರ್ಛೆ ಹೋಗಿದ್ದಾರೆಂದು ಮನದಟ್ಟಾದ ಮೇಲೆ ವಸ್ತ್ರ ಹಿಂದೆಗೆದುಕೊಂಡು ಜೇಬಿಗೆ ಸೇರಿಸಿಕೊಂಡಿತು. ಇಬ್ಬರ ಮೇಲೂ ಬ್ಲಾಂಕೆಟ್ ಹೊದಿಸಿ ನಿಶ್ಚಿಂತೆಯಿಂದ ಉಸಿರುಬಿಟ್ಟ. ಆ ವ್ಯಕ್ತಿ ಪೂರ್ತಿ ಕೋಣೆಯ ತಪಾಸಣೆ ಪ್ರಾರಂಭಿಸಿತು.

ಅರ್ಧ ಗಂಟೆ ಹೆಣಗಿದ್ದು ಸಾರ್ಥಕವಾಗಲಿಲ್ಲ. ಆ ವ್ಯಕ್ತಿಯ ಕೈಗೆ ಲಾಭ ದಾಯಕವಾದ ಯಾವ ವಸ್ತುಗಳೂ ದೊರೆಯಲಿಲ್ಲ.

ನಿರಾಶೆಯಿಂದ ಕೈ ಕೈ ಹೊಸಕಿಕೊಳ್ಳುತ್ತಾ ಬೆಡ್‌ರೂಮಿನಿಂದ ಪ್ರೊಫೆಸರ್‌ರ ರೀಡಿಂಗ್ ರೂಮಿಗೆ ಬಂದ.

ಆ ವ್ಯಕ್ತಿ ಅಲ್ಲಿದ್ದ ಕಪಾಟು, ಮೇಜಿನ ಡ್ರಾ ಎಲ್ಲಾ ಒಂದೊಂದಾಗಿ ಶೋಧಿಸಲಾರಂಭಿಸಿತು.

ಉಫ್...ಮೈಮೇಲೆ ಬೆವರು ಮೂಡಿತೇ ವಿನಃ ಏನೂ ದೊರೆಯಲಿಲ್ಲ. ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರಾಯಿತೆಂದು ಕುರ್ಚಿಯ ಮೇಲೆ ಕುಳಿತುಕೊಂಡು ಸಿಗರೇಟೊಂದನ್ನು ಉರಿಸಿ ನಿಶ್ಚಿಂತೆಯಿಂದ ಸೇವತೊಡಗಿತು.

ಎರಡು ಮೂರು ಬಾರಿ ಹೊಗೆ ಎಳೆದುಬಿಡುವಷ್ಟರಲ್ಲಿ ಸುತ್ತಲೂ ತಿರುಗುತ್ತಿದ್ದ ಆ ವ್ಯಕ್ತಿಯ ದೃಷ್ಟಿಗೆ ಟೇಬಲ್ ಕೆಳಗಿದ್ದ ಕಾರ್ಪೆಟ್ ಸ್ವಲ್ಪ ದಪ್ಪವಾಗಿದೆ ಎನಿಸಿತು.

ಸಂಶಯ ಬಲವಾಯಿತು. ಕೈಯಲ್ಲಿ ಉರಿಯುತ್ತಿದ್ದ ಸೀಗರೇಟನ್ನು ಕಿಟಕಿಯಿಂದ ಹೊರಗೆ ಚಿಮ್ಮಿ ಮೇಲೆದ್ದ ಆ ವ್ಯಕ್ತಿ ದಪ್ಪಗೆ ಕಾಣುತ್ತಿದ್ದ ಕಾರ್ಪೆಟ್ ಬಳಿ ಕೂತು, ಕಾರ್ಪೆಟನ್ನು ಮೇಲೆಬ್ಬಿಸಿದಾಗ ಸಂತಸದಿಂದ ಕಣ್ಣುಗಳು ಮಿನುಗಿದವು.

ಸಾಮಾನ್ಯ ಗಾತ್ರದ ಲಕೋಟೆಯೊಂದು ಕಾಣಿಸಿತು. ಸರಸರನೆ ಅದರಲ್ಲಿದ್ದ ಎಲ್ಲ ಕಾಗದಗಳನ್ನು ಹೊರಗೆಳೆದಾಗ ಹತ್ತೆಂಟು ಕಾಗದಗಳ ಜೊತೆಗೆ ಮೂರು ನಾಲ್ಕು ಫೋಟೊಗಳು ಹೊರಗೆ ಬಂದವು.

ಐದು ನಿಮಿಷ ಅವುಗಳನ್ನು ನಿರೀಕ್ಷಿಸಿದ ಆ ವ್ಯಕ್ತಿ ಪುನಃ ಎಲ್ಲ ಫೋಟೊ ಹಾಗೂ ಕಾಗದಗಳನ್ನು ಲಕೋಟೆಗೆ ಸೇರಿಸಿ ಆ ಲಕೋಟೆಯನ್ನು ಜೇಬಿಗಿಳಿಸಿ ಮೆಲ್ಲನೆ ಸಿಳ್ಳುಹಾಕುತ್ತ ಹೊರಗೆ ಬಂದಿತು. ನಂತರ ಕಿಟಕಿ ಬಳಿಯ ಪೈಪ್ ಮೂಲಕ ಕೆಳಗಿಳಿದು ಎರಡು ನಿಮಿಷಕ್ಕೂ ಕಡಿಮೆ ಸಮಯದಲ್ಲಿ ಆ ವ್ಯಕ್ತಿ ರಸ್ತೆಗೆ ಬಂದಿತ್ತು.

ಉದ್ದಕ್ಕೂ ರಸ್ತೆಯ ತಿರುವಿನವರೆಗೂ ನಡೆದು ಆ ವ್ಯಕ್ತಿ ಕಣ್ಮರೆಯಾಯಿತು. ಆ ವ್ಯಕ್ತಿ ಕಣ್ಮರೆಯಾದ ಅರ್ಧ ನಿಮಿಷಕ್ಕೆ ಕಾರೊಂದು ಸ್ಟಾರ್ಟಾದ ಸಪ್ಪಳ ಮೆಲುವಾಗಿ ಕೇಳಿಬಂತು. ಬಹುಶಃ ಆ ವ್ಯಕ್ತಿಯೇ ಕಾರನ್ನು ತಂದು ದೂರದಲ್ಲಿ ನಿಲ್ಲಿಸಿರಬೇಕು. ಈಗ ಅದೇ ಕಾರಿನಲ್ಲಿ ಅದು ಮರಳಿ ಹೋಗುತ್ತಿತ್ತು.

ಆ ವ್ಯಕ್ತಿ ಹೋದ ಒಂದೇ ನಿಮಿಷದ ನಂತರ ಬಲಗಡೆ ಮೂಲೆಯಲ್ಲಿ ಗಸ್ತು ತಿರುಗುತ್ತಿದ್ದ ಪೋಲಿಸ್ ನೆಲಕ್ಕೆ ತನ್ನ ಕೈಯಲ್ಲಿಯ ಬಡಿಗೆ ಕುಟ್ಟುತ್ತ ''ಹೋಷಿಯಾರ್'' ಎಂದು ಕೂಗುತ್ತ ಬರುತ್ತಿದ್ದುದು ಕಾಣಿಸಿತು.

ಸರಿಯಾಗಿ ಬೆಳಗಿನ ಎಂಟು ಗಂಟೆಗೆ, ಮೊದಲೇ ನಿರ್ಧರಿಸಿದಂತೆ, ಹೇಮಂತ ಪ್ರೊಫೆಸರರನ್ನು ಹಿಂಬಾಲಿಸಲು ನಡೆದ. ಅಶೋಕ ರಮಾಕಾಂತನ ಕೋಣೆಯತ್ತ ನಡೆದರೆ ಸುಷ್ಮಾ ಸುಧಾಕರನ ಮನೆಯತ್ತ ಹೆಜ್ಜೆ ಹಾಕಿದಳು.

ಮೇಜರ್ ಹೇಮಂತ ಪ್ರೊಫೆಸರರ ಮನೆಯ ಹತ್ತಿರ ಬರುವುದಕ್ಕೂ ಸತ್ಯೇಂದ್ರನ ಕಾರು ಹೊರಗೆ ಬರುವದಕ್ಕೂ ಸರಿಹೋಯಿತು. ಹೇಮಂತ ಹಾಗೆಯೇ ಆ ಕಾರನ್ನು ಹಿಂಬಾಲಿಸಿದ. ಸತ್ಯೇಂದ್ರನ ಕಾರು ಕಾಲೇಜಿನತ್ತ ನಡೆದದ್ದನ್ನು ಕಂಡು ಹೇಮಂತನಿಗೆ ಅಚ್ಚರಿ. ಕಾಲೇಜಿನ ಸಮಯ ಹನ್ನೊಂದು ಗಂಟೆ, ಆದರೆ ಎಂಟೂವರೆಗೆ ಸತ್ಯೇಂದ್ರ ಕಾಲೇಜಿಗೆ ಹೋಗುತ್ತಲಿದ್ದಾನೆ. ಬಹುಶಃ ಸ್ಪೆಷಲ್ ಕ್ಲಾಸ್ ಇರಬಹುದೆಂದು ಊಹಿಸಿದ. ಸತ್ಯೇಂದ್ರನ ಕಾರು ಕಾಲೇಜಿಗೆ ಬಂದಾಗ ವಾಚ್‌ಮನ್‌ನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಪ್ರೊಫೆಸರರನ್ನು ಕಂಡ ವಾಚ್‌ಮನ್ ಸ್ವಲ್ಪ ಗಲಿಬಿಲಿಗೊಂಡರೂ ಓಡಿ ಹೋಗಿ ಕೀಲಿಕೈ ತಂದು ಅವರ ರೂಮಿನ ಬೀಗ ತೆರೆದ. ಪ್ರೊಫೆಸರ್ ತಮ್ಮ ರೂಮಿನ ಒಳಕ್ಕೆ ಹೋಗುತ್ತಿಲ್ಲ. ಹೇಮಂತ ತನ್ನ ಕಾರನ್ನು ಒಂದು ಮರದ ನೆರಳಿಗೆ ನಿಲ್ಲಿಸಿ ಸಿಗರೇಟೊಂದನ್ನು ಹೊತ್ತಿಸಿದ.

ಪರಿಚಿತ ಮೋಟಾರ್ ಬೈಕಿನ ಸಪ್ಪಳ ಕೇಳಿ ಹೇಮಂತನ ಕಿವಿಗಳು ಚುರುಕಾದವು. ಅವನ ದೃಷ್ಟಿ ಮುಂದೆ ಹರಿಯಿತು. ಸುಮಾರು ಒಂದು ಫರ್ಲಾಂಗ್ ಅಂತರದಲ್ಲಿ ಅಶೋಕ ಮೋಟಾರ್ ಬೈಕಿನಲ್ಲಿ ಬರುತ್ತಿದ್ದ. ಅವನ ಮೋಟಾರ್ ಬೈಕ್ ಎದುರು ರಿಕ್ಷಾವೊಂದು ಇತ್ತ ಬರುತ್ತಿತ್ತು. ಅಶೋಕ ತನ್ನನ್ನೇಕೆ ಹುಡುಕಿಕೊಂಡು ಬಂದ ಎಂದು ಯೋಚಿಸುತ್ತಿರುವಂತೆ ಕಾರಿನಿಂದ ಸ್ವಲ್ಪ ಅಂತರದಲ್ಲೇ ರಿಕ್ಷಾ ಬಂದು ನಿಂತಿತು ರಿಕ್ಷಾದಿಂದ ರಮಾಕಾಂತ ಕೆಳಗಿಳಿದು ರಿಕ್ಷಾ ಬಾಡಿಗೆ ನೀಡಿ ಕಾಲೇಜಿನತ್ತ ಹೆಜ್ಜೆ ಹಾಕಿದ.

"ಓಹ್ ಹೀಗೋ" ಎಂದುಕೊಂಡ ಹೇಮಂತ.

ಅಶೋಕನಿಗೂ ಸಹ ಮೇಜರ್‌ನ ಕಾರು ಕಂಡು ಅಷ್ಟೇ ಆಶ್ಚರ್ಯವಾ

ಯಿತು. ರಮಾಕಾಂತ ಕಣ್ಮರೆಯಾಗುವ ವರೆಗೂ ದೂರದಲ್ಲಿ ನಿಂತಿದ್ದು ಆ ಮೇಲೆ ಹೇಮಂತ ಬಳಿಗೆ ಬಂದು, "ನಾನು ರಮಾಕಾಂತನನ್ನು ಹಿಂಬಾಲಿಸಿಕೊಂಡು ಬಂದೆ'' ಎಂದ.

"ನಾನು ಪ್ರೊಫೆಸರರನ್ನು."

"ಹಾಗಾದರೆ ರಮಾಕಾಂತ ಪ್ರೊಫೆಸರ್ ಇಬ್ಬರೂ ಕೂಡಿಕೊಂಡು ಏನೋ ಮಸಲತ್ತು ನಡೆಸಿದಂತೆ ಕಾಣುತ್ತಿದೆ. ಇಷ್ಟು ಬೇಗ ಇಬ್ಬರೂ ಇಲ್ಲಿಗೆ ಬರ ಬೇಕೆಂದರೆ..."

"ನನಗೂ ಅದೇ ಸಂಶಯ ಬರುತ್ತಿದೆ ನೋಡೋಣ ಇರು." ಹತ್ತು ನಿಮಿಷ ಅಶೋಕ ಹೇಮಂತನೊಂದಿಗೆ ಇದೇ ವಿಚಾರದ ಬಗ್ಗೆ ಚರ್ಚಿಸುತ್ತಾ ಕಾರಿನಲ್ಲಿ ಕುಳಿತ. ಅಷ್ಟರಲ್ಲಿ ರಮಾಕಾಂತ ಬರುತ್ತಿರುವುದು ಕಾಣಿಸಿತು.

"ನೀನು ಕೆಳಗಿಳಿದು ಮೊದಲಿನಂತೆ ರಮಾಕಾಂತನನ್ನು ಹಿಂಬಾಲಿಸು... ನಾನು ಪ್ರೊಫೆಸರರನ್ನು ಹಿಂಬಾಲಿಸುತ್ತೇನೆ."

ಹೇಮಂತನ ಮಾತಿನಂತೆ ಅಶೋಕ ಕಾರಿನಿಂದ ಇಳಿದು ತನ್ನ ಮೋಟಾರ್ ಬೈಕ್ ಬಳಿ ಹೋಗಿ ನಿಂತ. ಆತ ನಿಂತ ಭಂಗಿ ಬಹಳ ಹೊತ್ತಿನಿಂದ ಯಾರನ್ನೊ ನಿರೀಕ್ಷಿಸುತ್ತಿರುವಂತಿತ್ತು. ಹೇಮಂತ ಕಾರಿನ ಕಿಟಕಿಯ ಗಾಜು ಮೇಲೇರಿಸಿದ.

ರಮಾಕಾಂತ ಗೇಟಿಗೆ ಬರುವುದಕ್ಕೂ ಹಿಂದೆ ಸತ್ಯೇಂದ್ರನ ಕಾರು ಬರು ತ್ತಿರುವುದು ಕಾಣಿಸಿತು. ಕಾರು ರಮಾಕಾಂತನ ಬಳಿ ಬರುವುದಕ್ಕೂ ಅವರ ವೇಗ ಕಡಿಮೆಯಾಯಿತು. ರಮಾಕಾಂತನಿಗೆ ಏನೋ ನೆನಪಾಗಿರಬೇಕು. ಸಂಜ್ಞೆ ಮಾಡಿದ, ಕಾರು ನಿಲ್ಲಿಸಿ ಸತ್ಯೇಂದ್ರ ಗೋಣು ಹೊರಗೆ ಹಾಕಿ ಏನು ಎಂಬಂತೆ ಕೇಳಿದ. ರಮಾಕಾಂತ ಉತ್ತರ ಕೊಡದೆ ಪ್ಯಾಂಟಿನ ಹಿಂದಿದ್ದ ಜೇಬಿ ನಿಂದ ಒಂದು ಕಾಗದವನ್ನು ತೆಗೆದು ಅವರ ಕೈಗೆ ನೀಡಿದ. ಒಂದು ಕ್ಷಣ ಅವರ ಕಡೆ ದೃಷ್ಟಿ ಹರಿಸಿದ ಸತ್ಯೇಂದ್ರ ಒಮ್ಮೆಲೆ ಬಾಂಬಿನಂತೆ ಸಿಡಿದುಬಿದ್ದರು,

"ಮುಠ್ಠಾಳ ..ಇದನ್ನಾರು ನಿನಗೆ ತೆಗೆದುಕೊಂಡು ಬಾ ಅಂದಿದ್ದರು?" ರಮಾಕಾಂತ ಮಾತನಾಡದೆ ಮುಖ ಕೆಳಗೆ ಹಾಕಿಕೊಂಡು ನಿಂತಿದ್ದ. ಆ ಕಾಗದವನ್ನು ಪರ ಪರ ಹರಿದು ರಮಾಕಾಂತನ ಕಡೆಗೊಮ್ಮೆ ಕ್ಷುದ್ರ ನೋಟ ಬೀರಿದ ಸತ್ಯೇಂದ್ರ ಕಾರನ್ನು ವೇಗವಾಗಿ ಓಡಿಸಿಕೊಂಡು ಹೊರಟು ಹೋದರು. ಅವರ ಕಾರನ್ನೇ ನೋಡುತ್ತ ನಿಂತಿದ್ದ ರಮಾಕಾಂತ ತನ್ನ ರೂಮಿನತ್ತ ನಡೆದ. ಹತ್ತು ಹೆಜ್ಜೆ ನಡೆಯುವಷ್ಟರಲ್ಲಿ ಹಿಂದಿನಿಂದ ರಿಕ್ಷಾ ಒಂದು ಬಂದಿತು. ರಮಾ ಕಾಂತ ಅದನ್ನು ನಿಲ್ಲಿಸಿ, 'ಮದಿಹಾಳ' ಎಂದ. ರಿಕ್ಷಾ ಹೊರಟಿತು. ಅಶೋಕನ ಮೋಟಾರ್ ಬೈಕ್ ನಿಧಾನವಾಗಿ ಅದನ್ನು ಹಿಂಬಾಲಿಸಿತು.

ಕಾರಿನಿಂದ ಕೆಳಗಿಳಿದು ಹೇಮಂತ ಹತ್ತೆಂಟು ಕಾಗದದತುಂಡುಗಳನ್ನು ಆರಿಸಿ, ತನ್ನ ಕೋಟಿನ ಜೇಬಿಗೆ ಸೇರಿಸಿ ತನ್ನ ಕಾರಿನತ್ತ ಬಂದ. ಪುನಃ ಮೊದಲಿನಂತೆ ಅವನ ಕಾರು ದೂರದಲ್ಲಿ ಓಡುತ್ತಿದ್ದ ಸತ್ಯೇಂದ್ರನ ಕಾರನ್ನು ಹಿಂಬಾಲಿಸತೊಡಗಿತು. ಪ್ರೊಫೆಸರ್ ಸತ್ಯೇಂದ್ರ ನೇರವಾಗಿ ಮನೆಗೆ ಹೋದರು. ಅಲ್ಲಿಂದ ಹೊರ ಬಿದ್ದದ್ದು ಹತ್ತೂವರೆ ಗಂಟೆಗೆ ಕಾಲೇಜಿಗೆ ಇನ್ನು ಸಂಜೆ ನಾಲ್ಕರ ವರೆಗೆ ಅವರು ಹೊರಗೆ ಬರಲಾರರು ಎಂದು ತಿಳಿದ ಹೇಮಂತ ಮನೆಯ ಕಡೆ ನಡೆದು ಆತ ಮನೆ ಸೇರುವಷ್ಟರಲ್ಲಿ ಸುಷ್ಮಾ ಹಾಗೂ ಅಶೋಕ ಆಗಲೇ ಬಂದು ಅವನ ದಾರಿ ಕಾಯುತ್ತಿದ್ದರು. ಹೇಮಂತ ಬಟ್ಟೆ ಬದಲಾಯಿಸುತ್ತಿರುವಾಗ ಅಶೋಕ ಹೇಳಿದ. "ರಮಾಕಾಂತ ರೂಮಿನೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡ, ಮಧ್ಯ ದಾರಿಯಲ್ಲಿ ಆತ ರಿಕ್ಷಾ ನಿಲ್ಲಿಸಿ ಎರಡು ಲಕೋಟೆಗಳನ್ನು ಅಂಚೆ ಡಬ್ಬಿಗೆ ಎಸೆದ."

"ಎರಡೇ ಎಂದು ಹೇಗೆ ಹೇಳುವೆ?"

"ಅವನ ಕೈಯಲ್ಲಿ ಎರಡೇ ಇದ್ದವು, ಮರಳಿಮರಳಿ ಆತ ಅದರ ಮೇಲಿನ ವಿಳಾಸ ಪರಿಶೀಲಿಸಿ ಅಂಚೆ ಡಬ್ಬಿಗೆ ಹಾಕಿದ್ದನ್ನು ನಾನು ಕಂಡೆ. ರೂಮಿಗೆ ಹೋದವನು ಕುಡಿಯಲು ಪ್ರಾರಂಭಿಸಿದ. ಬಹುಶಃ ತ್ರಿಬಲ್ ಎಕ್ಸ್ ದ ಸೀಸೆಯನ್ನು ಪ್ರೊಫೆಸರ್ ಆತನಿಗೆ ನೀಡಿರಬೇಕು. ಇನ್ನು ಆತ ಬೇಗ ಹೊರಗೆ ಬರಲಾರನೆಂದು ಊಹಿಸಿ ಈಚೆ ಬಂದೆ."

ಆತನ ಹೇಳಿಕೆ ಮುಗಿಯುವುದನ್ನೇ ಕಾಯುತ್ತಿದ್ದ ಸುಷ್ಮಾ ಮಾತನಾಡಿದಳು, "ಬೆಳಿಗ್ಗೆ ಎಂಟೂವರೆ ಶಾಂತಿ ಹೊರಗೆ ಬಿದ್ದವಳು ರಿಕ್ಷಾ ಮೂಲಕ ಸುಧಾಕರನ ರೂಮಿಗೆ ಹೋಗಿದ್ದಳು. ಹತ್ತು ನಿಮಿಷ ಒಳಗಿದ್ದು ನಂತರ ಹೊರ ಬಂದಳು, ಅಲ್ಲಿಂದ ಮನೆಗೆ ಬಂದವಳು ಪುನಃ ಹೊರಗೆ ಬೀಳಲಿಲ್ಲ."

ಇಬ್ಬರ ಹೇಳಿಕೆಯೂ ಮಹತ್ವದ್ದಾಗಿತ್ತು. ಮೂವರೂ ಊಟಕ್ಕೆ ನಡೆದರು. ಊಟದ ಮಧ್ಯೆ ಹೇಮಂತ ಎಲ್ಲ ವಿಷಯ ತಿಳಿಸಿದ. ಊಟವಾದ ನಂತರ ಕಾಗದದ ತುಂಡುಗಳನ್ನು ಸರಿಯಾಗಿ ಕೂಡಿಸಿ ಅಂಟಿಸಬೇಕೆಂದು ಹೇಳಿದ.

ಅಶೋಕ ಹನ್ನೆರಡು ಕಾಗದದ ತುಂಡುಗಳನ್ನೂ ಸರಿಯಾಗಿ ಕೂಡಿಸಿದ. ಅದೊಂದು ಔಷಧಿ ಅಂಗಡಿಯ ಪಾವತಿ, ನಿದ್ದೆ ಮಾತ್ರೆಯ ಸೀಸೆ ಕೊಂಡಿದ್ದಕ್ಕೆ. ಅದನ್ನು ನೋಡುತ್ತಲೇ ಹೇಮಂತನ ತುಟಿಗಳು ಗೋಲವಾದವು. ಮೆಲುವಾಗಿ ಸಿಳ್ಳು ಹಾಕುತ್ತ "ಅಶೋಕ ಕೇಸು ಅರ್ಧ ಮುಗಿದಂತೆ" ಎಂದ.

"ಇನ್ನರ್ಧ ಮುಗಿಯುವದು ಯಾವಾಗ?" ಎಂದು ಸುಷ್ಮಾ ಕೇಳಿದಳು.

"ನಾಳೆ ರಾತ್ರಿ ಮುಗಿಯಬಹುದು" ಎಂದು ಹೇಳುತ್ತ ಹೇಮಂತ

ಅಶೋಕನ ಕಡೆ ಹೊರಳಿ ''ಅಶೋಕ ಕೂಡಲೇ ರಮಾಕಾಂತನನ್ನು ಕರೆದು ಕೊಂಡು ಬಾ. ನನಗೆನಿಸುವ ಮಟ್ಟಿಗೆ ಅವನ ಜೀವ ಗಂಡಾಂತರದಲ್ಲಿದೆ." ಸುಷ್ಮಾ ಹಾಗೂ ಅಶೋಕ ಬೆಚ್ಚಿ ಬಿದ್ದರು. ರಮಾಕಾಂತನ ಜೀವ ಯಾಕೆ ಗಂಡಾಂತ ರದಲ್ಲಿದೆ ಎಂಬುದು ಅವರಿಗೆ ಅರ್ಥವಾಗದಂತಾಯಿತು.

ಒಂದರ್ಧ ಗಂಟೆ ಡೈರಿ ಬರೆಯುತ್ತ ಕುಳಿತಿದ್ದ ಹೇಮಂತ ಮೇಲೆದ್ದು, ಫೋನಿನ ಬಳಿ ಬಂದು ಇಚ್ಛಿತ ನಂಬರನ್ನು ತಿರುಗಿಸಿ, "ಹಲೋ.. ಶಾಂತಿದೇವಿ ನಾನು ಹೇಮಂತ ಮಾತನಾಡುತ್ತಿರುವುದು" ಎಂದ.

ಆ ಕಡೆಯಿಂದ ಶಾಂತಿ ಮಾತನಾಡಿದಳು, "ಮೇಜರ್...ಏಕೆ ಏನಾದರೂ ವಿಶೇಷವಿದೆಯಾ?"

"ಹೌದು ಅದಕ್ಕಾಗಿಯೇ ಫೋನು ಮಾಡಿದ್ದು...ನೀವು ಇಂದು ಬೆಳಿಗ್ಗೆ ಸುಧಾಕರನನ್ನು ಕಾಣಲು ಹೋಗಿದ್ದಿರಲ್ಲ ಏಕೆ?'' ಒಂದು ಕ್ಷಣ ಮೌನ. ಅವರ ಹಿಂದೆ ಮತ್ತೆ ಶಾಂತಿಯ ಧ್ವನಿ, "ನನ್ನ ಯಜಮಾನರ ಈ ಸ್ಥಿತಿಗೆ ಸುಧಾಕರನೇ ಕಾರಣ ಎಂದು ನನಗೆ ಅನ್ನಿಸಿತ್ತು. ಅದರ ಬಗ್ಗೆ ಸ್ಪಷ್ಟವಾಗಿ ಮಾತನಾಡ ಬೇಕೆಂದು ಹೋಗಿದ್ದೆ."

"ಪರಿಣಾಮವೇನಾಯಿತು?"

"ನನ್ನ ಊಹೆ ತಪ್ಪೆಂದು ಅನಿಸುತ್ತದೆ. ಸುಧಾಕರ ನನ್ನನ್ನು ಪ್ರೀತಿಸುವ ವಿಷಯ ಒಪ್ಪಿಕೊಂಡ. ಆದರೆ ನನ್ನ ಪ್ರೀತಿ ಸಂಪಾದಿಸುವುದಕ್ಕಾಗಿ ವಾಮ ಮಾರ್ಗ ಹಿಡಿಯಲಾರೆ ಎಂದ. ನನಗನಿಸುವ ಮಟ್ಟಿಗೆ ಈ ವಿಷಯದಲ್ಲಿ ಆತ ನಿರಪರಾಧಿ."

"ಹಾಗಾದರೆ ನಿಮ್ಮ ದೃಷ್ಟಿಯಲ್ಲಿ ಅಪರಾಧಿ ಯಾರು?"

"ನನಗೆ ತಿಳಿಯದು ಮೇಜರ್. ನೀವು ಪತ್ತೇದಾರರು...ಅವನನ್ನು ನೀವೆ ಕಂಡುಹಿಡಿಯಬೇಕು."

"ಆಗಲೇ ಕಂಡು ಹಿಡಿದಾಗಿದೆ ಶಾಂತಿ."

"ಆಂ! ಏನಂದಿರಿ? ಅಪರಾಧಿಯನ್ನು ಗುರುತಿದ್ದೀರಾ!"

"ಓಹ್...ಆತ ಕೇವಲ ಅಪರಾಧಿಯಲ್ಲ... ವಿಚಿತ್ರ ಅಪರಾಧಿ..." ಹೇಮಂತ ನಕ್ಕು ನುಡಿದ.

"ಯಾರಪ್ಪಾ ಅವನು ವಿಚಿತ್ರ ಅಪರಾಧಿ?"

"ನಾಳೆ ರಾತ್ರಿ ನಿಮಗೇ ತಿಳಿಯುತ್ತದೆ. ಹಾಂ... ಅಂದಹಾಗೆ ಒಂದು ವಿಷಯ, ನಾಳೆ ರಾತ್ರಿಯ ವರೆಗೂ ನೀವು ಮನೆಬಿಟ್ಟು ಎಲ್ಲಿಗೂ ಹೋಗಬೇಡಿ ತಿಳಿಯಿತೇ?"

"ಆಗಲಿ ಮೇಜರ್"

"ಓ. ಕೆ. ನಮಸ್ಕಾರ."

ಹೇಮಂತ ಫೋನು ಕೆಳಗಿಡುವುದಕ್ಕೂ ಅದರ ಹಿಂದೆಯೇ ಪುನಃ ಗಂಟೆ ಬಾರಿಸಲಾರಂಭಿಸಿತು. ಕೂಡಲೇ ಹೇಮಂತ ಮೇಲೆತ್ತಿದ. ಆ ಕಡೆಯಿಂದ ಅಶೋಕ ಮಾತಾಡುತ್ತಿದ್ದ, "ಮೇಜರ್ ಕೂಡಲೇ ಡಾಕ್ಟರ್ ಶಹಾ ಆಸ್ಪತ್ರೆಗೆ ಬನ್ನಿ."

"ಏಕೆ? ನೀನು ಆಸ್ಪತ್ರೆಯಲ್ಲಿ ಏನು ಮಾಡುತ್ತಿರುವೆ?"

"ನಾನು ರಮಾಕಾಂತನ ರೂಮಿಗೆ ಹೋದೆ ಬಾಗಿಲು ಬಡಿದರೂ ತೆಗೆಯಲಿಲ್ಲ. ಸಂಶಯ ಬಂದಿತು, ಕಿಟಕಿಯಲ್ಲಿ ನೋಡಿದೆ. ಹಾಸಿಗೆಯಲ್ಲಿ ವಿಚಿತ್ರ ಅವಸ್ಥೆಯಲ್ಲಿ ಬಿದ್ದುಕೊಂಡಿದ್ದ. ಕೂಡಲೇ ನಾಲ್ಕಾರು ಜನರನ್ನು ಕೂಡಿಸಿ ಬಾಗಿಲು ಮುರಿದೆ. ನನಗನಿಸುವ ಮಟ್ಟಿಗೆ ಮದ್ಯದಲ್ಲಿ ವಿಷ ಬೆರೆತಿದೆ. ನಾನು ಚಂದ್ರನಾಥ ಅವರಿಗೆ ಫೋನುಮಾಡಿ ಕರೆಸಿಕೊಂಡೆ. ಅವರೆ ರಮಾಕಾಂತನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ."

"ನೀನು ಅಲ್ಲಿಯೇ ಇರು ನಾನು ಬಂದೆ."

ಮೂರು ನಿಮಿಷಗಳಲ್ಲಿ ಬಟ್ಟೆ ಧರಿಸಿ ಹೇಮಂತ ಹೊರಟ. ಸುಷ್ಮಾ ಕಾರು ತಂದು ನಿಲ್ಲಿಸಿದಳು. ಕಾರು ಆಸ್ಪತ್ರೆಯ ಕಡೆ ಓಡತೊಡಗಿತು. ಈ ಬಾರಿ ಸುಷ್ಮಾ ಕಾರು ನಡೆಸುತ್ತಿದ್ದಳು. ಹತ್ತೆ ನಿಮಿಷಗಳಲ್ಲಿ ಅವರು ಆಸ್ಪತ್ರೆ ಸೇರಿದರು.

## 13. ಜೀವ ಸಾಕಾಗಿದೆ

ಅಶೋಕ ಹಾಗೂ ಚಂದ್ರನಾಥ ಹೇಮಂತನಿಗಾಗಿ ಕಾಯುತ್ತಿದ್ದರು. ಹೇಮಂತನನ್ನು ನೋಡುತ್ತಲೇ ಚಂದ್ರನಾಥ ನುಡಿದ, "ಎಲ್ಲಾ ವಿಚಿತ್ರವಾಗಿದೆ. ರಮಾಕಾಂತನನ್ನು ಕೊಲ್ಲಲು ಬಯಸಿದವರು ಯಾರು?"

"ಅವನ ಶತ್ರುಗಳೇ ಇರಬೇಕು?"

"ಅವನ ಶತ್ರುಗಳು ಯಾರಾಗಿರಬಹುದು?"

"ಅದು ನನಗೇನು ಗೊತ್ತು? ಅದನ್ನು ಕಂಡುಹಿಡಿಯಬೇಕಾದವರು ನೀವು; ನಾನಲ್ಲ."

"ನನಗಂತೂ ಜೀವ ಸಾಕು ಸಾಕಾಗಿದೆ. ಇಲ್ಲಿಂದ ಬೇರೆ ಎಲ್ಲಿಗಾದರೂ ವರ್ಗ ಮಾಡಿಸಿಕೊಂಡು ಹೋಗಬೇಕೆಂದುಕೊಂಡಿದ್ದೇನೆ."

ಹೇಮಂತ ನಗುತ್ತ ನುಡಿದ, "ಅಷ್ಟು ಬೇಸರಪಟ್ಟುಕೊಳ್ಳಬೇಡಿ ಇನ್ಸ್‌ಪೆಕ್ಟರ್. ನಿಮಗೆ ಇಲ್ಲಿಂದ ವರ್ಗವಾಗುವುದಂತೂ ಖಂಡಿತ."

ಇನ್ಸ್‌ಪೆಕ್ಟರ್ ಚಂದ್ರನಾಥನ ಮುಖ ಒಮ್ಮೆಲೆ ಕಪ್ಪಿಟ್ಟಿತು. ಹೇಮಂತ ಮತ್ತಷ್ಟು ಜೋರಾಗಿ ನಗುತ್ತ ನುಡಿದ, "ಇನ್ಸ್‌ಪೆಕ್ಟರ್ ಆಗಿ ವರ್ಗವಾಗ ಬಾರದು ಚಂದ್ರನಾಥ. ನಿಮಗೆ ಪ್ರಮೋಷನ್ ಆಗಿ ಡಿ. ಎಸ್. ಪಿ. ಎಂದು ನಿಮ್ಮನ್ನು ನಾನು ಬೀಳ್ಕೊಡುತ್ತೇನೆ...ಹೆದರಬೇಡಿ."

ಬಾಡಿಹೋದ ಚಂದ್ರನಾಥನ ಮುಖ ಒಮ್ಮೆಲೆ ಹೂವಿನಂತೆ ಅರಳಿತು.

"ಅಂದರೆ—ಅಂದರೆ ..ನಿಮ್ಮ ಮಾತಿನ ಅರ್ಥ ಆಗಲಿಲ್ಲ."

"ಅರ್ಥ ಮೇಲೇ ಇದೆ. ಈ ಕೇಸಿನ ಅಪರಾಧಿಯನ್ನು ಹಿಡಿದರೆ ಮುಗಿ ಯಿತು. ನಿಮಗೆ ಪ್ರಮೋಷನ್ ಗ್ಯಾರಂಟಿ--" ಮತ್ತೆ ಅವನ ಮುಖ ಜರ್ರನೆ ಇಳಿಯಿತು.

"ಅಪರಾಧಿ ಸಿಕ್ಕರೆ ತಾನೆ?" ಮೂಗೆಳೆದ.

''ನಾಳೆ ಸಾಯಂಕಾಲ ಸಿದ್ಧರಾಗಿರಿ ಅಪರಾಧಿಯನ್ನು ಹಿಡಿಯಲು."

"ಆಂ ..ಏನೆಂದಿರಿ?' ಚಂದ್ರನಾಥನಿಗೆ ನಂಬಿಕೆಯಾಗಲಿಲ್ಲ."

"ನಾಳೆ ಸಾಯಂಕಾಲ ಅಪರಾಧಿಯನ್ನು ಬಂಧಿಸಲು ಸಿದ್ಧರಾಗಿರಿ ಎಂದೆ"

"ನಿಜವಾಗಿಯೂ."

"ಹೌದು ನಿಜವಾಗಿಯೂ. ನಿಮಗೆ ಚೆನ್ನಾಗಿ ಗೊತ್ತಿದೆ ನಾನು ಚೇಷ್ಟೆ ಮಾಡುವುದಿಲ್ಲವೆಂದು. ಈ ಕೇಸಿನ ಎಲ್ಲಾ ಕೀರ್ತಿ ನಿಮಗೆ ಬಿಟ್ಟುಕೊಡು ತ್ತೇನೆ ಯೋಚಿಸಬೇಡಿ."

ಚಂದ್ರನಾಥನ ಬಾಯಿಂದ ಮಾತೇ ಹೊರಡಲಿಲ್ಲ. ಕಣ್ಣಾಲಿಗಳು ತುಂಬಿ ಬಂದಿದ್ದವು. ಹೇಮಂತನ ಬಲಗೈಯನ್ನು ತನ್ನೆರಡೂ ಕೈಗಳಲ್ಲಿ ತೆಗೆದುಕೊಂಡು ಬಲವಾಗಿ ಅಮುಕುತ್ತಾ ಗದ್ಗದ ಕಂಠದಲ್ಲಿ ನುಡಿದ."ಮೇಜರ್...ನಿಜವಾಗಿಯೂ ನೀವು, ನೀವು..." ಮುಂದೆ ಸರಿಯಾದ ಶಬ್ದ ಸಿಗದೆ "ಯು ಆರ್ ದಿ ಗ್ರೇಟ್... ಮೇಜರ್ ಗ್ರೇಟ್" ಎಂದ. ಹೇಮಂತ ಅವರ ಹೆಗಲ ಮೇಲೆ ಕೈ ಹಾಕಿ ತನ್ನೆಡೆಗೆ ಎಳೆದುಕೊಂಡ. ಆತ್ಮೀಯರಿಬ್ಬರೂ ಆಲಿಂಗಿಸಿಕೊಂಡಾಗ ಸುಷ್ಮಾಳ ಎದೆ ಹೆಮ್ಮೆ ಯಿಂದ ಬೀಗಿತು. ಮೇಜರ್ ಹೇಮಂತನಂತಹ ವ್ಯಕ್ತಿ ತನ್ನ ಬಾಳ ಸಂಗಾತಿ ಯಾಗಿರುವನಲ್ಲಾ ಎಂದು ಹೆಮ್ಮೆ ಅವಳಿಗೆ.

''ಹಲೋ ಮೇಜರ್!'' ಧ್ವನಿ ಬಂದಕಡೆ ಮೂವರೂ ಹೊರಳಿದರು. ಡಾ॥

ಶಹಾ ನಗುತ್ತಾ ನಿಂತಿದ್ದರು.

"ಇದೇನಿದು? ರಾಮ–ಲಕ್ಷ್ಮಣರಂತೆ ಆಲಂಗಿಸಿಕೊಂಡಿದ್ದೀರಿ." ಪ್ರೀತಿಯಿಂದ ಅವರು ಹಾಸ್ಯ ಮಾಡಿದರು.

ಹೇಮಂತ ನಕ್ಕು ಕೇಳಿದ, "ಹೇಗಿದೆ ಡಾಕ್ಟರ್ ಪೇಷಂಟ್ ಸ್ಥಿತಿ?"

''ಪೇಷಂಟ್ ತುಂಬಾ ಲಕ್ಕಿ ಮೇಜರ್, ಅರ್ಧ ಗಂಟೆ ತಡವಾಗಿದ್ದರೂ ಬದುಕುವಂತಿರಲಿಲ್ಲ. ನಿಮ್ಮ ಅಶೋಕನನ್ನು ನಾವು ಅಭಿನಂದಿಸಲೇಬೇಕು.''

ಹೇಮಂತ ಅಶೋಕನನ್ನು ಎಳೆದುಕೊಂಡು ಪ್ರೀತಿಯಿಂದ ಅವನ ಬೆನ್ನು ಚಪ್ಪರಿಸಿದ. ಡಾಕ್ಟರ್ ನುಡಿದರು. ''ಆತ ಸೇವಿಸಿದ ಮದ್ಯದಲ್ಲಿ ವಿಷ ಸೇರಿಸಲಾಗಿದೆ. ನಿಧಾನವಾಗಿ ಪರಿಣಾಮ ಬೀರುವ ಆ ವಿಷದಿಂದ ನಿದ್ರೆ ಬರುತ್ತದೆ. ಒಮ್ಮೆ ನಿದ್ರೆ ಹೋದರೆ ಸಾಕು ಆತನು ಪುನಃ ಮೇಲೇಳಲಾರ. ಈ ರೋಗಿಯ ಸ್ಥಿತಿ ಹಾಗಿಲ್ಲ, ನಾನು ಪರಿಣಾಮವನ್ನು ಹೊರಗೆ ಹಾಕಿದ್ದೇನೆ. ಇನ್ನು ಎರಡು ಗಂಟೆಗಳಲ್ಲಿ ಆತ ಮಾತನಾಡಬಹುದು.''

"ಧನ್ಯವಾದಗಳು ಡಾಕ್ಟರ್"

ಎರಡು ಗಂಟೆ ಬಿಟ್ಟು ಬರುವುದಾಗಿ ಹೇಳಿ ಹೇಮಂತ ಚಂದ್ರನಾಥನನ್ನು ಕರೆದುಕೊಂಡು ಪೋಲೀಸ್ ಸ್ಟೇಷನ್ನಿನ ಕಡೆಗೆ ನಡೆದ. ಸುಷ್ಮಾ ಹಾಗೂ ಅಶೋಕ ಅಲ್ಲಿಯೇ ಉಳಿದರು. ಪೋಲೀಸ್ ಸ್ಟೇಷನ್ ತಲುಪುತ್ತಲೇ ಮೇಜರ್ ಹೇಳಿದ, ''ಚಂದ್ರನಾಥ ಮೊದಲು ಆ ಮದ್ಯದ ಸೀಸೆಯನ್ನು ಪ್ರಯೋಗ ಶಾಲೆಗೆ ಕಳಿಸಿರಿ. ಅದರ ಮೇಲೆ ಮೂಡಿರುವ ಬೆರಳುಗಳ ಮುದ್ರೆ ತೆಗೆಯಲು ತಿಳಿಸಿ. ನನಗೆ ಒಂದು ಗಂಟೆಯೊಳಗೆ ರಿಸಲ್ಟ್ ಬೇಕು.''

ಸರಿಯಾಗಿ ಮುಕ್ಕಾಲು ಗಂಟೆಗೆ ಬೆರಳಚ್ಚು ತಜ್ಞರ ವರದಿ ಹೇಮಂತನ ಮುಂದೆ ಬಂದಿತು. ಚಂದ್ರನಾಥ ಗಂಭೀರ ಧ್ವನಿಯಲ್ಲಿ ಹೇಳಿದ, ''ಮೇಜರ್... ಈ ಸೀಸೆಯ ಮೇಲೆ ಮೂಡಿರುವ ಬೆರಳ ಗುರುತಿಗೂ ಹೋಲಿಕೆ ಇದೆ''

"ಅಂದರೆ. ."

"ಅದೇ ಮೇಜರ್ ನಾನು ನಿಮಗೆ ಹೇಳಬಯಸಿದ್ದು."

''ಓಹ್ ಗಾಡ್...'' ಎನ್ನುತ್ತಾ ಮೇಜರ್ ಮೇಲೆದ್ದು ಹೊರಗೆ ಕಾಲಿಡುತ್ತಾ ಚಂದ್ರನಾಥ್‌ಗೆ ಹೇಳಿದ, "ಚಂದ್ರನಾಥ ನೀವು ರಮಾಕಾಂತನಿಗೆ ಎಚ್ಚರ ಬಂದ ಮೇಲೆ ಅವನ ಹೇಳಿಕೆ ಪಡೆದುಕೊಳ್ಳಿ, ಆಮೇಲೆ ನಮ್ಮ ಮನೆಗೆ ಬನ್ನಿ. ಈಗ ಕೂಡಲೇ ಆಸ್ಪತ್ರೆಗೆ ಫೋನ್ ಮಾಡಿ ಅಶೋಕನಿಗೆ ಬರಲು ಹೇಳಿ."

ಹೇಮಂತ ಮನೆಗೆ ಬಂದು ತನ್ನ ರೂಮಿಗೆ ಬಂದ. ಕಪಾಟು ತೆರೆದು ಡೈರಿ ಹಾಗೂ ಕೆಲವೊಂದು ಕಾಗದಗಳನ್ನು ತೆಗೆದು ಜಾಗೃತೆಯಿಂದ ಪರಿಶೀಲಿಸ

ತೊಡಗಿದ. ಹೊರಗಡೆ ಮೋಟಾರ್ ಸೈಕಲ್‌ನ ಸದ್ದಾಯಿತು. ಮರುಕ್ಷಣ ಅಶೋಕ ಒಳಗೆ ಬಂದ. ಅವನು ಮಾತನಾಡುವ ಮೊದಲೇ ಹೇಮಂತ ಹೇಳಿದ, "ಅಶೋಕ, ಸ್ವಲ್ಪ ಮೇಕಪ್ ಮಾಡಿಕೋ...ಪ್ರೊಫೆಸರ್ ಸತ್ಯೇಂದ್ರ ಅವರನ್ನು ನೆರಳಿನಂತೆ ಹಿಂಬಾಲಿಸು. ಹಗಲು ರಾತ್ರಿ ಅವರ ಬೆನ್ನು ಬಿಡಬೇಡ."

ಅಶೋಕ ಮೇಕಪ್ ರೂಮಿನೊಳಕ್ಕೆ ಹೋದ. ಹೇಮಂತ ಪುನಃ ಕಾಗದ ವಲ್ಲಿ ಮುಖ ಹುದುಗಿಸಿದ.

ಇನ್‌ಸ್ಪೆಕ್ಟರ್ ಚಂದ್ರನಾಥ ಬಂದಾಗ ಆಗಲೇ ಆರೂವರೆಯಾಗಿತ್ತು. ಹೇಮಂತ ಡೈರಿ ಮುಚ್ಚಿ ಮೇಲೆದ್ದ. ಅವನ ಮುಖದ ಮೇಲೆ ವಿಚಿತ್ರಕಾಂತಿ ಮಿನುಗುತ್ತಿತ್ತು. ಚಂದ್ರನಾಥ, "ರಮಾಕಾಂತನಿಗೆ ಎಚ್ಚರ ಬಂದಿದೆ. ಆತ ಚನ್ನಾಗಿ ಮಾತನಾಡಿದ," ಎಂದು ಹೇಳಿದ. ಹೇಮಂತ ಅವನನ್ನು ಕರೆದು ಕೊಂಡು ದವಾಖಾನೆಗೆ ಬಂದ.' ಸುಷ್ಮಾ ಹೊರಗಡೆ ಕಾವಲು ಕುಳಿತಿದ್ದಳು. ಹೇಮಂತನೊಂದಿಗೆ ಆಕೆಯೂ ರಮಾಕಾಂತನ ಕೊಠಡಿ ಪ್ರವೇಶಿಸಿದಳು. ಹೇಮಂತ ಮೊದಲು ರಮಾಕಾಂತನನ್ನು ಪ್ರಸನ್ನಗೊಳಿಸುವ ಉದ್ದೇಶದಿಂದ ನುಡಿದ, "ನಿನ್ನ ಜೀವ ಉಳಿಯಿತು ರಮಾಕಾಂತ, ದೇವರು ದೊಡ್ಡವ. ಅನರ್ಥ ವಾಗಿ ಸತ್ತು ಹೋಗುತ್ತಿದ್ದೆ."

ರಮಾಕಾಂತ ಯಾವ ಮಾತನ್ನು ಆಡಲಿಲ್ಲ. ಅವನ ಮುಖ ಗಂಭೀರ ವಾಗಿತ್ತು. ಅವನ ಮನವಲ್ಲಿ ನಡೆಯುತ್ತಿದ್ದ ವಿಪ್ಲವ ಹೇಮಂತನಿಗೆ ಗೊತ್ತು.

"ರಮಾಕಾಂತ...ನಡೆದು ಹೋದುದಕ್ಕೆ ಚಿಂತಿಸಬೇಡ. ನೀನು ಬದುಕಿ ದ್ದಕ್ಕೆ ದೇವರಿಗೆ ವಂದಿಸು ಸಾಕು...ಅಂದಹಾಗೇ ನಿನಗೆ ಯಾರ ಮೇಲಾವರೂ ಸಂಶಯವಿದೆಯೇ?"

"ಇಲ್ಲ" ಆತ ಒಂದೇ ಮಾತು ಆಡಿದ.

"ಹೋಗಲಿ ನಮಗೆ ತಿಳಿದ ಮಟ್ಟಿಗೆ ನೀನು ಸೇವಿಸಿದ ಆ ಮದ್ಯದಲ್ಲಿ ವಿಷ ಬೆರೆತಿತ್ತು. ಇದರ ಬಗ್ಗೆ ನಿನಗೇನಾದರೂ ತಿಳಿದಿದೆಯೇ?"

ಆತ ಇಲ್ಲವೆಂದು ತಲೆಯಾಡಿಸಿದ. ಹೇಮಂತ ನಕ್ಕು ಕೇಳಿದ, "ನೀನು ಬಹಳ ಮೊದ್ದು ರಮಾಕಾಂತ...ಸೀಲ್ ಮಾಡಿದ ಸೀಸೆ ಎಂದು ನೀನು ತಿಳಿದಿರುವೆ. ಆದರೆ ಅದರ ಮುಚ್ಚಳವನ್ನು ಚೆನ್ನಾಗಿ ಗಮನಿಸಿದೆಯಾ?"

ರಮಾಕಾಂತ ಒಂದು ಬಾರಿ ಹೇಮಂತನೆಡೆ ನೋಡಿದ ಆ ದೃಷ್ಟಿ ಯಲ್ಲಿ ಕುತೂಹಲ ತುಂಬಿತುಳುಕುತ್ತಿತ್ತು. ಅದನ್ನು ಗಮನಿಸಿದ ಮೇಜರ್ ತನ್ನ ಮಾತು ಮುಂದುವರೆಸಿದ, "ಮುಚ್ಚಳದ ಮೇಲೆ ಅತಿ ಚಿಕ್ಕ ರಂಧ್ರವಿದೆ, ಚುಚ್ಚು ಮದ್ದು ಚುಚ್ಚುವ ಸೂಜಿಯಿಂದ ರಂಧ್ರಮಾಡಿ ಸಿರಿಂಜ್ ಮೂಲಕ

ಅದರಲ್ಲಿ ವಿಷ ಕೂಡಿಸಲಾಗಿದೆ. ಅಂದ ಹಾಗೆ ನೀನು ಆ ಮದ್ಯವನ್ನು ಯಾರಲ್ಲಿ ಕೊಂಡೆ?"

ರಮಾಕಾಂತ ಉತ್ತರಿಸಲಿಲ್ಲ.

"ನನಗೆ ಗೊತ್ತು ರಮಾಕಾಂತ, ಅವರನ್ನು ನಾನು ವಿಚಾರಿಸಿಕೊಳ್ಳುತ್ತೇನೆ."

"ಬೇಡ... ಅವನನ್ನು ನಾನು ನೋಡಿಕೊಳ್ಳುತ್ತೇನೆ" ಸರ್ಪದಂತೆ ಪೂತ್ಕರಿಸಿ ನುಡಿದ ರಮಾಕಾಂತ.

ಹೇಮಂತ ಅವನನ್ನು ಸಮಾಧಾನ ಪಡಿಸುತ್ತಾ ಹೇಳಿದ, "ರಮಾಕಾಂತ, ಯಾವಾಗಲೂ ಕಾನೂನನ್ನು ನಾವು ಕೈಗೆ ತೆಗೆದುಕೊಳ್ಳಬಾರದು, ಅದು ಪೋಲಿಸರ ಕೆಲಸ. ಕೇಡಿಗಳನ್ನು ಬಂಧಿಸಿ ನ್ಯಾಯಾಲಯದ ಮುಂದೆ ಅವರು ಹಾಜರುಪಡಿಸುತ್ತಾರೆ. ಶಿಕ್ಷಿಸುವ ಹಕ್ಕು ನ್ಯಾಯಾಲಯಕ್ಕಿದೆ; ನನಗೂ ನಿನಗೂ ಆ ಹಕ್ಕಿಲ್ಲ."

ರಮಾಕಾಂತ ತೆಪ್ಪಗೆ ಕುಳಿತಿದ್ದ. ಹೇಮಂತನೇ ಮುಂದುವರಿಸಿದ, "ಈಗಾಗಲೇ ನೀನೊಂದು ತಪ್ಪು ಮಾಡಿರುವೆ. ಅದಕ್ಕಾಗಿ ನೀನು ಶಿಕ್ಷೆ ಅನುಭವಿಸಬೇಕಾಗುತ್ತದೆ."

"ನಾನದಕ್ಕೆ ಸಿದ್ಧವಾಗಿದ್ದೇನೆ."

"ನನ್ನ ಮಾತು ಕೇಳಿದರೆ ನಿನಗೆ ಕ್ಷಮೆ ಸಿಗಬಹುದು."

"ಹೇಗೆ?"

ನೀನು ಪೋಲಿಸರಿಗೆ ಸಹಾಯಮಾಡು, ಸರಕಾರಿ ಸಾಕ್ಷಿಯೆಂದು ಘೋಷಿಸು. ಬಹುಷಃ ಶಿಕ್ಷೆಯಿಂದ ಪಾರಾಗಬಹುದು. ಬೇಕೆಂದರೆ ನಾನು ನಿನ್ನ ಪರವಾಗಿ ಪ್ರಯತ್ನಿಸುತ್ತೇನೆ."

"ಮೇಜರ್, ಅಷ್ಟು ಮಾಡಿದರೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ಯಾವುದೋ ಆಮಿಷಕ್ಕೆ ಬಿದ್ದು ನಾನು ಮೋಸಹೋದೆ. ನಾನು ಮಾಡಿದ್ದು ತಪ್ಪು ಎಂದು ಈಗ ಅನಿಸುತ್ತಿದೆ."

"ನೀನು ಚಿಂತಿಸಬೇಡ ರಮಾಕಾಂತ, ನಾನಿರುವೆ,"

ರಮಾಕಾಂತ ಕೃತಜ್ಞತೆಯಿಂದ ವಂದಿಸಿ, ನಂತರ ನಡೆದ ಎಲ್ಲಾ ಘಟನೆ ವಿವರಿಸತೊಡಗಿದ:

"ರಾತ್ರಿ ಹತ್ತು ಗಂಟೆಯಾಗಿತ್ತು. ಸತ್ಯೇಂದ್ರ ಊಟಮಾಡಿ ತನ್ನ ರೂಮಿಗೆ ಬಂದಿದ್ದ. ಆಗಲೇ ಫೋನಿನ ಗಂಟೆ ಕರೆಯಿತು. ಆ ಕಡೆಯಿಂದ ಇನ್ಸ್‌ಪೆಕ್ಟರ್ ಚಂದ್ರನಾಥ ಮಾತನಾಡುತ್ತಿದ್ದರು."

"ಪ್ರೊಫೆಸರ್...ನಿಮಗೆ ಸುಧಾಕರರ ಪರಿಚಯವಿದೆಯೆ?''

''ಯಾವ ಸುಧಾಕರ?''

"ಡಾಕ್ಟರ್ ಸುಧಾಕರ. ಹಿಪ್ನೋಟಿಸಂನಲ್ಲಿ ಎತ್ತಿದ ಕೈ ಜಯನಗರದಲ್ಲಿ ಮನೆ ಇದೆ ನೋಡಿ."

''ಸಾರಿ ಇನ್ಸ್‌ಪೆಕ್ಟರ್ ನನಗವರ ಪರಿಚಯವಿಲ್ಲ. ಏಕೆ, ಅವರ ಬಗ್ಗೆ ಏಕೆ ಇಷ್ಟು ವಿಚಾರಿಸುತ್ತಿದ್ದೀರಿ?''

''ಏನೂ ಇಲ್ಲ ಪ್ರೊಫೆಸರ್. ಏನೋ ಸಂಶಯ, ನಿಮಗೆ ಗೊತ್ತೇ ಇದೆ-ಯಲ್ಲಾ ಪೋಲಿಸ್ ಇಲಾಖೆಯೆಂದಮೇಲೆ...''

"ಓಹ್ ಹೀಗೋ . ಸರಿ ಸರಿ.''

''ಆಂ! ಅಂದಹಾಗೇ...ರಮಾಕಾಂತ ನಿಮಗೆ ಗೊತ್ತೆ? ಒಂದು ಕ್ಷಣ ಟೆಲಿಫೋನ್ ಲೈನ್ ಮೇಲೆ ಮೌನ ಆವರಿಸಿತು. ಆ ಮೇಲೆ ಪ್ರೊಫೆಸರ್ ನುಡಿದರು, "ನೀವು ಯಾವ ರಮಾಕಾಂತನ ಬಗ್ಗೆ ವಿಚಾರಿಸುತ್ತಿದ್ದೀರಿ?"

"ಅವನೇ...ನಿಮ್ಮ ಕಾಲೇಜಿನ ವಿದ್ಯಾರ್ಥಿ . ಫೈನಲ್ ಬಿ. ಎ.,"

"ಓಹ್ ಅವನೋ? ಅಷ್ಟೇ ಆತ ವಿದ್ಯಾರ್ಥಿ; ನಾನು ಶಿಕ್ಷಕ.. ಇದೇ ಪರಿಚಯ, ಬೇರೆ ಏನೂ ಇಲ್ಲ. ಏಕೆ?''

"ಸುಧಾಕರ ಹಾಗೂ ರಮಾಕಾಂತ ಇಬ್ಬರೂ ಕೂಡಿಕೊಂಡು ಏನೋ ಮಸಲತ್ತು ನಡೆಸಿದ್ದಾರೆ ಎಂಬ ಸಂಶಯ, ನನಗೆ ಅದಕ್ಕೇ, ವಿಚಾರಿಸಿದೆ, ಈ ವಿಚಾರ ದಯವಿಟ್ಟು ಯಾರ ಮುಂದೂ ತಿಳಿಸಬೇಡಿ.''

ಫೋನ್ ಯಥಾ ಸ್ಥಾನದಲ್ಲಿರಿಸಿ ಪ್ರೊಫೆಸರ್ ಗಹನವಾಗ ವಿಚಾರದಲ್ಲಿ ತೊಡಗಿದರು. ರಮಾಕಾಂತನ ಬಗ್ಗೆ ಅವರು ವಿಚಾರಿಸುತ್ತಿದ್ದರು.

ಅರ್ಧ ಗಂಟೆ ಕಳೆದಿರಬೇಕು. ಪ್ರೊಫೆಸರರ ಕೋಣೆಯ ಕಿಟಕಿ ಬಳಿ ಸದ್ದಾಯಿತು. ಹೊರಗಡೆ ಕಾವಲು ಕಾಯುತ್ತಿದ್ದ ಅಶೋಕ ಚುರುಕಾದ.

## 14. ಆ ರಹಸ್ಯ ಏನಿರಬಹುದು?

ರಾತ್ರಿ ಹನ್ನೆರಡು ಗಂಟೆ.

ಹೇಮಂತ ಇನ್ನೂ ಮಲಗಿರಲಿಲ್ಲ. ಯಾರದೋ ನಿರೀಕ್ಷೆಯಲ್ಲಿರುವಂತೆ

ತೋರುತ್ತಿತ್ತು. ಅದು ನಿಜವೆನ್ನುವಂತೆ ಫೋನಿನ ಗಂಟೆ ಕರೆಯುಬೇಕೆ? ಒಂದೇ ಬಾರಿ ಗಂಟೆ ಬಾರಿಸುತ್ತಲೇ ಫೋನ್ ಎತ್ತಿದ ಹೇಮಂತ, "ಹಲೋ ಹೇಮಂತ ದಿಸ್ ಎಂಡ್" ಎಂದಾಗ ಆ ಕಡೆಯಿಂದ "ಮೇಜರ್ ನಾನು ಅಶೋಕ ಮಾತನಾಡುತ್ತಿರುವದು" ಎಂದು ಅಶೋಕನ ಧ್ವನಿ ಕೇಳಿಸಿತು.

"ಅಶೋಕ ರಿಪೋರ್ಟ್ ಹೇಳು."

''ಮೇಜರ್ ನಿಮ್ಮ ಹಕ್ಕಿ ಮೊದಲು ಸುಧಾಕರನ ಮನೆಯ ಬಳಿ ಹಾಗೂ ನಂತರ ರಮಾಕಾಂತನ ರೂಮಿನ ಬಳಿ ಸುತ್ತು ಹಾಕಿ ಇದೀಗ ಗೂಡು ಸೇರಿತು."

"ಗುಡ್ ನಿನ್ನ ಕೆಲಸ ಮುಗಿಯಿತು. ನೀನಿನ್ನು ಮನೆಗೆ ಹೋಗ ಬಹುದು...ಬೆಳಿಗ್ಗೆ ಎಂಟು ಗಂಟೆಗೆ ಬಾ."

"ಓ. ಕೆ. ಮೇಜರ್. ಗುಡ್ ನೈಟ್.''

"ಗುಡ್ ನೈಟ್'' ಎನ್ನುತ್ತ ಮೇಜರ್ ಫೋನು ಕೆಳಗಿರಿಸಿದಾಗ ಅವನ ಮುಖದ ಮೇಲೆ ಸಂತೃಪ್ತಿಯ ರೇಖೆಗಳು ಮೂಡಿದ್ದವು, ಗಂಟೆಯ ಸಪ್ಪಳಕ್ಕೆ ಎಚ್ಚರಾಗಿದ್ದ ಸುಷ್ಮಾ, "ಏನಾಯಿತು?" ಎಂದು ಕೇಳಿದಳು.

ಏನೂ ಇಲ್ಲ. ಎಲ್ಲ ನಾನೆಣಿಸಿದಂತೆಯೇ ಆಗುತ್ತಿದೆ" ಎಂದು ಹೇಳುತ್ತಾ ಹೇಮಂತ ಸುಷ್ಮಾಳ ಮಗ್ಗುಲಕ್ಕೆ ಸರಿದ. ಆಕೆ ಆತನನ್ನು ತನ್ನೆದೆಯಲ್ಲಿ ಹುದುಗಿಸಿಕೊಂಡಳು.

ಮರುದಿನ ಮುಂಜಾನೆ ಇನ್ನೂ ಎಂಟು ಗಂಟೆಯಾಗಿರಲಿಲ್ಲ. ಇನ್‌ಸ್ಪೆಕ್ಟರ್ ಚಂದ್ರನಾಥರ ಸವಾರಿ ಹೇಮಂತನ ಮನೆಗೆ ಆಗಮಿಸಿತು. ಹೇಮಂತ ಸ್ವಾಗತಿಸಿ ಕಾಫಿಗೆ ಆಮಂತ್ರಿಸಿದ. ತಿಂಡಿ ತಿಂದು ಕಾಫಿ ಕುಡಿಯುತ್ತ ಚಂದ್ರನಾಥ ತಾನು ಬಂದ ಉದ್ದೇಶ ವಿಷದಪಡಿಸಿದ.

"ಇಂದು ನಸುಕಿನಲ್ಲಿ ನನಗೊಂದು ಫೋನ್ ಬಂದಿತ್ತು."

"ಯಾರಿಂದ?"

"ಫೋನು ಮಾಡಿದವರು ತಮ್ಮ ಹೆಸರು ಹೇಳಲಿಲ್ಲ. 'ಸುಧಾಕರನ ಮನೆಯ ಹಿತ್ತಲಲ್ಲಿ ಒಂದು ರಹಸ್ಯ ದೊರೆಯುತ್ತದೆ. ಹೋಗಿ ನೋಡಿ' ಎಂದು ಹೇಳಿದವರೇ ಡಿಸ್‌ಕನೆಕ್ಟ್ ಮಾಡಿದರು. ನಾನು ಅಲ್ಲಿಗೆ ಹೊರಟಿರುವೆ. ನೀವು ಬರುವಿರಾ?"

"ಅವಶ್ಯವಾಗಿ ಆ ರಹಸ್ಯವೇನೆಂಬುದನ್ನು ನಾನೂ ತಿಳಿದುಕೊಳ್ಳುವುದು ಬೇಡವೇ?"

ಹತ್ತು ನಿಮಿಷಗಳಲ್ಲಿ ಹೇಮಂತ ಸುಷ್ಮಾ ಇನ್ಸ್‌ಪೆಕ್ಟರರ ಜೀಪಿನಲ್ಲಿ ಸುಧಾಕರನ ಮನೆಯತ್ತ ಹೊರಟರು. ಜೀಪು ಇನ್ನೂ ಗೇಟು ದಾಟಿರಲಿಲ್ಲ,

ಅಶೋಕ ಬಂದ ಮೋಟಾರ್ ಬೈಕ್‌ನಲ್ಲಿ. ತಮ್ಮನ್ನು ಹಿಂಬಾಲಿಸಲು ಹೇಮಂತ ಅವನಿಗೆ ಸನ್ನೆ ಮಾಡಿದ.

ಸುಧಾಕರನ ಮನೆಗೆ ಬೀಗ ಹಾಕಿತ್ತು. ಎಡ ಬಲಕ್ಕೆ ಬೇರೆ ಮನೆಗಳಿರಲಿಲ್ಲ. ಹೀಗಾಗಿ ಅವನ ಬಗ್ಗೆ ಯಾರನ್ನೂ ವಿಚಾರಿಸುವಂತಿರಲಿಲ್ಲ. ಜೀಪಿನಿಂದ ಕೆಳಗಿಳಿದ ಇನ್ಸ್‌ಪೆಕ್ಟರ್ ಮನೆಯ ಹಿಂದುಗಡೆ ನಡೆದ. ಉಳಿದವರು ಹಿಂಬಾಲಿಸಿದರು.

ಅಲ್ಲೊಂದು ಚಿಕ್ಕ ಪೇರಲ ಮರ. ಆ ಮರದಡಿಯಲ್ಲಿ ಬೂದಿಯ ರಾಶಿ. ಸುಟ್ಟ ಬೂದಿಯನ್ನು ಹೇಮಂತ ಕಟ್ಟಿಗೆಯಿಂದ ಕೆದರಿದ. ನಾಲ್ಕಾರು ಅರಿವೆ ತುಂಡುಗಳು ಕಂಡುಬಂದವು.

ಗುಲಾಬಿ ಬಣ್ಣದ ಶರ್ಟಿನ ತುಂಡು ಹಾಗೂ ಬಿಳಿ ಟೈನ್ ತುಂಡುಗಳು. "ಓಹ್ ಕಳವಾದ ಸುಧಾಕರನ ಬಟ್ಟೆಗಳು!" ಹೇಮಂತನ ಬಾಯಿಯಿಂದ ಉದ್ಗಾರ ಹೊರಟಿತು.

"ಇವೇ ಬಟ್ಟೆ ಧರಿಸಿದ್ದ ವ್ಯಕ್ತಿ ಪ್ರೊಫೆಸರ್ ಮನೆ ಹೊಕ್ಕಿದ್ದು. ಕ್ಯಾಪ್ಟನ್ ಆನಂದರ ಹಾಲಿನಲ್ಲಿ ನಿದ್ದೆ ಮಾತ್ರೆ ಅವನೇ ಕೂಡಿಸಿರಬೇಕು. ಅಂದ ಮೇಲೆ... ಆ ವ್ಯಕ್ತಿ ಬೇರೆ ಯಾರೂ ಅಲ್ಲ ಸುಧಾಕರನೇ ಇರಬೇಕು?"

"ಅವಸರದಲ್ಲಿ ನಿರ್ಣಯ ತೆಗೆದುಕೊಳ್ಳಬೇಡಿ ಚಂದ್ರನಾಥ ಅದು ಸಾಧುವಲ್ಲ."

"ಮೇಜರ್ ಇದು ಅವಸರದ ನಿರ್ಣಯವಲ್ಲ ನೀವೇ ವಿಚಾರಿಸಿ, ಸುಧಾಕರ ಶಾಂತಿಯ ಪ್ರೇಮಿ ಎಂದು ನೀವೇ ಹೇಳಿರುವಿರಿ. ಅಲ್ಲದೆ ಆತ ಹಿಪ್ನೊಸಟಿಂನಲ್ಲಿ ತಜ್ಞ. ಪ್ರೊಫೆಸರರ ಮೇಲೆ ಪ್ರಯೋಗಿಸಿದ, ಶಾಂತಿಯ ಕೊಲೆಮಾಡಲು ಪ್ರೇರೇಪಿಸಿದ. ಇವೇ ಬಟ್ಟೆ ಧರಿಸಿದಾಗ ಆತ ಕಳ್ಳನಂತೆ ಪ್ರೊಫೆಸರರ ಮನೆ ಹೊಕ್ಕು ನಿದ್ರೆ ಮಾತ್ರೆ ಮೂಲಕ ಕ್ಯಾಪ್ಟನ್ ಆನಂದರ ಕೊಲೆ ಮಾಡಿದವ ಇನ್ನೂ ನಾನು ತಡೆಯಲಾರೆ. ಸುಧಾಕರನ ಮೇಲೆ ವಾರಂಟ್ ಹೊರಡಿಸಿ ಅವನನ್ನು ಬಂಧಿಸದೇ ಇರಲಾರೆ."

ಎಷ್ಟು ಹೇಳಿದರೂ ಮೇಜರನ ಮಾತನ್ನು ಚಂದ್ರನಾಥ ಕೇಳಲಿಲ್ಲ. ಅಲ್ಲಿಯೇ ಇದ್ದ ಸುತ್ತಮುತ್ತಲಿನ ನಾಲ್ಕಾರು ಮನೆಗಳಿಂದ ಐದು ಜನರನ್ನು ಕರೆದು ಅವರ ಸಮಕ್ಷಮದಲ್ಲಿ ಬೂದಿ ಹಾಗೂ ಅರ್ಧಂಬರ್ಧ ಸುಟ್ಟ ಬಟ್ಟೆಯ ತುಂಡುಗಳನ್ನು ವಶಪಡಿಸಿಕೊಂಡ, ಜೀಪು ಹೊರಟಿತು. ಹೇಮಂತ ಅಸಮಾಧಾನದಿಂದ ಜೀಪು ಏರಿದ. ಸುಮ್ಮಾ ಮೌನವಾಗಿದ್ದರೆ ಅಶೋಕ ದೂರ್ವಾಸನ ಅವತಾರತಾಳಿದ್ದ.

"ಹಾಗೇ ಹೋಗುವಾಗ ಪ್ರೊಫೆಸರರ ಮನೆಗೂ ಹೋಗಿ ವಿಷಯ

ತಿಳಿಸೋಣ."

ಹೇಮಂತನ ಮಾತಿಗೆ ಚಂದ್ರನಾಥ ಒಪ್ಪಿಕೊಂಡ.

ಪ್ರೊಫೆಸರರಿಗೆ ಎಲ್ಲ ವಿಷಯ ತಿಳಿದು ಅವರು ಮೊದಲು ಅಚ್ಚರಿ ವ್ಯಕ್ತಪಡಿಸಿ ನಂತರ ಸಂತಸದಿಂದ ಹಿರಿಹಿರಿ ಹಿಗ್ಗಿದರು. ಆದರೆ ಶಾಂತಿ ಮಾತ್ರ ಖಿನ್ನಳಾದಳು. ಚಂದ್ರನಾಥ ಬಡಾಯಿ ಕೊಚ್ಚಿಕೊಂಡು ಸಂಜೆಯೊಳಗಾಗಿ ಸುಧಾಕರನನ್ನು ಬಂಧಿಸುತ್ತೇನೆ ಎಂದ.

ಚಂದ್ರನಾಥನು ಹೇಮಂತ ಹಾಗೂ ಸುಷ್ಮಾಳನ್ನು ಮನೆಗೆ ಬಿಟ್ಟು, "ಬಹಳ ಕೆಲಸ ಇದೆ'' ಎಂದು ಹೇಳುತ್ತ ಜೀಪು ಓಡಿಸಿದ, ಹೇಮಂತ ಮುಗುಳುನಗೆ ನಗುತ್ತಾ ಆತನನ್ನು ಬೀಳ್ಕೊಟ್ಟ. ಸುಷ್ಮಾಳಿಗೆ ಆ ಮುಗುಳುನಗೆ ಒಗಟಾಗಿ ಪರಿಣಮಿಸಿತು. ಅಚ್ಚರಿಯಿಂದ ತನ್ನನ್ನೇ ನೋಡುತ್ತಿದ್ದ ಸುಷ್ಮಾಳ ಕಡೆಗೊಮ್ಮೆ ತುಂಟತನದ ದೃಷ್ಟಿ ಬೀರಿ ಹೇಮಂತ ಒಳನಡೆದ.

ಮಧ್ಯಾಹ್ನ ಹನ್ನೆರಡು ಗಂಟೆಯ ಸುಮಾರಿಗೆ ಅಶೋಕ ಫೋನ್ ಮಾಡಿದ. ಪ್ರೊಫೆಸರ್ ಕಾರಿನಲ್ಲಿ ಯಾವದೋ ಊರಿಗೆ ಹೊರಟಿದ್ದಾರೆ. ಅವರನ್ನು ಹಿಂಬಾಲಿಸಬೇಕೋ, ಬೇಡವೊ ಎಂದು ಕೇಳಿದ. ಸ್ವಲ್ಪ ವಿಚಾರಿಸಿ ಹೇಮಂತ ಅವಶ್ಯಕತೆಯಿಲ್ಲ ಬಂದುಬಿಡು ಎಂದು ಹೇಳಿ ಫೋನ್ ಕೆಳಗಿಟ್ಟ. ಅರ್ಧ ಗಂಟೆ ಬಿಟ್ಟು ಶಾಂತಿಯ ಮನೆಗೆ ಫೋನು ಮಾಡಿದಾಗ ಶಾಂತಿಯೇ ಎತ್ತಿದಳು.

"ಶಾಂತಿದೇವಿ ಒಂದು ಪ್ರಶ್ನೆಗೆ ಉತ್ತರ ಕೊಡುವಿರಾ?"

"ಕೇಳಿ ಮೇಜರ್ ನಾನು ಯಾವಾಗ ನಿರಾಕರಿಸಿದ್ದೇನೆ''

''ನಿರಾಕರಿಸಿಲ್ಲ. ಆದರೂ ವಿನಂತಿ ಮಾಡಿಕೊಳ್ಳುವುದು ನನ್ನ ಕೆಲಸ."

''ಕೇಳಿ ಮೇಜರ್"

"ಪ್ರೊಫೆಸರ್ ಊರಲ್ಲಿಲ್ಲವೇ?''

"ಹೌದು...ಅವರು ಕೊಲ್ಹಾಪುರಕ್ಕೆ ಹೋದರು. ನಾಳೆ ಸಾಯಂಕಾಲ ಬರುತ್ತಾರೆ."

"ಏಕೆ? ಏನಾದರೂ ಅವಶ್ಯಕ ಕೆಲಸವಿದೆಯೇ?"

"ಗೊತ್ತಿಲ್ಲ ಮೇಜರ್ ಒಮ್ಮಿಂದೊಮ್ಮೆಲೆ ನಾನು ಊರಿಗೆ ಹೋಗಬೇಕು. ನಾಳೆ ಸಾಯಂಕಾಲ ಬರುತ್ತೇನೆ ಎಂದು ಹೇಳಿದವರೇ ಹೊರಟು ಹೋದರು.''

"ಸರಿ ಸರಿ...ನೀವು ಒಬ್ಬರೆ ಇರುವದು, ಬೇಕೆಂದರೆ ಸುಷ್ಮಾಳನ್ನು ಕಳಿಸಿಕೊಡಲೇ?"

"ಬೇಡ ಮೇಜರ್ ನನಗೇನೂ ಭಯವಿಲ್ಲ,"

"ಸರಿ. ನಿಮ್ಮಿಷ್ಟ ಶಾಂತಿ," ಹೇಮಂತ ಫೋನು ಕೆಳಗಿಟ್ಟ.

ಅಂದು ಹೆಚ್ಚಿಗೆ ಕೆಲಸವಿರಲಿಲ್ಲ. ಯಾವದಾದರೂ ಪಿಕ್ಚರಿಗೆ ಹೋಗ ಬೇಕೆಸಿನಿತು. ಸುಷ್ಮಾಳನ್ನು ಕರೆದು ಕೇಳಿದ. ಸುಷ್ಮಳಿಗಾವ ಸಂತಸ ಅಷ್ಟಿಷ್ಟಲ್ಲ. ಸುಮಾರು ಆರು ತಿಂಗಳುಗಳಿಂದ ಒಂದು ಪಿಕ್ಚರ್ ನೋಡಿರಲಿಲ್ಲ. ಕೂಡಲೇ ಪದ್ಮಾ ಟಾಕೀಸಿಗೆ ಫೋನ್ ಮಾಡಿ ಮೂರು ಸೀಟು ರಿಜರ್ವ್ ಮಾಡಿಸಿದಳು.

ಮಧ್ಯಾಹ್ನ ಊಟ ಮಾಡಿ ಒಂದು ಗಂಟೆ ವಿರಮಿಸಿ, ಹೇಮಂತ, ಅಶೋಕ ಹಾಗೂ ಸುಷ್ಮಾ ಮೂವರೂ ಪದ್ಮಾ ಟಾಕೀಸಿನತ್ತ ನಡೆದರು.

ಧಾರವಾಡ ರೆಸ್ಟೋರೆಂಟಿನಲ್ಲಿ ತಿಂಡಿ ತಿಂದು ಕಾಫಿ ಕುಡಿದಾದ ಮೇಲೆ ಬಹಳ ದಿವಸಗಳ ನಂತರ ಆನಂದದಾಯಕವಾಗಿ ದಿನ ಕಳೆದ ಅನುಭವ ಮೂವರಿಗೂ ಆಯಿತು.

ಕಾರು ಮನೆಯ ಕಡೆ ನಡೆಯದೇ ಪೋಲೀಸ್ ಠಾಣೆಯತ್ತ ನಡೆದಾಗ ಸುಷ್ಮಾ ಅಚ್ಚರಿಯಿಂದ ಕೇಳಿದಳು, "ಈಕಡೆಗೇಕೆ?"

"ಸ್ವಲ್ಪ ನಮ್ಮ ಚಂದ್ರನಾಥರನ್ನು ಮಾತಾಡಿಸೋಣ. ಅವರು ಅಪರಾಧಿಯನ್ನು ಬಂಧಿಸಿದರೋ ಇಲ್ಲವೋ ತಿಳಿಯದು?"

ಚಂದ್ರನಾಥ ಹುಚ್ಚನಂತೆ ಕುಳಿತಿದ್ದ. ಸುಧಾಕರನ ಹೆಸರಿನಲ್ಲಿ ವಾರಂಟ್ ಹೊರಡಿಸಿದ್ದ, ಆದರೆ ನಾಲ್ಕು ಬಾರಿ ಅವನ ಮನೆಗೆ ಹೋದರೂ ಆತ ದೊರೆತಿರಲಿಲ್ಲ. ಮನೆಗೆ ಬೀಗ ಹಾಕಿದಂತೆಯೇ ಇತ್ತು. ರಾತ್ರಿಯ ವರೆಗೂ ಕಾದು ನಂತರ ಕೀಲಿ ಮುರಿದು ಅವನ ಮನೆ ಶೋಧಿಸಿ ಅವನ ಪೂರ್ತಿ ವಿಳಾಸ ತಿಳಿದುಕೊಳ್ಳಬೇಕೆಂದು ಆತ ಯೋಚಿಸಿದ್ದ. ಸಾಯಂಕಾಲ ಐದು ಗಂಟೆಯ ಸುಮಾರಿಗೆ ಕೇವಲ ಐದೇ ನಿಮಿಷಗಳ ಅಂತರದಲ್ಲಿ ಸುಧಾಕರ ಪಾರಾಗಿದ್ದ. ಚಂದ್ರನಾಥ ಅಲ್ಲಿಗೆ ಹೋಗುವದಕ್ಕಿಂತ ಕೇವಲ ಐದು ನಿಮಿಷ ಮೊದಲು ಸುಧಾಕರ ಬಂದಿದ್ದನೆಂದೂ ಎರಡೇ ನಿಮಿಷಗಳಲ್ಲಿ ಆತ ಪುನಃ ಹೊರಬಿದ್ದನೆಂದೂ ತಿಳಿಯಿತು. ಚಂದ್ರನಾಥ ಕೈ ಕೈ ಹಿಸುಕಿಕೊಂಡು ಸುಧಾಕರನ ಮನೆ ಎದುರು ಇಬ್ಬರನ್ನು ಕಾವಲಿಗೆ ನಿಯಮಿಸಿ ಬಂದಿದ್ದ. ಇನ್ನೂ ಅವರಿಂದ ಯಾವ ಸುದ್ದಿಯೂ ಬಂದಿರಲಿಲ್ಲ.

ಹೇಮಂತ ತನ್ನ ಸಂಗಡಿಗರೊಡನೆ ಬಂದುದನ್ನು ಕಂಡು ಆತನ ಬೇಸರ ಸ್ವಲ್ಪ ಮಾಯವಾಯಿತು, ಈ ದಿಶೆಯಲ್ಲಿ ಹೇಮಂತನಿಂದ ಸಹಾಯ ದೊರೆಯಬಹುದೆಂದು ಆಶಿಸಿದ. ಅವರಿಗಾಗಿ ಕಾಫಿ ತರಲು ಹೇಳಿ ತನ್ನ ತೊಂದರೆಯನ್ನು ಅವರ ಮುಂದೆ ಹೇಳಿಕೊಂಡಾಗ ಹೇಮಂತ ನಗುತ್ತಾ ನುಡಿದ, "ಸುಧಾಕರನ ಹಿಂದೆ

ಓಡಾಡುವದನ್ನು ಬಿಡಿ ಚಂದ್ರನಾಥ್. ನೀವು ತಿಳಿದಂತೆ ಆತ ಅಪರಾಧಿಯಲ್ಲ."

"ಆ? ಆತ ಅಪರಾಧಿಯಲ್ಲವೇ?"

"ಅಲ್ಲ."

"ಹಾಗಾದರೆ ಯಾರು ಅಪರಾಧಿ?"

"ಅದನ್ನು ಈಗಲೇ ಹೇಳುವಂತಿಲ್ಲ. ಸಸ್ಪೆನ್ಸ್."

"ನನ್ನ ಮುಂದೂ ಹೇಳದಷ್ಟು ಸಸ್ಪೆನ್ಸ?"

"ನಿಮ್ಮ ಮುಂದೆ ಹೇಳದೆ ಮತ್ತಾರ ಮುಂದೆ ಹೇಳಬೇಕು ನಾನು. ಅವನನ್ನು ಬಂಧಿಸುವವರು ನೀವೇ ಅಲ್ಲವೇ?"

ಚಂದ್ರನಾಥ ಹಿಗ್ಗಿ ಹೀರೆಕಾಯಿಯಾದ. ಕುಳಿತಲ್ಲಿಯೇ ತಾನು ಡಿ. ಎಸ್. ಪಿ. ಯಾದಂತೆ ಕನಸು ಕಂಡ. ಅಷ್ಟರಲ್ಲಿ ಕಾಫಿ ಬಂತು. ಕಾಫಿ ಕುಡಿಯುತ. ಹೇಮಂತ ಚಂದ್ರನಾಥನಿಗೆ ಎಲ್ಲಾ ತಿಳಿಸಿ ಹೇಳಿದ. ಹೊರಡುವ ಮುನ್ನ ಮತ್ತೊಮ್ಮೆ ನೆನಪು ಮಾಡಿದ, "ಚಂದ್ರನಾಥ, ನಾನು ಹೇಳಿದ್ದೆಲ್ಲಾ ನೆನಪಿರಲಿ ಸ್ವಲ್ಪ ತಪ್ಪಿದರೂ ಆ ವಿಚಿತ್ರ ಅಪರಾಧಿ ಪರಾರಿಯಾಗುತ್ತಾನೆ".

"ನೀವು ಚಿಂತಿಸಬೇಡಿ ಮೇಜರ್, ನನಗೆಲ್ಲಾ ನೆನಪಿದೆ."

ಕಾರಿನ ವರೆಗೂ ಕಳಿಸಲು ಬಂದ ಚಂದ್ರನಾಥ, ಕಾರು ಹೋಗುತ್ತಲೂ ಜಿಂಕೆಯಂತೆ ಎರಡೆರಡು ಮೆಟ್ಟಿಲು ಜಿಗಿಯುತ್ತಾ ಒಳಗೆ ಬಂದ. ಅವನಲ್ಲಿ ಹೊಸ ಹುರುಪು ತುಂಬಿ ತುಳುಕುತ್ತಿತ್ತು. ಕೇವಲ ಅರ್ಧ ಗಂಟೆಯ ಹಿಂದೆ ಜೋಲು ಮುಖ ಹಾಕಿಕೊಂಡು ಚಿಕ್ಕ ಚಿಕ್ಕ ಮಾತಿಗೆ ಕೆಂಡ ಕಾರುತ್ತಾ ಕುಳಿತಿದ್ದ ತಮ್ಮ ಸಾಹೇಬರಲ್ಲಿ ಒಮ್ಮೆಲೆ ಆದ ಈ ಬದಲಾವಣೆ ಕಂಡು ಠಾಣೆಯಲ್ಲಿದ್ದ ಪಿ.ಸಿ. ಗಳಿಗೆ ಆಶ್ಚರ್ಯ ಅಷ್ಟಿಷ್ಟಲ್ಲ. ಇದೀಗ ಬಂದು ಹೋದ ಮೇಜರ್ ಮಂತ್ರ ಊದಿ ಹೋದರೋ ಎಂದು ಅವರೆಲ್ಲಾ ಯೋಚಿಸುತ್ತಿದ್ದರು.

## 15. ಸ್ಮಶಾನ ಮೌನ

**ರಾ**ತ್ರಿ ಹತ್ತು ಹೊಡೆದು ಹತ್ತು ನಿಮಿಷಗಳಾಗಿದ್ದವು. ಪ್ರೊಫೆಸರ್ ಸತ್ಯೇಂದ್ರರ ಮನೆಯಲ್ಲಿ ಸ್ಮಶಾನಮೌನ ಆವರಿಸಿತ್ತು. ಮನೆಯಲ್ಲಿದ್ದವಳು

ಶಾಂತಿ ಒಬ್ಬಳೇ. ಊಟ ಮಾಡಿ ಆಕೆ ಬೇಗ ಮಲಗಿದ್ದಳು. ರಾತ್ರಿ ಒಬ್ಬಂಟಿಗಳಾಗಿ ಇರಲು ಹೆದರಿಕೆ ಬಂದಿದ್ದು ಹೇಮಂತನ ಮಾತು ಕೇಳಿ ಸುಷ್ಮಾಳನ್ನು ಕರೆಸಿಕೊಳ್ಳಬೇಕೆಂದು ಮನಸ್ಸಾಗಿದ್ದರೂ ಆಕೆ ಮನಸ್ಸು ಮಾಡಲಿಲ್ಲ. ಅದಕ್ಕೆ ಕಾರಣ ಮುಂಜಾನೆ ಬಂದ ಪತ್ರ. ಮಲಗುವ ಮುನ್ನ ಸಹ ಆಕೆ ಮತ್ತೊಮ್ಮೆ ಆ ಪತ್ರ ಓದಿದ್ದಳು:

"ನನ್ನ ಹೃದಯ ಸಿಂಹಾಸನದ ರಾಣಿ ಶಾಂತಿ,

"ನಿನ್ನನ್ನು ನಾನೆಷ್ಟು ಮರೆಯಲು ಪ್ರಯತ್ನಿಸಿದರೂ ನಿನ್ನನ್ನು ಮರೆಯಲು ಆಗುತ್ತಿಲ್ಲ. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ನಾನು ನಿನಗೆ ಮನಸೋತಿದ್ದೆ. ನನ್ನೊಡನೆ ನೀನು ನಾಟಕಗಳಲ್ಲಿ ಅದೂ ಶೃಂಗಾರಪೂರ್ಣ ಪ್ರಸಂಗಗಳಲ್ಲಿ ಅಭಿನಯಿಸುತ್ತಿರುವಾಗಲಂತೂ ನಾನು ನನ್ನನ್ನೇ ಮರೆತು ಅದೇ ಸತ್ಯವೆಂದು ಅಂದುಕೊಳ್ಳುತ್ತಿದ್ದೆ. ನಿನ್ನನ್ನು ಮದುವೆ ಮಾಡಿಕೊಂಡು ಜೀವನವನ್ನೇ ಸ್ವರ್ಗವನ್ನಾಗಿ ಮಾಡಿಕೊಳ್ಳಬೇಕೆಂದು ಕನಸು ಕಾಣುತ್ತಿದ್ದೆ. ಆದರೆ ನನ್ನೆಲ್ಲ ಕನಸುಗಳು ನನಸಾಗಲಿಲ್ಲ. ನೀನು ಯಾರನ್ನೋ ಮದುವೆಯಾಗಿ ಹೊರಟು ಹೋದೆ. ನಾಲ್ಕು ವರ್ಷ ನನ್ನ ನಿನ್ನ ಭೇಟಿಯಾಗಲಿಲ್ಲ. ನೀನು ಭೇಟಿಯಾಗದಿದ್ದರೂ ಕಳೆದ ನಾಲ್ಕಾರು ತಿಂಗಳ ಹಿಂದೆ ನಿನ್ನ ಸಮಾಚಾರ ತಿಳಿಯಿತು. ನೀನು ಮದುವೆಯಾದರೂ ಅತೃಪ್ತಳು ಎಂಬುದು ನನ್ನ ಗಮನಕ್ಕೆ ಬಾರದೇ ಇರಲಿಲ್ಲ. ನೀನು ನಿನ್ನ ಪತಿಯಿಂದ ವಿಚ್ಛೇದನ ಪಡೆಯಲಿರುವಿ ಎಂದು ಸಹ ನಿನ್ನ ತಂದೆಯವರಿಂದ ತಿಳಿಯಿತು. ಆಗ ನನ್ನಲ್ಲಿ ಪುನಃ ನಿನ್ನನ್ನು ಪಡೆಯುವ ಹಂಬಲ ಚಿಗುರತೊಡಗಿತು. ಅದಕ್ಕಂತಲೇ ನಾನೊಂದು ಯೋಜನೆ ಸಹ ತಯಾರಿಸಿ ಅದನ್ನು ಕಾರ್ಯರೂಪಕ್ಕೆ ಇಳಿಸಿದೆ. ಅದರಲ್ಲಿ ಸಾಕಷ್ಟು ಜಯ ಸಹ ಸಿಕ್ಕಿದೆ. ಇನ್ನು ಕೇವಲ ಎಂಟು–ಹತ್ತು ದಿನಗಳು ಕಳೆದರೆ ಸಾಕು ನಾನು ನೀನು ಹಾಯಾಗಿ ಯಾವ ಹೆದರಿಕೆಯೂ ಇಲ್ಲದೇ ಇರಬಹುದು.

"ನಾಳೆ ರಾತ್ರಿ ನಾನು ನಿನ್ನನ್ನು ಭೇಟಿಯಾಗುತ್ತೇನೆ. ಯಾವ ಸಮಯ ಎಂದು ಹೇಳಲಾರೆ. ರಾತ್ರಿ ಹನ್ನೆರಡು ಗಂಟೆಯೊಳಗಾಗಿ ಬರುವೆ. ದಯವಿಟ್ಟು ದಾರಿ ನೋಡು. ನಿನ್ನ ಪತಿದೇವರ ಬಗ್ಗೆ ಹೆದರಬೇಡ. ಅವರನ್ನು ನಾನೇ ಕೊಲ್ಹಾಪುರಕ್ಕೆ ಓಡಿಸಿರುವೆ.

"ನಿನ್ನನ್ನೆ ಆರಾಧಿಸುವ,

"ಸುಧಾಕರ."

ಪತ್ರವನ್ನೋದಿ ಶಾಂತಿಗೆ ದಿಕ್ಕೇ ತಿಳಿಯದಂತಾಗಿತ್ತು. ಸುಧಾಕರ ತನ್ನನ್ನು ಪ್ರೀತಿಸುತ್ತಾನೆಂದು ಆಕೆಗೆ ತಿಳಿದಿದ್ದರೂ ತನ್ನನ್ನು ಪಡೆಯುವುದಕ್ಕೋಸ್ಕರ

ಈ ಭಯಾನಕ ಹೆಜ್ಜೆ ಇಡುತ್ತಾನೆಂದು ಆಕೆ ಕನಸಿನಲ್ಲಿಯೂ ಯೋಚಿಸಿರಲ್ಲಿಲ್ಲ. ಇಂದು ರಾತ್ರಿ ಯಾವ ಘಟನೆ ನಡೆಯುವುದೋ ಎಂದು ಹೆದರಿ ಆಕೆ ಸುಸ್ತಾ-ಗಿದ್ದಳು. ದೀಪ ಆರಿಸಿ ಮಲಗಿಕೊಂಡಿದ್ದಳು. ಸಮಯ ಕಳೆದಂತೆ ಆಕೆಯ ಹೃದಯಗತಿ ಹೆಚ್ಚುತ್ತಾ ನಡೆದಿತ್ತು. ಅಲ್ಲಿಂದ ಓಡಿಹೋಗಬೇಕು ಎನಿಸುತ್ತಿತ್ತು. ಒಂದು ರೀತಿಯ ವಿಚಿತ್ರ ತಳಮಳ. ಹೇಳತೀರದ ಸಂಕಟ.

ಹಜಾರದ ಗಡಿಯಾರ ಹನ್ನೊಂದು ಗಂಟೆ ಬಾರಿಸಿ ಹೆಚ್ಚು ಸಮಯ ವಾಗಿರಲಿಲ್ಲ. ಬಾಗಿಲ ಕರೆಗಂಟೆ ಬಾರಿಸಿತು. ಶಾಂತಿಯ ಹೃದಯಕ್ರಿಯೆ ನಿಂತಂತೆನಿಸಿತು. ಬಾಗಿಲು ತೆಗೆಯಲೋ ಬೇಡವೋ ಎಂದು ಆಕೆ ಯೋಚಿಸ ತೊಡಗಿದಳು. ಬಾಗಿಲ ಕರೆಗಂಟೆ ಪುನಃ ಮತ್ತೊಮ್ಮೆ ಬಾರಿಸಿದಾಗ ಆಕೆ ಮೇಲೆದ್ದಳು. ನಿಧಾನವಾಗಿ ಕೆಳಗಿಳಿದು ಬಂದು ಡ್ರಾಯಿಂಗ್ ಹಾಲಿನ ದೀಪ ಉರಿಸಿ, "ಯಾರು?" ಎಂದು ಜೋರಾಗಿ ಕೂಗಿ ಕೇಳಿದಳು. ''ನಾನು ಸುಧಾಕರ. ಬೇಗ ಬಾಗಿಲು ತೆರೆ'' ಎಂದು ಸುಧಾಕರ ಮೆಲುವಾಗಿ ನುಡಿದದ್ದು ಕೇಳಿ, ಮತ್ತೆ ಆಕೆ ಗೊಂದಲದಲ್ಲಿ ಬಿದ್ದಳು. ಬಾಗಿಲು ತೆರೆದರೆ ಒಂದು ಸಂಕಟ. ತೆರೆಯದಿದ್ದರೆ ಮತ್ತೊಂದು ಸಂಕಟ ಕೊನೆಗೊಮ್ಮೆ ನಿರ್ಧಾರ ಮಾಡಿ ಬಾಗಿಲು ತೆರೆದೇಬಿಟ್ಟಳು. ಗಾಳಿಯಂತೆ ಒಳಗೆ ನುಗ್ಗಿದ ಸುಧಾಕರ ಬಂದವನೇ ಬಾಗಿಲು ಮುಚ್ಚಿ ಬೋಲ್ಟ್ ಹಾಕಿದ. ಶಾಂತಿ ಮೇಲೆ ತನ್ನ ರೂಮಿಗೆ ಬಂದಳು. ಸುಧಾಕರ ಆಕೆಯನ್ನು ಹಿಂಬಾಲಿಸಿಕೊಂಡು ಬಂದು ಕುರ್ಚಿಯಲ್ಲಿ ಕುಳಿತುಕೊಂಡ.

"ಹೂಂ . ಹೇಳು ಈ ವೇಳೆಯಲ್ಲಿ ಏಕೆ ಬಂದೆ?"

ಶಾಂತಿಯ ಪ್ರಶ್ನೆಗೆ ಸುಧಾಕರ ಬೆಚ್ಚಿಬಿದ್ದ.

"ನಾನೇಕೆ ಬರಲಿ? ನೀನು ಕರೆದಿದ್ದಕ್ಕೆ ಬಂದೆ.''

ಈ ಬಾರಿ ಬೆಚ್ಚಿ ಬೀಳುವ ಸರದಿ ಶಾಂತಿಯದು.

"ನಾನೆಲ್ಲಿ ಕರೆದಿದ್ದೇನೆ? ನೀನು ಸುಳ್ಳು ಹೇಳುತ್ತಿರುವೆ."

"ಶಾಂತಿ ನನಗೆ ಸುಳ್ಳು ಹೇಳಿ ಅಭ್ಯಾಸವಿಲ್ಲ. ನೀನು ಕರೆದದ್ದಕ್ಕೆ ನಾನು ಬಂದಿದ್ದು. ನಿನಗೆ ಸಂಶಯವಿದ್ದರೆ ಅಥವಾ ನನ್ನ ಪರೀಕ್ಷಿಸಬೇಕೆಂದಿದ್ದರೆ ನೀನು ಬರೆದ ಪತ್ರವನ್ನು ನೀನೇ ಓದು."

ಸುಧಾಕರ ಶಾಂತಿಯ ಕೈಗೊಂದು ಪತ್ರವನ್ನಿತ್ತ.

ಶಾಂತಿ ಪತ್ರದ ಮೇಲೆ ಕಣ್ಣು ಹಾಯಿಸಿದಳು.

"ಪ್ರಿಯ ಸುಧಾಕರ,

"ನಿನ್ನನ್ನು ನಾನು ಮರೆಯುತ್ತೇನೆಂದು ಭಾವಿಸಿದ್ದೆ. ಆದರೆ ಮರೆಯಲು ಆಗಲಿಲ್ಲ. ನಿನ್ನನ್ನು ಪ್ರೀತಿಸಿದೆ, ಮದುವೆಯಾಗಲಿಲ್ಲ, ಪ್ರೊಫೆಸರರನ್ನು ಮದುವೆ

ಯಾದೆ, ಪ್ರೀತಿಸಲಾಗಲಿಲ್ಲ. ಸದ್ಯ ನನ್ನ ಬಾಳು ನರಕ ಸದೃಷವಾಗಿದೆ, ಈ ನರಕದಿಂದ ಪಾರಾಗಲು ನಾನು ನಾಲ್ಕು ತಿಂಗಳಿಂದ ಒಂದು ಉಪಾಯವನ್ನು ಮಾಡುತ್ತಾ ಬಂದಿರುವೆ. ನನ್ನ ತಂದೆಯವರಿಗೂ ಈ ವಿಷಯ ತಿಳಿದಿತ್ತು. ಅವರ ಒಪ್ಪಿಗೆಯೂ ದೊರೆತಿತ್ತು. ಆ ಉಪಾಯ ಪೂರ್ತಿ ಫಲಿಸದೆ ಮುಂದಿನ ನಿರ್ಣಯ ತೆಗೆದುಕೊಳ್ಳುವ ಮುನ್ನ ನಿನ್ನನ್ನು ಭೇಟಿಯಾಗಿ ಚರ್ಚೆ ನಡೆಸುವುದು ಅವಶ್ಯವೆನಿಸಿತು. ನಾಳೆ ರಾತ್ರಿ ಹನ್ನೊಂದರಿಂದ ಹನ್ನೆರಡರ ವರೆಗೆ ಬೇಕಾದಾಗ ಬಾ.

"ನಿನ್ನನ್ನೇ ಆರಾಧಿಸುವ, ಶಾಂತಿ."

''ಸುಧಾಕರ ಈ ನಾಟಕ ನನ್ನ ಮುಂದೆ ನಡೆಯಲಾರದು. ನೀನೇ ನನಗೆ ಕಾಗದ ಬರೆದು..."

''ಏನೆಂದೆ! ನಾನು ನಿನಗೆ ಕಾಗದ ಬರೆದಿದ್ದೆನೇ?"

"ಹೌದು, ಏಕೆ ನಂಬಿಕೆ ಬರುವುದಿಲ್ಲವೇ?"

"ಸತ್ಯವಾಗಿಯೂ ನಾನು ನಿನಗೆ ಕಾಗದ ಬರೆದಿಲ್ಲ. ಶಾಂತಿ ಮಡಿಕೆ ಮಾಡಿ ರವಿಕೆಯಲ್ಲಿ ತೂರಿಸಿಕೊಂಡು ಕಾಗದ ತೆಗೆದು ಸುಧಾಕರನ ಮುಂದೆ ಹಿಡಿದಳು. ಸುಧಾಕರ ಆ ಪತ್ರವನ್ನು ಓದಿದ ಅವನ ತುಟಿಗಳ ಮೇಲೆ ಕುಟಿಲ ನಗೆ ಲಾಸ್ಯವಾಡಿತು.

''ಈ ಪತ್ರ ನಾನು ಬರೆದದ್ದಲ್ಲ. ಇವು ನನ್ನ ಅಕ್ಷರಗಳು ಅಲ್ಲ."

"ನಾನು ಆ ಕಾಗದ ಬರೆದಿಲ್ಲ. ಆ ಪತ್ರದಲ್ಲಿದ್ದುದ್ದು ನನ್ನ ಬರಹವಲ್ಲ.''

''ನೀನು ನನಗೆ ಕಾಗದ ಬರೆದಿಲ್ಲ. ನಾನು ನಿನಗೆ ಕಾಗದ ಬರೆದಿಲ್ಲ .. ಕಾಗದಗಳು ಬಂದಿವೆ ಹಾಗಾದರೆ ಈ ಎರಡೂ ಕಾಗದ ಬರೆದವರು ಯಾರು?"

''ಆ ಎರಡೂ ಕಾಗದಗಳನ್ನು ಬರೆದವನು ನಾನು!''

ಇಬ್ಬರೂ ಧ್ವನಿ ಬಂದ ಕಡೆ ನೋಡಿದರು. ಕೈಯಲ್ಲಿ ಪಿಸ್ತೂಲ್ ಹಿಡಿದು ಸತ್ಯೇಂದ್ರ ನಿಂತಿದ್ದ.

"ಓಹ್...ಸತ್ಯೇಂದ್ರ! ನೀವು ಯಾವಾಗ ಬಂದಿರಿ? ಹೇಗೆ ಬಂದಿರಿ? ಅಂದಹಾಗೆ ನೀವು ಕೊಲ್ಹಾಪುರಕ್ಕೆ ಹೋಗಿದ್ದಿಲ್ಲವೇ?"

''ನಿಧಾನವಾಗಿ ಒಂದೊಂದೇ ಪ್ರಶ್ನೆ ಕೇಳು ಡಾರ್ಲಿಂಗ್. ನಾನು ಒಂದೊಂದಾಗಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುತ್ತೇನೆ. ಇದೋ ಕೇಳು ನಿನ್ನ ಮೊದಲ ಪ್ರಶ್ನೆ, 'ಯಾವಾಗ ಬಂದಿರಿ' ಎಂದು. ನಾನು ಬಂದು ಸುಮಾರು ಅರ್ಧ ಗಂಟೆ ಕಳೆಯಿತು. ಎರಡನೆಯದಾಗಿ 'ಹೇಗೆ ಬಂದೆ?' ಕೆಳಗೆ ಬಾತ್ ರೂಮಿಗೆ ಇರುವ ಕಿಟಕಿಯ ಸರಳು ಕೊರೆದು ಒಳಗೆ ಬಂದೆ. ಇನ್ನು ಮೂರನೆಯ

ಹಾಗೂ ಕೊನೆಯ ಪ್ರಶ್ನೆ, 'ಕೊಲ್ಹಾಪುರಕ್ಕೆ ಹೋಗಿದ್ದಿರಲ್ಲವೇ?' ಎಂದು ಕೇಳುವೆ. ಡಾರ್ಲಿಂಗ್ ನಾನು ಕೊಲ್ಹಾಪುರಕ್ಕೆ ಹೋಗಿದ್ದೆ. ಅಲ್ಲಿಯ ಮಹಾಲಕ್ಷ್ಮೀ ಲಾಡ್ಜ್‌ನಲ್ಲಿ ರೂಮು ಮಾಡಿದೆ. ನನ್ನ ರೂಂ ನಂಬರ್ ಇನ್ನೂರಾಹದಿನೆಂಟು. ಲಗೇಜ್ ಇಟ್ಟು ಮುಖ ತೊಳೆದುಕೊಂಡು ಹಾಗೆಯೇ ಇಲ್ಲಿಗೆ ಬಂದೆ."

"ನಿಮ್ಮ ಮಾತು ವಿಚಿತ್ರವಾಗಿದೆಯಲ್ಲ ಸತ್ಯೇಂದ್ರ. ನಿಮ್ಮ ಒಂದೊಂದು ಮಾತೂ ರಹಸ್ಯಮಯವಾಗಿದೆಯಷ್ಟೇ ಅಲ್ಲ, ವಿಷಪೂರಿತವೂ ಆಗಿವೆ."

"ನಿನ್ನಂತಹ ರಹಸ್ಯಮಯ ವಿಷ ಕನ್ಯೆಗೆ ಈ ಪಾರವೇ ಲೇಸೆಂದು ತಿಳಿದು ಕೊಂಡಿರುವೆ. ಅದಕ್ಕೆ .."

"ನೀವು ಏನು ಹೇಳುತ್ತಿರುವಿರಿ! ನಿಮ್ಮ ಮೈಯಲ್ಲಿ ಹುಷಾರಿದೆಯಲ್ಲವೆ?. ನನಗಂತೂ ಒಂದೂ ತಿಳಿಯದಂತಾಗಿದೆ."

"ನನ್ನ ಮುಂದೆ ನಾಟಕ ಮಾಡಬೇಡ ಶಾಂತಿ. ನೀನು ಒಳ್ಳೆಯ ನಟಿ ಯೆಂದೇ ನಾನು ಮೋಸಹೋದೆ. ಇನ್ನೂ ಮೋಸಹೋಗಲು ಸಾಧ್ಯವಿಲ್ಲ. ನಿನ್ನ ನಟನೆಗೆ ಸರಿಯಾದ ಉತ್ತರ ನೀಡಬೇಕೆಂದೇ ನಾನೂ ನಾಟಕ ಮಾಡ ಬೇಕಾಯಿತು. ನನ್ನ ಯೋಜನೆಯಂತೆ ನೀವಿಬ್ಬರೂ ಪ್ರೇಮಿಗಳನ್ನೂ ಒಂದೆಡೆ ಕೂಡಿಸಿದೆ."

## 16. ಪ್ರೇಮ ಬಂಧನ

"ಪ್ರೇಮಿಗಳೇ...ನೀವು ಪ್ರೇಮಿಗಳು! ಅರಿಯದಂತೆ ವರ್ತಿಸಬೇಡ. ನೀನು ಹಾಗೂ ಸುಧಾಕರ ಪ್ರೇಮಿಗಳಲ್ಲವೇ?"

"ಮಿಸ್ಟರ್ ಸತ್ಯೇಂದ್ರ ನೀವು ನಮ್ಮನ್ನು ತಪ್ಪಾಗಿ ತಿಳಿದುಕೊಂಡಿರುವಿರಿ."

"ಬಾಯಿಮುಚ್ಚು...ನಿನ್ನನ್ನು ಮಧ್ಯಸ್ಥಿಕೆಗೆ ಕರೆದಿಲ್ಲ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಟರೆ ಜಗತ್ತು ನೋಡದೇ?"

"ದಯವಿಟ್ಟು ಕೈ ಮುಗಿಯುತ್ತೇವೆ...ಸತ್ಯೇಂದ್ರ ಈ ರೀತಿ ಚಿತ್ರಹಿಂಸೆ ಮಾಡಿ ನನ್ನನ್ನು ಕೊಲ್ಲಬೇಡಿ."

"ನಿನಗೇನೂ ಚಿತ್ರಹಿಂಸೆ ನಾನು ನೀಡಿಲ್ಲ ಶಾಂತಿ, ನೀನೇ ನನಗೆ ಚಿತ್ರ ಹಿಂಸೆ ನೀಡಿ ನನ್ನ ಜೀವನವನ್ನು ನರಕ ಮಾಡಿದೆ. ಮದುವೆಗೆ ಮುನ್ನ ಸುಧಾ

ಕರನನ್ನು ಪ್ರೀತಿಸಿ ಅವನಿಗೆ ಕಳ್ಳ ಬಸಿರಾದ ನಂತರ ವಯಸ್ಸಾಗಿದ್ದರೂ ನನ್ನನ್ನು ಮದುವೆಯಾಗಿ ಪತಿವ್ರತೆಯಂತೆ ನಟಿಸಿದೆ."

"ಇನ್ನು ಮುಂದೆ ಮಾತನಾಡಬೇಡಿ ದಮ್ಮಯ್ಯ, ಬೇಕಿದ್ದರೆ ನನ್ನನ್ನು ಕೊಂದುಹಾಕಿ...ಆದರೆ ಈ ರೀತಿಯ ಕಠೋರ ಶಬ್ದಗಳನ್ನಾಡಿ ನನ್ನನ್ನು ಕೊಲ್ಲಬೇಡಿ."

"ನಿನ್ನನ್ನು ಬದುಕಿಸುತ್ತೇನೆಂದು ಖಚಿತವಾಗಿ ತಿಳಿಯಬೇಡ. ನನ್ನ ಯೋಜನೆ ನಿನ್ನನ್ನು ಕೊಲ್ಲುವದೇ ಆಗಿದೆ. ಸಾಯುವದಕ್ಕೆ ಮೊದಲು ಎಲ್ಲ ವನ್ನೂ ತಿಳಿದುಕೊಂಡು ಸಾಯುವಂತೆ. ಮೊದಮೊದಲು ನಾನು ನಿನ್ನನ್ನು ನಂಬಿದೆ. ಮದುವೆಯಾದ ಮೊದಲಿಗೆ ನಿನ್ನ ತಂದೆಯ ಮನೆಗೆ ಹೋದವಳು ಐದಾರು ತಿಂಗಳು ಹುಷಾರಿಲ್ಲವೆಂದು ಬರಲೇ ಇಲ್ಲ. ಅಲ್ಲಿಯ ಆಸ್ಪತ್ರೆಗೆ ಸೇರಿ ಕಳ್ಳ ಬಸಿರನ್ನು ಹೊರಗೆ ಹಾಕಿಸಿಕೊಂಡೆ, ನಿನಗೆ ಹುಟ್ಟಿದ ಕೂಸು ಸತ್ತು ಹುಟ್ಟಿತು. ಮುಂದೆ ನನ್ನ ಬಳಿ ಬಂದು ನಿನ್ನ ರೂಪಜಾಲದಲ್ಲಿ ಬಂಧಿಸಿದೆ. ನಾನು ನಿನ್ನನ್ನು ನಂಬಿದೆ. ನಮ್ಮ ಮದುವೆಯ ನಾಲ್ಕನೆಯ ವಾರ್ಷಿಕೋತ್ಸ ವಕ್ಕೆ ಮೊದಲು ನಿನ್ನ ಹಾಗೂ ಸುಧಾಕರನ ಪ್ರಣಯ ಪ್ರಸಂಗದ ಫೋಟೋ ನನ್ನ ಕೈಗೆ ದೊರೆತವು.

"ಸುಳ್ಳು...ಸುಳ್ಳು...ಎಲ್ಲಾ ದಂತಕಥೆ."

"ದಂತಕಥೆಯಲ್ಲ; ಸತ್ಯಕಥೆ. ಆಗಲೇ ನಾನು ನಿನ್ನ ಕತ್ತು ಹಿಚುಕಿ ಕೊಲ್ಲಬೇಕೆಂದಿದ್ದೆ. ಹೇಗೋ ತಡೆದುಕೊಂಡೆ. ಅದರಿಂದ ನನಗೆ ಲಾಭವೇ ಆಯಿತು ನಿನ್ನಿಂದ. ನಿಮ್ಮ ತಂದೆ ಹತ್ತು ಲಕ್ಷಕ್ಕೆ ವಿಮೆ ಇರಿಸಿದ್ದಾರೆಂಬ ಸುದ್ದಿ ತಿಳಿಯಿತು. ನಿನ್ನನ್ನು ಕೊಂದು ಆ ಹಣ ಪಡೆಯಲು ಸಂಚು ಹೂಡಿದೆ. ಅದರಂತೆ ನಿನ್ನನ್ನು ಕೊಲ್ಲಲು ಪ್ರಯತ್ನಿಸುವ ನಾಟಕ ಆಡಿದೆ. ನಿನ್ನ ಪ್ರೇಮಿ ಸುಧಾಕರ ಹಿಪ್ನಾಟಿಸಂ ಪ್ರವೀಣ ಎಂಬ ವಿಷಯ ನನಗೇ ಮೊದಲೇ ತಿಳಿದಿತ್ತು. ಒಂದು ಕಲ್ಲಿಗೆ ಮೂರು ಹಣ್ಣು ಉದುರಿಸಲು ಯೋಜನೆ ಹಾಕಿದೆ.

ನಿನ್ನನ್ನು ಕೊಲ್ಲುವುದಕ್ಕಿಂತ ಮೊದಲು ನಿನ್ನ ತಂದೆಯವರನ್ನು ಕೊಲ್ಲು ವದು ಆ ಮೇಲೆ ನಿನ್ನನ್ನು ಕೊಲ್ಲುವುದು. ನಿಮ್ಮಿಬ್ಬರ ಕೊಲೆಯ ಸಂಶಯ ಈ ಸುಧಾಕರನ ಮೇಲೆ ಬರುವಂತೆ ಮಾಡುವುದು.

ಈಗಾಗಲೇ ನಾನು ನನ್ನ ಉದ್ದೇಶದಲ್ಲಿ ಪೂರ್ತಿ ಸಫಲನಾಗಿದ್ದೇನೆ. ನಿಮ್ಮ ತಂದೆ ಸತ್ತರು. ಅದರ ಸಂಶಯ ನಿನ್ನ ಪ್ರೇಮಿ ಸುಧಾಕರನ ಮೇಲೆ ಹೋಯಿತು. ರಮಾಕಾಂತನಿಂದ ಸುಳ್ಳು ಸಾಕ್ಷ್ಯ ಹೇಳಿಸಿ ಸುಧಾಕರನನ್ನು ಹಿಡಿಸಲು ದಾರಿ ಮಾಡಿದೆ. ಅವನ ಬಟ್ಟೆಗಳನ್ನು ರಮಾಕಾಂತನಿಂದ ಕಳವು

ಮಾಡಿಸಿದೆ. ನಿನ್ನೆ ನಾನೇ ಅವುಗಳನ್ನು ಸುಧಾಕರನ ಓತ್ತಲಲ್ಲಿ ಸುಟ್ಟು ಬಂದೆ. ಚಂದ್ರನಾಥನಿಗೆ ಎಲ್ಲಾ ತಿಳಿದಿದೆ. ಈಗಾಗಲೇ ಸುಧಾಕರನ ಹೆಸರಿನಿಂದ ವಾರಂಟ್ ಹೊರಟಿದೆ. ಚಂದ್ರನಾಥ ಬೇಟೆನಾಯಿಯಂತೆ ಅವನನ್ನು ಹುಡುಕುತ್ತಿದ್ದಾನೆ. ಈಗ ನಿನ್ನನ್ನು ನಾನು ಕೊಂದು ನಿನ್ನ ಕೊಲೆಯ ಅಪರಾಧ ಸಹ ಅವನ ಮೇಲೆ ಬರುವಂತೆ ಮಾಡುತ್ತೇನೆ. ನನಗೆ ಸುಲಭವಾಗಿ ಇಪ್ಪತ್ತು ಲಕ್ಷ ರೂಪಾಯಿ ದೊರೆಯುತ್ತದೆ. ಅದರಲ್ಲಿ ಮತ್ತೊಂದು ಮದುವೆಯಾಗಿ ಹಾಯಾಗಿ ಜೀವನ ಕಳೆಯುತ್ತೇನೆ."

"ನೀನು ಎಷ್ಟೇ ಪ್ರಯತ್ನಿಸಿದರೂ ಕಾನೂನು ನಿನ್ನನ್ನು ಬಿಡಲಾರದು. ಪ್ರೊಫೆಸರ್ ಸತ್ಯ, ಎಂದಿದ್ದರೂ ಬಯಲಿಗೆ ಬರಲೇಬೇಕು, ನೀನು ಎಂದಿಗೂ ಪಾರಾಗಲಾರೆ."

"ಅದರಿಂದ ನನಗೆ ದುಃಖವಿಲ್ಲ. ಮಹಾಶಯ ಈಗಾಗಲೇ ನಾನು ಎಲ್ಲರ ದೃಷ್ಟಿಯಲ್ಲಿ ಮನೋರೋಗಿ. ನನ್ನ ಮೇಲೆ ಹಿಪ್ನಾಟಿಸಂ ಪ್ರಯೋಗಿಸಿ ತನ್ನ ನಿಯಂತ್ರಣದಲ್ಲಿಟ್ಟುಕೊಂಡ ಅದೃಶ್ಯ ವ್ಯಕ್ತಿ ನನ್ನನ್ನು ಬೊಂಬೆಯಂತೆ ಆಡಿಸುತ್ತಿದೆ ಎಂದು ಎಲ್ಲರಿಗೂ ಗೊತ್ತು. ಇದಕ್ಕೆ ಮೇಜರ್ ಹೇಮಂತ, ಚಂದ್ರನಾಥ ಹಾಗೂ ಡಾಕ್ಟರ್ ಸಹಾ ಸಾಕ್ಷಿ. ನಾನೇ ನಿನ್ನ ತಂದೆಯ ಕೊಲೆ ಮಾಡಿ ಎಲ್ಲಾ ನನ್ನ ಮೇಲೆ ಸಂಶಯ ಬರುವಂತೆ ಸಾಕ್ಷ್ಯಾಧಾರಗಳನ್ನು ಇಟ್ಟಿದ್ದೇನೆ ಎಂದು ಅವರು ಕನಸಿನಲ್ಲಿಯೂ ಕಲ್ಪಿಸಲಾರರು. ಒಂದು ವೇಳೆ ಅಪ್ಪಿ ತಪ್ಪಿ ಶಿಕ್ಷೆಯಾದರೂ ಎಷ್ಟಾದೀತು? ಬಹಳವೆಂದರೆ ವರ್ಷವೂ ಅಲ್ಲ ಆರು ತಿಂಗಳು. ಅಷ್ಟು ಶಿಕ್ಷೆಯನ್ನು ಅನುಭವಿಸಿ ಹೊರಗೆ ಬರಲು, ನನಗಾಗಿ ಇಪ್ಪತ್ತು ಲಕ್ಷ ಹಾದಿ ಕಾಯುತ್ತಿರುತ್ತದೆ ತಿಳಿಯಿತೆ?"

"ನೀಚ ನೀನು ಮನುಷ್ಯನಲ್ಲ ರಾಕ್ಷಸ."

"ನೀನು ಬೇಕಾದ್ದು ಅನ್ನು ಡಾರ್ಲಿಂಗ್. ಹೇಗೂ ಸಾವಿನ ಅಂಚಿನಲ್ಲಿ ನಿಂತಿರುವೆ. ನಾನೆಲ್ಲ ಅನ್ನಿಸಿಕೊಳ್ಳುವೆ. ನಿನ್ನನ್ನು ಈ ಪಿಸ್ತೂಲಿನಿಂದ ಕೊಲ್ಲದೆ, ನಿನ್ನ ಪ್ರೇಮಿಯ ಡಿಸೆಕ್ಷನ್ ಬಾಕ್ಸ್‌ನಲ್ಲಿರುವ ಚೂರಿಯಿಂದಲೇ ಕೊಲ್ಲುವೆ! ನಿನ್ನ ಆತ್ಮಕ್ಕೂ ಶಾಂತಿ ಸಿಗುತ್ತದೆ. ನೀವಿಬ್ಬರೂ ಪರಸ್ಪರ ಕಾದಾಡಿದಿರಿ, ಸುಧಾಕರ ಸಿಟ್ಟು ತಾಳದೆ ಕೊಂದುಹಾಕಿದ ಎಂದು ಈ ಪತ್ರಗಳಿಂದ ಸಿದ್ಧವಾಗುತ್ತದೆ. ನಾನಂತೂ ಕೊಲ್ಲಾಪುರದಲ್ಲಿದ್ದೇನೆ. ನಿನ್ನನ್ನು ಕೊಲೆ ಮಾಡಿ ಕಾರಿನಲ್ಲಿ ಪರಾರಿಯಾದರೆ ಮುಗಿಯಿತು ನನ್ನ ಯೋಜನೆ ಪೂರ್ತಿಯಾದಂತೆ."

"ನಿನ್ನ ಯೋಜನೆ ಪೂರ್ತಿಯಾಗಲು ಬಿಡುವುದಿಲ್ಲ, ನಾನು ಮೂರ್ಖನೆ." ಎನ್ನುತ್ತ ಸುಧಾಕರ ಪ್ರೊಫೆಸರರ ಮೇಲೆ ನೆಗೆದ. ಅಷ್ಟರಲ್ಲಿ ಸತ್ಯೇಂದ್ರನ

ಕೈಯಲ್ಲಿಯ ಪಿಸ್ತೂಲ್ ಸಜೀವವಾಯಿತು. ಸೈಲೆನ್ಸರ್ ತಗುಲಿಸಿದ್ದರಿಂದ ಸಪ್ಪಳವಾಗಲಿಲ್ಲ. ಪಿಸ್ತೂಲಿನಿಂದ ಸಿಡಿದ ಗುಂಡು ಸ್ವಲ್ಪ ಗುರಿ ತಪ್ಪಿ ಸುಧಾಕರನ ಎದೆ ಸೇರದೆ ಆತನ ಬಲಗೈ ಸೀಳಿಕೊಂಡು ಪಾರಾಯಿತು. ಶಾಂತಿ ಚೀರಿಕೊಂಡು ಸುಧಾಕರನನ್ನು ತಬ್ಬಿಕೊಂಡಳು.

"ವಾಹ್... ಹೀಗಿರಬೇಕು ಪ್ರೀತಿ! ನಿಜವಾಗಿಯೂ ನೀವು ಆದರ್ಶ ಪ್ರೇಮಿಗಳು, ಈಗ ನಿನ್ನ ಸರದಿ"

ಪ್ರೊಫೆಸರ್ ಶಾಂತಿಯತ್ತ ಗುರಿ ಹಿಡಿದರು ಅಷ್ಟರಲ್ಲಿ ಕಿಟಕಿಯಿಂದ ಹಾರಿ ಬಂದ ಚೂರಿ ಆತನ ಕೈಯಲ್ಲಿಯ ಪಿಸ್ತೂಲನ್ನು ಹಾರಿಸಿತು. ತಬ್ಬಿಬ್ಬಾದ ಸತ್ಯೇಂದ್ರ ಕಿಟಕಿಯತ್ತ ನೋಡಿದ. ಬಲಗೈಯಲ್ಲಿ ಪಿಸ್ತೂಲ್ ಹಿಡಿದುಕೊಂಡು ಹೇಮಂತ ಕೋಣೆಯೊಳಗೆ ಹಾರಿಬಂದ. ಅವನ ಹಿಂದೆ ಅಶೋಕ. ಇಬ್ಬರ ಹಿಂದೆ ಚಂದ್ರನಾಥ. ಹೇಮಂತ ಪ್ರೊಫೆಸರರ ಕಡೆ ನೋಡಿ ಕುಟಿಲನಗೆ ನಗುತ್ತ ನುಡಿದ. "ಪ್ರೊಫೆಸರ್ ನಿನ್ನ ನಾಟಕ ಮುಗಿಯಿತು."

"ಹೇಮಂತ...ನೀನು ನನಗೇನೂ ಮಾಡಲಾರೆ. ನೀನು ಹೆಣೆದ ಬಲೆಯಲ್ಲಿ ನೀನೇ ಸಿಲುಕಿಕೊಂಡಿರುವೆ ನನ್ನನ್ನು ಬಂಧಿಸಲು ಸಾಧ್ಯವಿಲ್ಲ".

"ಎಲ್ಲಾ ಸಾಧ್ಯವಿದೆ ಪ್ರೊಫೆಸರ್ ಮೊದಲನೆಯದಾಗಿ ನೀನು ಕೊಲ್ಲಾಪುರಕ್ಕೆ ಹೋಗಿ ರೂಮು ಮಾಡಿದವ ಇಲ್ಲಿಗೇಕೆ ಬಂದೆ? ಇದು ಸಂಶಯಕ್ಕೆ ಆಸ್ಪದ ನೀಡಲಾರದೆ ನೀನೇ ಹೇಳು. ಎರಡನೆಯದಾಗಿ ರಮಾಕಾಂತ ಸತ್ತಿಲ್ಲ. ನೀನು ಚಾಣಾಕ್ಷತನದಿಂದ ವಿಷ ಕೂಡಿಸಿದ ಮದ್ಯ ಆತನಿಗೆ ನೀಡಿದೆ. ಆದರೆ ಅಶೋಕ ಸರಿಯಾದ ಸಮಯಕ್ಕೆ ಹೋಗಿ ಅವನನ್ನು ಬದುಕಿಸಿದ. ಅವನಾಗಲೇ ಪೋಲೀಸರ ಸಾಕ್ಷಿಯಾಗಿದ್ದಾನೆ. ನಿನ್ನನ್ನು ಗಲ್ಲಿಗೇರಿಸಲು ಆತನ ಒಂದೇ ಒಂದು ಸಾಕ್ಷಿ ಸಾಕು. ಕೊನೆಯದಾಗಿ ಈ ರೂಮಿನಲ್ಲಿ ನಡೆದ ಎಲ್ಲಾ ಮಾತುಗಳೂ ರಿಕಾರ್ಡ್ ಆಗಿವೆ. ನಿನ್ನ ಅಪರಾಧವನ್ನು ಸಾಕ್ಷ್ಯಾಧಾರ ಸಹಿತವಾಗಿ ನೀನೇ ಒಪ್ಪಿಕೊಂಡಿರುವೆ. ಅಲ್ಲದೆ ನಿನ್ನ ಧರ್ಮ ಪತ್ನಿ ಶಾಂತಿ ನಿನ್ನ ವಿರುದ್ಧ ಸಾಕ್ಷಿ. ನೀಡುತ್ತಾಳೆ ಈಗಲಾದರೂ ಹೇಳು ನೀನು ಕಾನೂನಿನ ಕೈಯಿಂದ ಪಾರಾಗಬಲ್ಲೆಯಾ?"

ಪ್ರೊಫೆಸರ್ ತಲೆ ತಗ್ಗಿಸಿಕೊಂಡು ನಿಂತಿದ್ದ. ಹೇಮಂತ ಆತನೆಡೆ ನೋಡುತ್ತಾ ನುಡಿದ:

"ಸತ್ಯೇಂದ್ರ ನೀನು ಮಹಾ ಮುತ್ಸದ್ದಿ ಜಾಣ. ಆದರೆ ಅದು ಸದುಪಯೋಗವಾಗಲಿಲ್ಲ. ಶಾಂತಿ ಹಾಗೂ ಸುಧಾಕರ ಕಾಲೇಜಿನ ನಾಟಕದಲ್ಲಿ ಭಾಗ ವಹಿಸಿದಾಗಿನ ಫೋಟೋ ನೋಡಿ ನಿನ್ನ ಪತ್ನಿಯ ಶೀಲವನ್ನು ಶಂಕಿಸಿದೆ. ಅದರ

ಸತ್ಯಾಸತ್ಯತೆಯನ್ನು ತಿಳಿಯಲು ಪ್ರಯತ್ನಿಸಲಿಲ್ಲ. ನಿನ್ನ ಮಾವನವರನ್ನು ಕೊಂದು ನೀನೇ ಬೇಕೆಂತಲೇ ನಿನ್ನ ಡೈರಿ ಸ್ಲಿಪರ್ ಬಿಟ್ಟು ಬಂದೆ. ನಿದ್ದೆ ಮಾತ್ರೆ ಸೀಸೆಯ ಮೇಲೆ ಬೆರಳ ಗುರುತು ಮೂಡಿಸಿ ಅಲ್ಲಿಯೇ ಚೆಲ್ಲಿದೆ. ಯಾವ ಅಪ ರಾಧಿಯೂ ಅಪರಾಧ ಮಾಡಿದ ಸ್ಥಳದಲ್ಲಿ ತನ್ನ ಸುಳಿವು ಬಿಡಲಾರ. ಆದರೆ ನೀನೊಬ್ಬ ವಿಚಿತ್ರ ಅಪರಾಧಿ ಬೇಕೆಂತಲೇ ನಿನ್ನನ್ನು ಸಂದೇಹಿಸುವಂತಹ ಸಾಕ್ಷ್ಯಗಳನ್ನು ಬಿಟ್ಟು ಬಂದೆ...ನಾನಾಗ ನೀನೇ ಅಪರಾಧಿ ಎಂದು ತಿಳಿದಿರ ಲಿಲ್ಲ...ಇನ್‌ಸ್ಪೆಕ್ಟರ್ ನಿನ್ನನ್ನು ಸಂದೇಹಿಸಿದರೂ ನಾನವರನ್ನು ತಡೆದೆ. ಒಂದು ವೇಳೆ ಅವರು ಬಂಧಿಸಿದ್ದರೂ ನ್ಯಾಯಾಲಯದಲ್ಲಿ ನೀನು ಸುಲಭವಾಗಿ ಪಾರಾ ಗುತ್ತಿದ್ದೆ. ನಿನ್ನ ಮನೋಸ್ಥಿತಿ ಸರಿಯಾಗಿಲ್ಲವೆಂದು ಹಾಗೂ ಯಾವ ಅಪ ರಾಧಿಯೂ ತನ್ನ ಇಷ್ಟು ಸುಳಿವು ಕೊಲೆಯಾದ ಜಾಗೆಯಲ್ಲಿ ಬಿಡಲಾರ ಎಂಬ ಎರಡು ಕಾರಣದಿಂದ ಬೇಕಾದ ವಕೀಲ ನಿನ್ನನ್ನು ನಿರ್ದೋಷಿ ಎಂದು ಸಾಬೀತು ಪಡಿಸುತ್ತಿದ್ದ. ಒಂದು ಕ್ಷಣ ನಾನೂ ಮೋಸಹೋದೆ. ನಿಮ್ಮ ಬೆಂಗಾವಲಿಗೆ ನನ್ನ ಸಂಗಡಿಗರನ್ನು ಕಳಿಸಿದೆ. ನಿನ್ನ ಚಟುವಟಿಕೆ ಸಂಶಯಕ್ಕೆ ಆಸ್ಪದವಾಯ್ತು. ರಮಾಕಾಂತನ ಆಗಮನದಿಂದ ಸಂಶಯ ಇಮ್ಮಡಿಯಾಯಿತು. ಒಂದು ರಾತ್ರಿ ಕಳ್ಳನಂತೆ ನಿನ್ನ ರೂಮಿಗೆ ಬಂದಾಗ ನಿನ್ನ ಡೈರಿ ಫೋಟೋ ಹಾಗೂ ನೀನೇ ಸಿದ್ಧಪಡಿಸಿದ ನಿನ್ನ ಯೋಜನೆಯ ಕರಡು ಪ್ರತಿ ದೊರೆಯಿತು. ಮುಂದೆ ಕೇಳು ವುದೇನು? ನನ್ನ ಬಲೆ ಬಿಗಿಯತೊಡಗಿದೆ. ರಮಾಕಾಂತ ಸಿಕ್ಕಿಬಿದ್ದು ನಿಜ ಅರುಹಿದ. ಬೇಕೆಂತಲೇ ಸುಧಾಕರನ ಮೇಲೆ ಸಂಶಯ ಬರುವಂತೆ ಮಾಡಿ ಆತನ ಹೆಸರಲ್ಲಿ ಸುಳ್ಳು ವಾರಂಟ್ ಹೊರಡಿಸಲು ಚಂದ್ರನಾಥನಿಗೆ ತಿಳಿಸಿದೆ. ನನ್ನ ಯೋಜನೆ ಫಲ ನೀಡಿತು. ನೀನು ಕೊಲ್ಲಾಪುರಕ್ಕೆ ಹೋಗುವುದಾಗಿ ನಾಟಕ ಆಡಿದಾಗ ಅಂದುಕೊಂಡೆ, ಇಂದು ನಾಟಕದ ಕೊನೆಯ ಸೀನು, ಅಂಕದ ಪರದೆ ಬೀಳಲಿದೆಯೆಂದು. ನಾನು ಅಂದುಕೊಂಡಂತೆ ಆಯಿತು. ನೀನು ಸಿಕ್ಕಿಬಿದ್ದು ನೀನೇ ತಪ್ಪು ಒಪ್ಪಿಕೊಂಡೆ. ಆದರೆ ಪಾಪ ಸುಧಾಕರ ನಿನಗೆ ಬಲಿಯಾಗುತ್ತಿದ್ದ ಸ್ವಲ್ಪದರಲ್ಲಿ ಉಳಿದುಕೊಂಡ.''

ಪ್ರೊಫೆಸರ್ ಸತ್ಯೇಂದ್ರ ಗೊಂಬೆಯಂತೆ ನಿಂತುಕೊಂಡಿದ್ದ. ಹೇಮಂತ ಚಂದ್ರನಾಥರ ಕಡೆ ಹೊರಳಿ ಆದೇಶ ನೀಡಿದ, "ಇನ್‌ಸ್ಪೆಕ್ಟರ್ ಚಂದ್ರನಾಥ, ನಿಮ್ಮ ವಿಚಿತ್ರ ಅಪರಾಧಿಯನ್ನು ಬಂಧಿಸಿ.''

ಚಂದ್ರನಾಥ ಮುಂದೆ ಬಂದು ಸತ್ಯೇಂದ್ರನ ಕೈಗೆ ಬೇಡಿ ತೊಡಿಸಿದ. ಅಲ್ಲಿಂದ ಹೊರಗೆ ಹೋಗುವ ಮುನ್ನ ಸತ್ಯೇಂದ್ರ ಶಾಂತಿಯ ಕಡೆ ಹೊರಳಿ ನುಡಿದ, ''ಶಾಂತಿ ..ಸಾಧ್ಯವಾದರೆ ನನ್ನನ್ನು ಕ್ಷಮಿಸು." ಶಾಂತಿ ಬಿಕ್ಕಿ ಬಿಕ್ಕಿ

ಅಳಲಾರಂಭಿಸಿದಳು. ಹೇಮಂತ ಆಕೆಯನ್ನು ಸಮಾಧಾನಮಾಡಿದ, ''ಶಾಂತಿ ಆದದ್ದೆಲ್ಲ ಆಗಿಹೋಯಿತು. ದುಃಖಿಸಬೇಡಿ. ದೇವರು ದಯಾಮಯಿ ಎಂಬುದನ್ನು ಮರೆಯಬೇಡಿ. ಸುಧಾಕರನಿಗೆ ಏನೂ ಆಗಿಲ್ಲ. ಆತ ನಿಮ್ಮನ್ನು ನಿಜವಾಗಿಯೂ ಪ್ರೇಮಿಸುತ್ತಾನೆ. ನಿಮಗಾಗಿ ತನ್ನ ಪ್ರಾಣವನ್ನೇ ಕೊಡಲು ಮುಂದಾದ. ನನ್ನ ಮಾತು ಕೇಳುವುದಾದರೆ ನೀವು ಸುಧಾಕರನ ಕೈ ಹಿಡಿಯಿರಿ. ನಿಮ್ಮಿಬ್ಬರ ಬಾಳು ಸ್ವರ್ಗವಾಗುತ್ತದೆ. ನಾನೀಗ ಡಾಕ್ಟರರನ್ನು ಕಳಿಸುತ್ತೇನೆ.''

ಒಬ್ಬೊಬ್ಬರಾಗಿ ರೂಮಿನಿಂದ ಹೊರಗೆ ಹೋದರು. ಸುಧಾಕರ ಶಾಂತಿಯ ಕಡೆ ನೋಡಿದ. ಈಗವನ ಮುಖದ ಮೇಲೆ ಗುಂಡು ತಾಕಿದ ನೋವು ಇರಲಿಲ್ಲ. ಅದು ಯಾವಾಗಲೋ ಮಾಯವಾಗಿ ಹೋಗಿತ್ತು. ಅದರ ಬದಲು ಸಮಸ್ಯೆ ಬಗೆಹರಿಯಿತು. ತನ್ನ ಮೇಲಿನ ಅಪರಾಧದ ಕರಿ ನೆರಳು ಸರಿದುಹೋಯಿತು. ಎಂಬ ಸಮಾಧಾನದ ತೃಪ್ತಿಯ ಭಾವನೆ ಮೂಡಿತ್ತು. ಶಾಂತಿ ಸಹ ಸಮಾಧಾನದ ನಿಟ್ಟುಸಿರು ಬಿಟ್ಟು ಸುಧಾಕರನ ಕಡೆ ನೋಡಿದಳು. ಮರು ಕ್ಷಣ ಪ್ರೊಫೆಸರರ ನೆನಪು ಒಂದು ದುಃಖ ಒತ್ತರಿಸಿ ಬಂದಿತು. ಕಣ್ಣೀರು ಕೋಡಿಯಾಗಿ ಹರಿಯಿತು. ಗಾಬರಿಯಾದ ಸುಧಾಕರ ಎದ್ದು ಬಂದು ಶಾಂತಿಯ ಬಳಿ ಕುಳಿತುಕೊಂಡು ಸಮಾಧಾನ ಹೇಳಿದ. "ಶಾಂತಿ...ನೀನು ಕಲಿತವಳು, ಸುಸಂಸ್ಕೃತಳು. ಈ ರೀತಿ ಅಳುವುದು ತರವಲ್ಲ. ನಮ್ಮ ಕೈಯಲ್ಲಿ ಏನಿದೆ? ನಮ್ಮನ್ನೆಲ್ಲ ಬೊಂಬೆಯಂತೆ ಆಡಿಸುವ ಸೂತ್ರವೊಂದು ಬೇರೆಲ್ಲೋ ಇದೆ.''

''ಸುಧಾಕರ, ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಕನಸು ಮನಸಿನಲ್ಲಿಯೂ ಸತ್ಯೇಂದ್ರನಿಗೆ ಮೋಸ ಮಾಡಲಿಲ್ಲ. ನಮ್ಮಿಬ್ಬರ ಮಧ್ಯೆ ವಯಸ್ಸಿನ ಅಂತರವಿರುವುದು ನಿಜ. ಆದರೆ ಅದೆಂದೂ ನಮ್ಮ ಪ್ರೀತಿ ಪ್ರೇಮಕ್ಕೆ ಅಡ್ಡಿಯಾಗಲಿಲ್ಲ. ಸತ್ಯೇಂದ್ರ ನನ್ನ ಮೇಲೆ ಪ್ರೀತಿಯ ಮಳೆಗರೆಯುತ್ತಿದ್ದರು. ನಾನು ತೃಪ್ತಳಾಗಿದ್ದೆ. ಸುಖಿಯಾಗಿದ್ದೆ...ಹೀಗಿರುವಾಗ ನೀನೇ ಹೇಳು ನಾನು ನಿನ್ನನ್ನು ಬಯಸಲು ಹೇಗೆ ಸಾಧ್ಯ?''

''ಸಮಾಧಾನ ತಂದುಕೋ ಶಾಂತಿ. ಅವರಿಗೆ ತಪ್ಪು ಕಲ್ಪನೆಯಾಗಿದೆ, ಅದಕ್ಕೆ ನಾನೂ ನೀನೂ ಏನೂ ಮಾಡುವಂತಿರಲಿಲ್ಲ. ಅವರ ಒಂದು ಸಂಶಯ ಎಂತಹ ಅನಾಹುತಕ್ಕೆ ಕಾರಣವಾಯಿತು ನೋಡು. ಇದರಿಂದ.ಅವರಿಗಾದರೂ ಸುಖವಾಯಿತೇ? ಅದೂ ಇಲ್ಲ...ಅವರಿಗೆ ಸಂಶಯವಿದ್ದರೆ ಸ್ಪಷ್ಟವಾಗಿ ಮಾತನಾಡಬಹುದಿತ್ತು. ಶಾಂತಿ ದೇವರಾಣೆ ಮಾಡಿ ಹೇಳುತ್ತೇನೆ, ಕಾಲೇಜಿನಲ್ಲಿರುವಾಗ ನಾನು ನಿನ್ನನ್ನು ಮನಸಾರೆ ಪ್ರೀತಿಸಿದ್ದು ನಿಜ. ನನ್ನ ಪ್ರೀತಿ ಪವಿತ್ರವಾದುದು ಯಾವಾಗ ನೀನು ನಿರಾಕರಿಸಿ ನನ್ನ ನಿನ್ನ ಪ್ರೀತಿ ಭ್ರಾತೃ ಪ್ರೀತಿ, ಸಹೋದರ

ಸಹೋದರಿ ಸಂಬಂಧ ಎಂದಾಗ ನನ್ನ ಮನಸಿನಲ್ಲಿದ್ದ ಕಲ್ಮಶವೆಲ್ಲಾ ತೊಳೆದು ಹೋಗಿ ಪವಿತ್ರವಾಯಿತು. ಅಂದು ನೀನು ನನ್ನ ತಂಗಿಯಾದೆ. ಅಂದಿನಿಂದ ಇಂದಿನ ವರೆಗೂ ನಾನು ನಿನ್ನನ್ನು ಅದೇ ದೃಷ್ಟಿಯಲ್ಲಿ ನೋಡುತ್ತ ಬಂದಿರುವೆ. ನೀನು ಇಲ್ಲಿ ಧಾರವಾಡದಲ್ಲಿರುವ ವಿಷಯ ಸಹ ನನಗೆ ತಿಳಿಯದು! ನನ್ನ ದುರ್ವಿಧಿಯೇ ನನ್ನನ್ನಿಲ್ಲಿಗೆ ಎಳೆದು ತಂದತಾಯಿತು. ನನ್ನಿಂದ ನಿನಗೆ ತೊಂದರೆ ಬಂದಿತು. ಇನ್ನು ನಾನಿಲ್ಲಿ ಒಂದು ಕ್ಷಣ ಸಹ ನಿಲ್ಲಲಾರೆ ನಾಳೆಯೇ ನಾನು ಹೋರಟುಹೋಗುತ್ತೇನೆ''

ತಟಕ್‌ನೆ ಎದ್ದು ನಿಂತ ಸುಧಾಕರನ ಕೈ ಹಿಡಿದುಕೊಂಡು ಶಾಂತಿ ನುಡಿದಳು, ''ಸುಧಾಕರ ಏನಿದು? ಈಗ ನೀನು ಹುಚ್ಚನಂತೆ ಆಡುತ್ತಿರುವೆಯಲ್ಲಾ. ನೀನು ಇಲ್ಲಿಂದ ಹೇಡಿಯಂತೆ ಕಂಬಿ ಕಿತ್ತುವುದು ಸರಿಯಲ್ಲ. ಯಾವುದು ಆಗ ಬಾರದಿತ್ತೊ ಅದು ಆಗಿಹೋಯಿತು. ಇನ್ನು ಅದರ ಬಗ್ಗೆ ಚಿಂತಿಸಿ ಫಲವಿಲ್ಲ. ಪ್ಲೀಸ್ ನೀನು ಇಲ್ಲಿಂದ ಹೋಗುವ ಮಾತಾಡಬೇಡ. ನನಗೆ ನೋವಾಗುತ್ತದೆ.''

''ಶಾಂತಿ...ಏನು ನೀನು ಹೇಳುತ್ತಿರುವುದು?''

"ನಾನು ಸರಿಯಾದುದನ್ನೇ ಹೇಳುತ್ತಿದ್ದೇನೆ."

''ಹೌದು ಮಿಸೆಸ್ ಶಾಂತಿ...ನೀವು ಸರಿಯಾದುದನ್ನೇ ಹೇಳುತ್ತಿದ್ದೀರಿ. ಆದರೆ ಪಾಪ ಸುಧಾಕರನಿಗೆ ಅದು ಅರ್ಥವಾಗ್ತಾ ಇಲ್ಲ...''

ಒಳಗೆ ಪ್ರವೇಶಿಸುತ್ತಿದ್ದಂತೆ ಚಂದ್ರನಾಥ ನುಡಿದ. ಅವನು ಒಳಗೆ ಬರುತ್ತಲೂ ಅವಾಕ್ಕಾಗಿ ಸುಧಾಕರ ಹಾಗೂ ಶಾಂತಿ ಕುಳಿತುಬಿಟ್ಟರು. ಅವರಿಬ್ಬರ ಕೈಗಳು ಒಂದಕ್ಕೊಂದು ಬೆಸೆದುಕೊಂಡಿದ್ದವು. ಅವರೆಡೆ ವ್ಯಂಗ್ಯವಾಗಿ ನೋಡಿ, ಚಂದ್ರನಾಥ ಹೇಳಿದ, ''ಸುಧಾಕರ ನನಗೆ ನಿಮ್ಮ ಮೇಲೆ ಸಂಶಯ ಬಲವಾಗಿದೆ. ಶಾಂತಿ ಕೂಡ ಇನ್ನೂ ಸಂದೇಹಮುಕ್ತರಾಗಿಲ್ಲ. ಹೇಮಂತ ಅವರ ವಿಚಾರ ಏನೇ ಇರಲಿ ನನಗಂತೂ ನಿಮ್ಮಿಬ್ಬರ ಮೇಲೆ ಸಂಶಯವಿದೆ. ನಿಮ್ಮ ಮೋಸ ಜಾಲದಲ್ಲಿ ಪಾಪ ಮಗುವಿನಂತಿದ್ದ ಪ್ರೊಫೆಸರ್ ಬಲಿಬಿದ್ದರು. ನಾನು ಇಷ್ಟಕ್ಕೆ ಸುಮ್ಮನಿರಲಾರೆ. ತಪಾಸಣೆ ಪ್ರಾರಂಭಿಸುತ್ತೇನೆ. ನಿಮಿಬ್ಬರನ್ನೂ ಕೈಗೆ ಕೋಳ ತೊಡಿಸಿ ಸೆರೆಮನೆಗೆ ಒಯ್ಯುವ ವರೆಗೂ ನನಗೆ ಸಮಾಧಾನವಿಲ್ಲ.''

''ಚಂದ್ರನಾಥ ..ನೀವು ಶಿಷ್ಟಾಚಾರ ಮೀರಿ ಮಾತನಾಡುತ್ತಿದ್ದೀರಿ!'' ಶಾಂತಿ ಆಬ್ಬರಿಸಿದಳು.

''ಮಿಸೆಸ್ ಶಾಂತಿ, ನನಗೆ ಬುದ್ದಿ ಹೇಳುವ ಮೊದಲು ನೀವು ಶಿಷ್ಟಾಚಾರ ಕಲಿತುಕೊಳ್ಳಿರಿ. ಪತಿ ಬಂಧನಕೊಳ್ಳಪಟ್ಟು ಹತ್ತು ನಿಮಿಷ ಸಹ ಕಳೆದಿಲ್ಲ; ಪ್ರಿಯತಮನೊಂದಿಗೆ ಚಕ್ಕಂದ ಪ್ರಾರಂಭಿಸಿದಿರಿ, ದಯವಿಟ್ಟು ಕೈಗಳನ್ನು

ಬಿಡಿಸಿಕೊಳ್ಳಿ, ಹೊರಗಡೆ ವೈದ್ಯರು ಬರುವ ಸದ್ದಾಗುತ್ತಿದೆ.''

ಆಗಲೇ ಶಾಂತಿ ಹಾಗೂ ಸುಧಾಕರರಿಬ್ಬರಿಗೂ ತಿಳಿದದ್ದು ತಮ್ಮ ಕೈಗಳು ಪರಸ್ಪರ ಬಂಧನದಲ್ಲಿವೆಯೆಂದು. ವಿದ್ಯುತ್ ತಂತಿ ಸ್ಪರ್ಶವಾದಂತೆ ಸರಕ್‌ನೆ ಕೈ ಹಿಂದೆ ಎಳೆದುಕೊಂಡು ದೂರ ಸರಿದರು.

ಅದೇ ವೇಳೆಗೆ ವೈದ್ಯರು ಒಳಗೆ ಪ್ರವೇಶಿಸಿದರು. ಸುಧಾಕರನನ್ನು ಪರೀಕ್ಷಿಸಿದರು. ಗಾಯ ನೋಡಿದರು. ಒಂದು ಚುಚ್ಚುಮದ್ದು ಚುಚ್ಚಿ ಬ್ಯಾಗು ಮುಚ್ಚಿ ಮೇಲೇಳುತ್ತಾ ಹೇಳಿದರು, ಇನ್ಸ್‌ಪೆಕ್ಟರ್. ಒಳಗೆ ಗುಂಡಿದೆ. ಹೊರಗೆ ತೆಗೆಯದಿದ್ದರೆ ಅಪಾಯ. ಆಸ್ಪತ್ರೆಗೆ ಕರೆದುಕೊಂಡು ಬನ್ನಿ ಆಪರೇಶನ್ ಮಾಡಬೇಕು.''

ಮುಂದೆ ವೈದ್ಯರು...ಅವರ ಹಿಂದೆ ಚಂದ್ರನಾಥ, ನಂತರ ಸುಧಾಕರ, ಕೊನೆಗೆ ಶಾಂತಿ ಹೊರಬಂದರು. ಎಲ್ಲರೂ ಹೊರಗೆ ಬರುತ್ತಲೂ ಅವರಿಗಾಗಿ ಕಾಯ್ದು ನಿಂತಿದ್ದ ಇಬ್ಬರು ಬಾಗಿಲು ಭದ್ರಪಡಿಸಿ ಬೀಗ ಹಾಕಿ ಮೇಲೆ ಸೀಲ್ ಮಾಡಿದರು. ಕಬ್ಬಿಣದ ಗೇಟಿಗೂ ಸಹ ಬೀಗ ಜಡಿದು ಸೀಲ್ ಮಾಡಲಾಯಿತು. ವೈದ್ಯರು ತಮ್ಮ ಸ್ಕೂಟರ್ ಏರಿದರು. ಚಂದ್ರನಾಥನ ಜೀಪಿನಲ್ಲಿ ಸುಧಾಕರ ಶಾಂತಿ ಕುಳಿತರು. ಚಂದ್ರನಾಥ ಕುಳಿತುಕೊಳ್ಳುತ್ತಿದ್ದಂತೆ ಜೀಪು ಸ್ಟಾರ್ಟ್ ಆಯಿತು. ಮುಂದಿನ ಕ್ಷಣ ಸತ್ಯೇಂದ್ರ ಅವರ ಬಂಗಲೆ ಭೂತ ಬಂಗಲೆಯಂತೆ ಭೀತಿ ಹುಟ್ಟಿಸುವ ತೆರದಿ ಬಿಕೋ ಎನ್ನತೊಡಗಿತು.

ದೂರದಲ್ಲಿ ಎರಡು ನಾಯಿಗಳು ಬೊಗಳುತ್ತಿದ್ದಂತೆ, ಯಾವುದೋ ಮರದ ಮೇಲಿದ್ದ ಗೂಬೆ ಸಹ ಘೂಕ್...ಘೂಕ್ ಎಂದಿತು.

## 17. ಅಃ! ವಿಚಿತ್ರ ಅಪರಾಧಿ ಇವನೆ?

**ಮ**ಧ್ಯರಾತ್ರಿ! ಎರಡು ಗಂಟೆ ಮೀರಿಹೋಗಿತ್ತು. ಎಲ್ಲೆಡೆ ಶಾಂತಿಯ ಸಾಮ್ರಾಜ್ಯ ಹರಡಿತ್ತು. ಅಲ್ಲಿಯ ವರೆಗೂ ಬೊಗಳಿ ಬೊಗಳಿ ಸುಸ್ತಾಗಿದ್ದ ನಾಯಿಗಳೂ ಸಹ ಯಾವುದೋ ಮೂಲೆ ಸೇರಿ ನಿದ್ರಿಸುವ ಸಮಯ. ಸ್ತಬ್ಧತೆ, ಗಾಳಿಯೂ ಸಹ ಜೋರಾಗಿ ಬೀಸುತ್ತಿರಲಿಲ್ಲ.

ಪ್ರೊಫೆಸರ್ ಸತ್ಯೇಂದ್ರ ಅವರ ಮನೆಯ ಪಕ್ಕದಲ್ಲೊಂದು ಚಿಕ್ಕ ಬೀದಿ.

ಅಲ್ಲಿದ್ದವು ನಾಲ್ಕಾರು ಮನೆಗಳು ಮಾತ್ರ. ಆ ಮನೆಗಳ ಮಧ್ಯದಲ್ಲಿ ಸಾಕಷ್ಟು ಬಯಲು ಪ್ರದೇಶ. ಬಯಲು ಪ್ರದೇಶಗಳಲ್ಲಿ ತೆಂಗು, ಸಂಪಿಗೆ ಮಾವಿನ ಮರಗಳು ಬೆಳೆದಿದ್ದವು, ಅಂಥ ಒಂದು ನಾಲ್ಕಾರು ಮರಗಳ ಗುಂಪು.

ಒಂದು ಮಾವಿನ ಮರದ ರೆಂಬೆಗಳು ಸ್ವಲ್ಪ ಅಲ್ಲಾಡಿದವು. ಮರುಕ್ಷಣ ಪೂರ್ತಿ ಕಪ್ಪು ಬಟ್ಟೆ ಧರಿಸಿದ್ದ ವ್ಯಕ್ತಿಯೊಂದು ಮರದ ಮೇಲಿಂದ ಕೆಳಕ್ಕೆ ಧುಮುಕಿತು. ಮರದ ರೆಂಬೆ ಹಾಗೂ ಎಲೆಗಳು ಅಲ್ಲಾಡಿದ ಸಪ್ಪಳ ಮಾತ್ರ ಕೇಳಿಸಿತು. ಕಾಲಲ್ಲಿ ರಬ್ಬರ್ ಬೂಟುಗಳಿದ್ದುದರಿಂದ ಪಾದದ ಸಪ್ಪಳವಾಗಲಿಲ್ಲ ಒಂದೆರಡು ನಿಮಿಷ ಅಲುಗಾಡದೆ ಸ್ಥಿರವಾಗಿ ನಿಂತ ಆ ವ್ಯಕ್ತಿ ಮೆಲ್ಲನೆ ಪ್ರೊಫೆಸರ ಮನೆಯ ಹಿಂಭಾಗಕ್ಕೆ ಬಂದಿತು. ಕಾಂಪೌಂಡ್ ಸಮೀಪ ಬಂದು ಮತ್ತೆ ಒಂದು ಬಾರಿ ಅತ್ತಿತ್ತ ಸೂಕ್ಷ್ಮವಾಗಿ ನಿರೀಕ್ಷಿಸಿದ ಆ ವ್ಯಕ್ತಿ ಟಣ್ ಎಂದು ಕಪ್ಪೆಯಂತೆ ಮೇಲೆ ಜಿಗಿದು ಕಾಂಪೌಂಡ್ ಗೋಡೆಯ ಮೇಲೆ ಕೈ ಊರಿ ಅದೇ ವೇಗದಿಂದ ಒಳಗಡೆ ನೆಗೆಯಿತು. ಇಷ್ಟು ಮಾಡಲು ಕೆಲವೊಂದು ಕ್ಷಣಗಳು ಮಾತ್ರ ಸಾಕಾದವು. ನಂತರ ಒಂದೊಂದೇ ಹೆಜ್ಜೆ ಇಡುತ್ತಾ ನಿಧಾನವಾಗಿ ಬಾತ್‌ರೂಮಿನ ಬಳಿ ಇರುವ ನೀರಿನ ಸಿಮೆಂಟ್ ಪೈಪ್ ಹತ್ತಿರ ಬಂದುನಿಂತು. ಮೂರು ಅಂತರ ಮೇಲಿದ್ದ ಕಿಟಕಿಯೆಡೆ ದೃಷ್ಟಿ ಹರಿಸಿತು. ಕೈಗಳಿಗೆ ಕಪ್ಪು ಚೀಲ ಧರಿಸಿ ಮರವೇರುವ ಮಂಗನಂತೆ ಪೈಪ್ ಏರಿ ಕಿಟಕಿಯ ಮೂಲಕ ಒಳಗೆ ಪ್ರವೇಶಿಸಿತು.

ಅದು ಸ್ನಾನದ ಮನೆ, ಆಚೆಗಿರುವುದು ಚಿಕ್ಕ ಕೊರಡಿ, ಸ್ನಾನದ ಕೋಣೆಯಿಂದ ಹೊರಗೆ ಬಂದ ಆ ವ್ಯಕ್ತಿ ಚಿಕ್ಕ ಕೊರಡಿಯತ್ತ ಹೆಜ್ಜೆ ಹಾಕಿ ಬಾಗಿಲು ತೆರೆದು ಒಳಗೆ ಪ್ರವೇಶಿಸಿತು. ಎರಡು ಮೂರು ನಿಮಿಷ ಬಿಟ್ಟು ಆ ಕಪ್ಪು ಬಟ್ಟೆ ಧರಿಸಿದ ವ್ಯಕ್ತಿ ಹೊರಗೆ ಬಂದಾಗ ಕತ್ತಲೆಯಲ್ಲಿಯೂ ಆ ವ್ಯಕ್ತಿಯ ಕಣ್ಣುಗಳು ಬೆಕ್ಕಿನ ಕಣ್ಣುಗಳಂತೆ ಫಳಫಳ ಹೊಳೆಯುತ್ತಿದ್ದವು. ಆ ವ್ಯಕ್ತಿಯ ಕೈಯಲ್ಲೊಂದು ಚಿಕ್ಕ ಕಟ್ಟಿಗೆಯ ವಸ್ತುವೊಂದಿತ್ತು. ಮನೆಯೆಲ್ಲ ಗಾಢಾಂಧಕಾರದಲ್ಲಿ ಮುಳುಗಿದ್ದರೂ ಆ ವ್ಯಕ್ತಿ ಮನೆಯಲ್ಲಿ ಸರಳವಾಗಿ ಅಡ್ಡಾಡುತ್ತಾ ಮೆಟ್ಟಿಲಿನ ಬಳಿ ಬಂದಿತು. ಮೆಟ್ಟಲೇರಿ ಮೇಲೆ ಪ್ರೊಫೆಸರರ ಬೆಡ್‌ರೂಮ್‌ನ ಬಳಿ ಬಂದು, ಬಾಗಿಲನ್ನು ತೆರೆದು ಒಳಗೆ ಪ್ರವೇಶಿಸಿ. ಅಲ್ಲಲ್ಲಿ ತಡಕಾಡಿ ಭಗವಾನ ಬುದ್ಧದೇವನ ಮೂರ್ತಿ ತೂಗುಹಾಕಿದ ಗೋಡೆಯ ಬಳಿ ಬಂದು ನಿಂತಿತು. ಬುದ್ಧ ದೇವನ ತಲೆಯ ಮೇಲೆ ಕೆಂಪು ದೀಪ ಉರಿಯುತ್ತಿತ್ತು. ಕೈ ಚಾಚಿ ಕೆಂಪು ದೀಪ ಕಿತ್ತಿ ತೆಗೆದು ಅದನ್ನು ಪ್ಯಾಂಟಿನ ಜೇಬಿಗೆ ಸೇರಿಸಿದ ಆ ವ್ಯಕ್ತಿ ಮರಳಿ ಬಾಗಿಲೆಡೆ ಹೆಜ್ಜೆ ಹಾಕುತ್ತಿದ್ದಾಗ ಮೆಲ್ಲನೆ ಸಿಳ್ಳುಹಾಕಲಾರಂಭಿಸಿತ್ತು.

ಅದೇ ಕ್ಷಣ ಝುಗ್ ಎಂದು ದೀಪ ಬೆಳಗುತ್ತಲೂ ಅವಾಕ್ಕಾಗಿ ನಿಂತ ವ್ಯಕ್ತಿ ಬಾಗಿಲತ್ತ ನೋಡುತ್ತಲೂ ಬಾಯಿಯಿಂದ ಚಿಕ್ಕ ಚೀತ್ಕಾರವೊಂದು ಹೊರಬಿತ್ತು. ಬಾಗಿಲ ಬಳಿ ಕೈಲಿ ಪಿಸ್ತೂಲ ಹಿಡಿದು ಹೇಮಂತ ನಿಂತಿದ್ದ. ಅವನ ಹಿಂದೆ ಅಶೋಕ, ಸುಷ್ಮಾ. ಚಂದ್ರನಾಥ ಎಲ್ಲಕ್ಕಿಂತ ಹಿಂದೆ ಶಾಂತಿ, ಸತ್ಯೇಂದ್ರ ಮತ್ತು ಸುಧಾಕರ.

ದೀಪದ ಬೆಳಕಿನಲ್ಲಿ ಆ ಕಪ್ಪು ಬಟ್ಟೆ ಧರಿಸಿದ ವ್ಯಕ್ತಿಯನ್ನು ನೋಡುತ್ತಲೂ ಪ್ರೊಫೆಸರ್ ಸತ್ಯೇಂದ್ರ ಮತ್ತು ಹೇಮಂತನನ್ನು ಹೊರತುಪಡಿಸಿ, ಉಳಿದವರ ಬಾಯಿಯಿಂದ "ಓಹ್! ರಮಾಕಾಂತ .." ಎಂಬ ಅಚ್ಚರಿಯ ನುಡಿ ಹೊರಬಿದ್ದಿತು. ತುಂಟು ನಗೆ ನಗುತ್ತ ಹೇಮಂತ ನುಡಿದ, "ಹೌದು ರಮಾಕಾಂತ, ಸತ್ಯೇಂದ್ರ ಅವರ ಅಚ್ಚುಮೆಚ್ಚಿನ ವಿದ್ಯಾರ್ಥಿ, ನಮ್ಮ ಕೇಸಿಗೆ ಸಂಬಂಧಿಸಿದ ವಿಚಿತ್ರ ಅಪರಾಧಿ!"

"ನನಗೆ ನಿಮ್ಮ ಮಾತು ಅರ್ಥವಾಗಲಿಲ್ಲ!" ಚಂದ್ರನಾಥ ಉದ್ಗರಿಸಿದ.

"ಏಕೆ?"

"ಏಕೆಂದರೆ ಈಗಾಗಲೇ ನಾವು ಸತ್ಯೇಂದ್ರ ಅವರನ್ನು ಬಂಧಿಸಿದ್ದೇವೆ. ಅವರೇ ಅಪರಾಧಿ ಎಂದು ನೀವೇ ಸಿದ್ಧಪಡಿಸಿದ್ದೀರಿ. ಹೀಗಿರುವಾಗ ರಮಾಕಾಂತ..."

"ಮಿಸ್ಟರ್ ಚಂದ್ರನಾಥ, ಒಂದು ವೇಳೆ ಆ ರೀತಿ ನಾನು ವರ್ತಿಸದಿದ್ದರೆ ಬಹುಷ ಸತ್ಯೇಂದ್ರ, ಶಾಂತಿ ಹಾಗೂ ಸುಧಾಕರ ಈ ಮೂವರಲ್ಲಿ ಒಬ್ಬರೂ ಬದುಕುತ್ತಿರಲಿಲ್ಲ."

"ಆಂ!" ಎಂದು ಬಾಯಿ ಬಿಟ್ಟುಕೊಂಡು ನಿಂತುಬಿಟ್ಟ ಚಂದ್ರನಾಥ. ಹೇಮಂತ ತನ್ನ ಮಾತು ಮುಂದುವರಿಸಿದ. ''ಸ್ವಲ್ಪ ರಮಾಕಾಂತನ ಕೈಯಲ್ಲಿಯ ವಸ್ತುವನ್ನು ಗಮನಿಸಿ." ಎಲ್ಲರ ದೃಷ್ಟಿ ಅದರತ್ತ ಹರಿಯಿತು.

''ಅದು ಟೇಪ್ ರಿಕಾರ್ಡರ್" ಶಾಂತಿ ಸಹಜವಾಗಿ ನುಡಿದಳು.

''ಹೌದು . ಸತ್ಯೇಂದ್ರ ಕಿಟಕಿಯಿಂದ ಬಂದುದೂ ಶಾಂತಿ, ಸುಧಾಕರ ಮಾತನಾಡಿದ್ದೂ. ಸತ್ಯೇಂದ್ರ ನನ್ನೆದುರು ತಪ್ಪು ಒಪ್ಪಿಕೊಂಡಿದ್ದೂ ಎಲ್ಲಾ ಇದರಲ್ಲಿ ಟೇಪ್ ಆಗಿದೆ. ಭಗವಾನ್ ಬುದ್ಧನ ತಲೆಯ ಮೇಲಿದ್ದ ಕೆಂಪು ದೀಪ ಗಮನಿಸಿದಾಗಲೇ ನನಗೆ ಸಂಶಯ ಬಂದು ಹೋಯಿತು, ಅದು ಜಪಾನ್‌ನಲ್ಲಿ ತಯಾರಾದ ವಿಶೇಷ ಮೈಕ್ರೊಫೋನ್ ಎಂದು. ಮೇಲೆ ಅಟ್ಟದ ಮೇಲೆ ನಡೆವ ಮಾತುಕತೆ ಆ ಮೈಕ್ರೊಫೋನ್ ಮೂಲಕ ಕೆಳಗಡೆ ಇದ್ದ ಟೇಪ್ ರಿಕಾರ್ಡರ್‌ನಲ್ಲಿ ಧ್ವನಿಮುದ್ರಿತಗೊಳ್ಳುತ್ತಿತ್ತು."

"ನನಗೊಂದೂ ಅರ್ಥವಾಗುತ್ತಿಲ್ಲ...ಎಲ್ಲಾ ವಿಚಿತ್ರವಾಗಿದೆ. ಟೇಪ್ ಆಗುತ್ತಿದ್ದುದು ಸತ್ಯೇಂದ್ರರಿಗೆ ತಿಳಿದಿತ್ತೆ? ತಿಳಿದಿದ್ದರೆ ಅವರು ತಪ್ಪು ಒಪ್ಪಿಕೊಂಡಿದ್ದೇಕೆ? ಅಪರಾಧಿಗಳಾಗದಿದ್ದರೂ ಅಪರಾಧಿಯಂತೆ ವರ್ತಿಸಿದ್ದೇಕೆ?"

"ಹಾಂ...ಹಾಂ...ನಿಧಾನವಾಗಿ ಕೇಳಿ ಎಲ್ಲಾ ತಿಳಿಸುತ್ತೇನೆ...ಅರೆರೇ ಇದೇನು?" ಎನ್ನುತ್ತಿರುವಂತೆಯೇ ಹೇಮಂತನ ಕೈಯಲ್ಲಿಯ ಪುಟ್ಟ ಪಿಸ್ತೂಲ್ ಬೆಂಕಿ ಕಾರಿತು. ಸೈಲೆನ್ಸರ್ ಜೋಡಿಸಿದ್ದ ಪ್ರಯುಕ್ತ ಸಪ್ಪಳವಾಗದಿದ್ದರೂ ಎಲ್ಲರ ಲಕ್ಷ ಹೇಮಂತನ ಕಡೆ ಇದ್ದುದನ್ನು ಗಮನಿಸಿದ ರಮಾಕಾಂತ ಕಿಟಕಿಯಿಂದ ಪಾರಾಗಲು ಪ್ರಯ್ನಸುತ್ತಿಸುತ್ತಿದ್ದಂತೆ ಪಿಸ್ತೂಲಿನಿಂದ ಸಿಡಿದ ಗುಂಡು ಅವನ ಕಾಲಲ್ಲಿ ಸೇರಿತು...."ಹಾ .ಅಯ್ಯೋ! ಅಮ್ಮಾ!" ಎಂದು ಕಿರುಚುತ್ತ ಆತ ನೆಲಕ್ಕೆ ಕುಸಿದ. ಹೇಮಂತ ಚಂದ್ರನಾಥರ ಕಡೆ ಹೊರಳಿ ಹೇಳಿದ. "ಹೂಂ... ಬೇಗ ರಮಾಕಾಂತನನ್ನು ಆಸ್ಪತ್ರೆಗೆ ಸೇರಿಸಿರಿ ರಾತ್ರಿ ಬಹಳವಾಗಿದೆ, ಎಲ್ಲರೂ ಮನೆಗೆ ಹೋಗುವಾ. ನಾಳೆಸಂಜೆ 'ಪ್ರೆಸ್ ಕಾನ್ಫರೆನ್ಸ್' ಕರೆಯಿರಿ. ಎಲ್ಲವನ್ನೂ ವಿಷದವಾಗಿ ಅಲ್ಲಿಯೇ ತಿಳಿಸುತ್ತೇನೆ."

ಚಕಚಕನೆ ಎಲ್ಲಾ ಕೆಲಸ ಮುಗಿದವು. ಚಂದ್ರನಾಥ ರಮಾಕಾಂತನನ್ನು ಆಸ್ಪತ್ರೆಗೆ ಸೇರಿಸಿದ. ಅಶೋಕ ಮಧ್ಯದಲ್ಲೇ ಇಳಿದು ರೂಮುಸೇರಿದ. ಸತ್ಯೇಂದ್ರ ಹಾಗೂ ಶಾಂತಿ ಒಲುಮೆಯಿಂದ ಒಬ್ಬರನ್ನೊಬ್ಬರು ತಬ್ಬಿಕೊಂಡು ಹೇಮಂತನ ಮನೆಯಲ್ಲಿದ್ದ ಗೆಸ್ಟ್ ರೂಮು ಸೇರಿದರು. ಶಾಂತಿ ಸತ್ಯೇಂದ್ರನ ಬಾಹು ಬಂಧನದಲ್ಲಿ ಜಗವನ್ನೇ ಮರೆತು ಅವನಲ್ಲಿ ಒಂದಾದಳು. ಅಂದು ಅವಳ ಪಾಲಿಗೆ ಹೇಮಂತ ಮಾನವನಾಗಿ ಕಾಣದೆ ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವ ಭಗವಂತನೇ ಅವನ ರೂಪದಲ್ಲಿ ಅವತರಿಸಿ ಬಂದಿದ್ದಾನೆ ಎನಿಸಿತು.

ಅತ್ತ ಗೆಸ್ಟ್ ರೂಮಿನಲ್ಲಿ ಸತ್ಯೇಂದ್ರ ಶಾಂತಿಯನ್ನು ಬರಸೆಳೆದು ಅಪ್ಪಿಕೊಂಡ, ಸಂತೋಷ ತಾಳಲಾರದೆ ಶಾಂತಿ ಹಸುಗೂಸಿನಂತೆ ಅವನೆದೆಯಲ್ಲಿ ಮುಖ ಹುದುಗಿಸಿ ಅಳಲಾರಂಭಿಸಿದಳು. ಸತ್ಯೇಂದ್ರ ಸಮಾಧಾನಪಡಿಸತೊಡಗಿದ. "ಡಾರ್ಲಿಂಗ್ ..ಎಲ್ಲಾ ಸರಿಹೊಯಿತು. ಇನ್ನೇಕೆ ದುಃಖಿಸುತ್ತಿರುವಿ?"

"ನೀವೇಕೆ ಆ ರೀತಿ ವರ್ತಿಸಿದಿರಿ? ತಪ್ಪು ಮಾಡದಿದ್ದರೂ ನಿಮ್ಮ ಮೇಲೆ ಏಕೆ ಅಪರಾಧ ಹೊತ್ತುಕೊಂಡಿರಿ?''

"ಎಲ್ಲಾ ನಿನಗಾಗಿ, ನಿನ್ನ ಒಳಿತಿಗಾಗಿ ಶಾಂತಿ .."

''ಆಂ! ಏನೆಂದಿರಿ?"

"ಹೌದು ಎಲ್ಲಾ ನಿನ್ನನ್ನು ಉಳಿಸಲಿಕ್ಕಾಗಿ ಶಾಂತಿ ನಿನ್ನನ್ನು ನಾನು ತುಂಬಾ ಪ್ರೀತಿಸುತ್ತೇನೆ...ಅದಕ್ಕಾಗಿ ಈ ರೀತಿ ಮಾಡಬೇಕಾಯಿತು. ಶಾಂತಿ

ಇದು ನಿನಗೆ ಅರ್ಥವಾಗದು. ನಾಳೆ ಹೇಮಂತ ಎಲ್ಲಾ ತಿಳಿಸಿ ಹೇಳುತ್ತಾರೆ.

''ಹೇಮಂತ ದೇವರಂತೆ ಬಂದು ಕಾಪಾಡಿದ," ಎನ್ನುತ್ತ ಶಾಂತಿ ಅವನನ್ನು ತಂಬ್ಬಿಕೊಂಡಳು.

# 18. ಗುಟ್ಟು ರಟ್ಟು

**ಮ**ರುದಿನ ಸರಿಯಾಗಿ ಸಾಯಂಕಾಲ ಹೇಮಂತನ ಹೇಳಿಕೆಯಂತೆ ಪ್ರೊಫೆಸರ್ ಸತ್ಯೇಂದ್ರ ಅವರ ಮನೆಯಲ್ಲಿ ಪ್ರೆಸ್ ಕಾನ್ಫರೆನ್ಸ್ ನಡೆಯಿತು. ಚಂದ್ರನಾಥ ಒಳ್ಳೆಯ ವ್ಯವಸ್ಥೆ ಮಾಡಿದ್ದ, ಮೊದಲು ಕಾಫಿ, ಉಪಹಾರ. ನಂತರ ಹೇಮಂತನ ಹೇಳಿಕೆ ಪ್ರಾರಂಭವಾಯಿತು. ಸ್ವಲ್ಪ ಎತ್ತರದಲ್ಲಿರಿಸಿದ ಮೇಜು, ಎರಡು ಕುರ್ಚಿಗಳು. ಡಾಯಸ್‌ನಂತಹ ಆ ಜಾಗೆಗೆ ಬಂದು ಎದ್ದು ನಿಂತು ಹೇಮಂತ ಪ್ರಾರಂಭಿಸಿದ. ಸುತ್ತಲೂ ಸೂಜಿ ಬಿದ್ದರೂ ಕೇಳಿಸುವಂತಹ ಶಾಂತ ವಾತಾವರಣ ಉಂಟಾಯಿತು. ಎಲ್ಲರೂ ನೆಟ್ಟ ನೋಟದಿಂದ ಹೇಮಂತನೆಡೆ ನೋಡತೊಡಗಿದರು.

ಬಲಬದಿಗೆ ಕುಳಿತಿದ್ದ ಜಿಲ್ಲಾ ನ್ಯಾಯಾಧೀಶರು, ಪೋಲೀಸ್ ವರಿಷ್ಠಾಧಿಕಾರಿಗಳು ಅಲ್ಲದೆ ಜಿಲ್ಲಾಧಿಕಾರಿಗಳು, ವೈದ್ಯರ ತಂಡ ಮೆಚ್ಚುಕೆಯ ದೃಷ್ಟಿಯಿಂದ ಹೇಮಂತನನ್ನು ನಿರೀಕ್ಷಿಸುತ್ತಿದ್ದರು, ಎಡಬದಿಗೆ ಶಾಂತಿ, ಸತ್ಯೇಂದ್ರ, ಸುಷ್ಮಾ, ಅಶೋಕ ಹಾಗೂ ಚಂದ್ರನಾಥ ಅಲ್ಲದೆ ಡಾ. ಶಹಾ ಉಪಸ್ಥಿತರಿದ್ದರು. ಎದುರುಗಡೆಯ ಪ್ರಥಮ ಸಾಲಿನಲ್ಲಿ ಪತ್ರಕರ್ತರು, ಅವರ ಹಿಂದೆ ಪ್ರತಿಷ್ಠಿತ ಜನ, ಅಧಿಕಾರಿಗಳು ಅಲ್ಲದೆ ಆಮಂತ್ರಿತರು.

ಎಲ್ಲರೆಡೆ ಒಂದು ಬಾರಿ ಸಮ್ಮೋಹಿನಿಯಂತೆ ನಗೆ ಬೀರುವ ದೃಷ್ಟಿ ಚೆಲ್ಲಿ ನಮಸ್ಕರಿಸಿದ ಹೇಮಂತ ಒಂದೊಂದಾಗಿ ಮಾತುಗಳನ್ನಾಡತೊಡಗಿದ, ಧ್ವನಿ ಗಂಭೀರವಾಗಿತ್ತು.

"ನಾಲಂದಾ ವಿಶ್ವವಿದ್ಯಾಲಯದಂಥ ಜಗತ್ಪ್ರಸಿದ್ಧ ವಿಶ್ವವಿದ್ಯಾಲಯ ನಮ್ಮ ಭಾರತದಲ್ಲಿತ್ತು ಎಂದು ಹೇಳಲು ಪ್ರತಿಯೊಬ್ಬ ಭಾರತೀಯನು ಹೆಮ್ಮೆಪಡುತ್ತಾನೆ. ಅಲ್ಲಿ ಅಭ್ಯಸಿಸಲು ಜಗತ್ತಿನ ಮೂಲೆಮೂಲೆಯಿಂದ ದೇಶವಿದೇಶದ ಸಾವಿರಾರು ವಿದ್ಯಾರ್ಥಿಗಳು ಬರುತ್ತಿದ್ದರು. ಗುರುಗಳು ಅವರೆಲ್ಲರನ್ನು ಪ್ರೀತ್ಯಾ

ದರಗಳಿಂದ ಕಂಡ ತಮ್ಮ ಬಳಿಯಿದ್ದ ವಿದ್ಯೆಯನ್ನು ಅವರಿಗೆ ಧಾರೆಯೆರೆಯುತ್ತಿದ್ದರು. ವಿದ್ಯಾರ್ಥಿಗಳೂ ಸಹ ಗುರುಗಳನ್ನು ಪೂಜ್ಯಭಾವನೆಯಿಂದ ನೋಡಿಕೊಳ್ಳುತ್ತಿದ್ದರು. ಹೀಗಾಗಿ 'ಆಚಾರ್ಯ ದೇವೋಭವ' ಎಂಬ ಮಾತು ಜನ್ಮತಾಳಿತು. ಆಚಾರ್ಯ ಎಂದರೆ ಗುರು; ಗುರು ದೇವರ ಸಮಾನ. ದೇವರನ್ನು ಕಾಣುವಂತೆ, ಪೂಜಿಸುವಂತೆ ಗುರುವನ್ನು ಕಾಣಬೇಕು ಪೂಜಿಸಬೇಕು ಎಂದು ಅರ್ಥ.

"ಈ ರೀತಿ ನೂರಾರು, ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದ ವಾತಾವರಣ ಇತ್ತೀಚಿನ ಹತ್ತಿಪ್ಪತ್ತು ವರ್ಷಗಳಿಂದ ಬದಲಾಗುತ್ತಿದೆ. ಗುರು ಶಿಷ್ಯರ ಮಧ್ಯೆ ಇದ್ದ ಸುಮಧುರ ವಾತಾವರಣ ಮಾಯವಾಗಿ ವೈರತ್ವ ಮೂಡುತ್ತಿದೆ. ವಿದ್ಯಾರ್ಥಿಗಳು ಪರದೇಶದ ಸಂಸ್ಕೃತಿಗೆ ಮಾರುಹೋಗಿ ವಿಚಿತ್ರ ರೀತಿಯಲ್ಲಿ ಬದಲಾಗುತ್ತಿದ್ದಾರೆ ಗುರುವನ್ನು ಗೌರವದಿಂದ ಕಾಣುವ ದೃಷ್ಟಿ ಬದಲಾಗುತ್ತಿದೆ. ಸತತ ಪರಿಶ್ರಮದಿಂದ ಅಭ್ಯಾಸಮಾಡಿ ವಿದ್ಯೆ ಸಂಪಾದಿಸಬೇಕೆಂಬ ಮಹತ್ವಾಕಾಂಕ್ಷೆ ಹೇಳ ಹೆಸರಿಲ್ಲದಂತೆ ಪಲಾಯನ ಮಾಡಿ ಸುಲಭವಾಗಿ ಯಾವ ಪರಿಶ್ರಮವಿಲ್ಲದೆ ಪಾಸಾಗಬೇಕು ಅಥವಾ ಹೆಚ್ಚು ಕಷ್ಟಪಡದೆ ಯಾವುದೆ ರೀತಿಯಿಂದ ಡಿಗ್ರಿ ಪಡೆಯಬೇಕು. ಆ ಡಿಗ್ರಿ ಬಲದಿಂದ ನೌಕರಿ ಸಂಪಾದಿಸಬೇಕೆಂಬ ಪ್ರವೃತ್ತಿ ಬಲವಾಗಿ ಬೇರೂರಿದೆ. ವಿದ್ಯಾ ಸಂಸ್ಥೆಗಳು ಡಿಗ್ರಿ ಕೊಡಿಸುವ ಸಂಸ್ಥೆಗಳಾದರೆ, ವಿಶ್ವವಿದ್ಯಾಲಯಗಳು ಡಿಗ್ರಿ ಛಾಪಿಸುವ ಮುದ್ರಣಾಲಯಗಳಾಗಿ ಮಾರ್ಪಾಟಾಗುತ್ತಿವೆ. ಇದು ಬಹಳ ಖೇದದ ಸಂಗತಿ. ನಮ್ಮ ದೇಶದ ಹೆಸರಿಗೆ ಕಳಂಕ ತರುವಂತಹ ವಿಷಯ.

"ಆಚಾರ್ಯ ದೇವೋಭವ" ಎಂದು ಘೋಷಿಸುತ್ತ ಬಂದ ಈ ನಾಡಿನಲ್ಲಿ ಆಚಾರ್ಯರ ಕೊಲೆಯಾಗುತ್ತಿದೆ. ದುಷ್ಟಕೂಟದಲ್ಲಿ ಸಿಲುಕಿ ಬಿದ್ದಿರುವ ವಿದ್ಯಾರ್ಥಿಗಳು ತಮ್ಮ ಸುಲಭಮಾರ್ಗಕ್ಕೆ ಅಡ್ಡ ಬಂದವರನ್ನು ಕತ್ತರಿಸುತ್ತ ಬರುತ್ತಿದ್ದಾರೆ.

"ಸತತ ಅಭ್ಯಾಸಮಾಡಿ ಜ್ಞಾನ ಸಂಪಾದಿಸಿ ಪರೀಕ್ಷೆ ಪಾಸಾಗುವುದು ಹಳೆಯ ಹಾಗೂ ಹುಚ್ಚುತನದ ಮಾತಾಗಿದೆ. ಗುರುಗಳನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡು ಓದದೆ ಬರೆಯದೆ ಪಾಸಾಗುವುದು ಒಂದು ಫ್ಯಾಶನ್ ಆಗಿದೆ. ಇದಕ್ಕೆ ಕೆಲವೊಂದು ಕಡೆ ಪ್ರಾಧ್ಯಾಪಕರು ಬಲಿ ಬೀಳುತ್ತಿದ್ದಾರೆ. ಅಮಿಷಕ್ಕೆ ಬಲಿಯಾಗಿ ತಮ್ಮ ಆದರ್ಶಗಳನ್ನು ಗಾಳಿಗೆ ತೂರುತ್ತಿದ್ದಾರೆ. ಬಲಿಯಾಗದ ಪ್ರಾಮಾಣಿಕ ಗುರು ವರ್ಗವನ್ನು ಬೆದರಿಸುವ ಪ್ರಾಣಭೀತಿ ನೀಡುವ ಪ್ರಸಂಗಗಳೂ ಹಲವಾರು ಕಡೆ ನಡೆದುದರಿಂದ ಗುರುವರ್ಗ ಭೀತಿಯಿಂದ ತತ್ತರಿಸುತ್ತಿದೆ.

"ಕಾಪಿ ಅಥವಾ ನಕಲು ಮಾಡುವುದು ಒಂದು ಭಯಂಕರ ರೋಗ. ಅದಂತೂ ಈಗ ಸಾರ್ವತ್ರಿಕವಾಗಿದೆ. ಪ್ರಾಥಮಿಕ ಶಾಲೆಗಳಿಂದ ಹಿಡಿದು ವಿಶ್ವ ವಿದ್ಯಾಲಯದ ವರೆಗೂ ಈ ಸಾಂಕ್ರಾಮಿಕ ರೋಗ ವಿಸ್ತೃತವಾಗಿ ಹರಡಿದೆ. ವರ್ಷವೆಲ್ಲ ಹಾಯಾಗಿ ಕಳೆದು ಪರೀಕ್ಷೆ ಹಿಂದಿನ ದಿವಸ ರಾತ್ರಿಯೆಲ್ಲ ಜಾಗರಣೆಮಾಡಿ ಚಿಕ್ಕ ಚಿಕ್ಕ ಕಾಗದಗಳಲ್ಲಿ ಮುಖ್ಯ ಅಂಶ ಬರೆದುಕೊಂಡು ಮರುದಿನ ಪರೀಕ್ಷೆಗೆ ಬರುವುದು. ರಾತ್ರಿ ಬರೆದಿಟ್ಟ ಕಾಗದಗಳನ್ನು ನೋಡಿ ಉತ್ತರ ಬರೆಯುವುದು. ಸರ್ವೇಸಾಮಾನ್ಯವಾಗಿದೆ. ಒಂದೊಂದು ಬಾರಿ ಪುಸ್ತಕದೊಂದಿಗೇ ಒಂದು ಎಲ್ಲರೆದುರು ನಿರ್ಭಯವಾಗಿ ಪುಸ್ತಕ ನೋಡಿಕೊಂಡೇ ಬರೆಯುವುದೂ ಸಹಾ ರೂಢಿಯಾಗಿದೆ.

"ಯಾವುದೇ ರೀತಿಯ ಪರಿಶ್ರಮವಿಲ್ಲದೆ ಸುಲಭವಾಗಿ ಪಾಸಾಗಲು ಇದು ರಾಜಮಾರ್ಗ. ಕಾಪಿಮಾಡುವಾಗ ನಿರ್ಬಂಧಿಸಿದರೆ. ಹಿಡಿದರೆ ಆ ವಿದ್ಯಾರ್ಥಿಗಳು ಗುರುಗಳ ಮೇಲೆ ಕೆಂಡ ಕಾರುತ್ತಾರೆ. ಭಯಪಡಿಸುತ್ತಾರೆ. ಅವರ ಮೇಲೆ ಏರಿ ಹೋಗಿ ಹಿಂಸಿಸುತ್ತಾರೆ.. ಕೆಲವೊಂದು ಕಡೆ ಕಾಪಿ ಮಾಡುವಾಗ ಹಿಡಿದ ಪ್ರಾಧ್ಯಾಪಕರನ್ನು ಕುಪಿತ ವಿದ್ಯಾರ್ಥಿಗಳು ಚೂರಿಯಿಂದ ಇರಿದ ಘಟನೆಗಳೂ ಸಹಿತ ವರದಿಯಾಗಿವೆ. ಪಾಪ! ಆ ಪ್ರಾಧ್ಯಾಪಕರು ಅನಾಸ್ತಿಯಾಗಿ ಪ್ರಾಣ ಕಳೆದುಕೊಂಡು ತಮ್ಮ ಹೆಂಡತಿ ಮಕ್ಕಳನ್ನು ಬೀದಿಪಾಲು ಮಾಡಲು ಇಂಥ ವಿದ್ಯಾರ್ಥಿ ಸಮೂಹವೆ ಕಾರಣವಾಯಿತು."

ಒಂದು ಕ್ಷಣ ನಿಂತು ಮತ್ತೆ ಮಾತು ಮುಂದುವರಿಸಿದ ಹೇಮಂತನ ಮಾತುಗಳಿಗೆ ಪ್ರೇಕ್ಷಕರು ಎಷ್ಟು ಪ್ರಭಾವಿತರಾಗಿದ್ದರು ಅಂದರೆ ಒಂದು ದೃಷ್ಟಿಯಿಂದ ಅವರು ಉಸಿರು ತೆಗೆದುಕೊಳ್ಳಲು ಸಹ ಹಿಂದು ಮುಂದೆ ನೋಡುತ್ತಿದ್ದರು. ಜೋರಾಗಿ ಉಸಿರು ತೆಗೆದುಕೊಂಡರೆಲ್ಲಿ ವಾತಾವರಣದ ಶಾಂತತೆಗೆ ಭಂಗ ಬರುತ್ತದೆಂದು ಹೆದರಿ. ಅತಿ ಮೆಲುವಾಗಿ ಉಸಿರಾಡಿಸುತ್ತಿದ್ದರು.

"ಪ್ರಸ್ತುತ ಪ್ರಕರಣ ತಿಳಿಸುವ ಮುನ್ನ ಈ ಭೂಮಿಕೆಯನ್ನು ತಮ್ಮ ಮುಂದಿಡುವುದು ಅವಶ್ಯಕವಾಗಿತ್ತು. ಏಕೆಂದರೆ ಈ ಪ್ರಕರಣ 'ಕಾಪಿ' ಪ್ರಕರಣಕ್ಕೆ ಸಂಬಂಧಿಸಿದ್ದು. ಪ್ರೊಫೆಸರ ಸತ್ಯೇಂದ್ರ ಓರ್ವ ಪ್ರಾಮಾಣಿಕ ಹಾಗೂ ಧೈರ್ಯಶಾಲಿ ಪ್ರಾಧ್ಯಾಪಕರಾಗಿದ್ದರು. ನಕಲುಮಾಡಿ ವಿದ್ಯಾರ್ಥಿಗಳು ಪಾಸಾಗುವುದನ್ನು ಅವರು ಬಲವಾಗಿ ವಿರೋಧಿಸುತ್ತಿದ್ದರು. ಅವರ ಪ್ರಾಮಾಣಿಕತೆ ಹಾಗೂ ಧೈರ್ಯಗಳೇ ಅವರನ್ನು ಅಪಾಯದಲ್ಲಿ ನೂಕಿ ಈ ವಿಚಿತ್ರ ಅಷ್ಟೇ ಭಯಾನಕ ಪ್ರಕರಣಕ್ಕೆ ಜನ್ಮ ನೀಡಿವೆ."

ಎಲ್ಲರೂ ಸತ್ಯೇಂದ್ರನತ್ತ ಮೆಚ್ಚುಗೆಯ ದೃಷ್ಟಿ ಬೀರಿದಾಗ ಸಂಕೋಚ

ದಿಂದ ಸತ್ಯೇಂದ್ರ ಮುಖ ಕೆಳಗೆ ಹಾಕಿದರು. ಶಾಂತಿಗೆ ಅಂಥ ಪತಿಯನ್ನು ತಾನು ಪಡೆದುದಕ್ಕಾಗಿ ಹೆಮ್ಮೆ ಅನಿಸಿತು. ಅವರ ಮೇಲೆ ಅಪಾರ ಪ್ರೀತಿ ಉಕ್ಕಿ ಬಂದು ಅವರನ್ನು ಮತ್ತಷ್ಟು ತಾಕಿಕೊಂಡು ಕುಳಿತಳು. ಸತ್ಯೇಂದ್ರರ ಮೈಕಾವು ಅವಳ ಹೃದಯದಲ್ಲಿ ಸುಖಾನುಭವ ನೀಡುತ್ತಿತ್ತು. ಆಕೆ ರೋಮಾಂಚಿತಳಾಗಿದ್ದಳು.

ಹೇಮಂತನ ವಾಕ್ ಪ್ರವಾಹ ಸಾಗಿಯೇ ಇತ್ತು.

"ರಮಾಕಾಂತ ಓರ್ವ ರೌಡಿ ಸ್ವಭಾವದ ವಿದ್ಯಾರ್ಥಿ. ಧಾರವಾಡಕ್ಕೆ ಬರುವ ಮುನ್ನ ಭದ್ರಾವತಿಯಲ್ಲಿ ಸಾಕಷ್ಟು ಹಾಹಾಕಾರ ಮಾಡಿಯೇ ಬಂದವನಾಗಿದ್ದ. ಎಸ್ ಎಸ್. ಎಲ್. ಸಿ. ಯಲ್ಲಿ ನಕಲು ಮಾಡುವಾಗ ಆತ ಸಿಕ್ಕಿ ಹಾಕಿಕೊಂಡಿದ್ದ. ಪರೀಕ್ಷೆ ಹಾಲಿನಿಂದ ಹೊರಗೆ ಬರುವಾಗ ತನ್ನನ್ನು ಹಿಡಿದು ಹೊರಗೆ ಹಾಕಿದ ಶಿಕ್ಷಕನ ಮೇಲೆ ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡಿಯೇ ಬಂದ. ಅದರಂತೆ ನಡೆದೂಬಿಟ್ಟ ಪಾಪ! ಆ ಶಿಕ್ಷಕರು ಕೈ ಕಾಲು ಮುರಿದುಕೊಂಡು ಆಸ್ಪತ್ರೆ ಸೇರಬೇಕಾಯಿತು.

"ಹಾಗೂ ಹೀಗೂ ಪಾಸಾದ ರಮಾಕಾಂತ ಧಾರವಾಡಕ್ಕೆ ಬಂದಾಗ ಅವನಲ್ಲಿ ಯಾವ ಸುಧಾರಣೆಗಳೂ ಆಗಿರಲಿಲ್ಲ. ಇಲ್ಲಿಯೂ ಹಿಂದಿನ ಕಾಯಕವನ್ನೇ ಮುಂದುವರೆಸಿದ. ಸತ್ಯೇಂದ್ರ ಅವರಿಗೆ ಇದು ಸರಿಬೀಳಲಿಲ್ಲ. ಎರಡು ಮೂರು ಬಾರಿ ಎಚ್ಚರಿಸಿದರು, ಉಪಯೋಗವಾಗಲಿಲ್ಲ. ರಮಾಕಾಂತ ಪ್ರತಿಯಾಗಿ ಅವರಿಗೇ ಬೆದರಿಕೆ ಹಾಕಿದ. ವಾರ್ಷಿಕ ಪರೀಕ್ಷೆಯಲ್ಲಿ ಧರ್ಮ ಕರ್ಮ ಸಂಯೋಗದಿಂದ ಯಾವ ಹಾಲಿನಲ್ಲಿ ರಮಾಕಾಂತನಿದ್ದನೋ ಅದೇ ಹಾಲಿಗೇ ಸತ್ಯೇಂದ್ರ ನಿರೀಕ್ಷಕರಾಗಿ ಹೋದರು. ರಮಾಕಾಂತ ಯಾವ ಭಯವಿಲ್ಲದ ಕಾಪಿ ಮಾಡುತ್ತಿದ್ದ. ಸತ್ಯೇಂದ್ರ ಕಾಪಿ ಕಸಿದುಕೊಂಡು ಎಚ್ಚರಿಕೆ ನೀಡಿದಾಗ ಜೇಬಿನಲ್ಲಿದ್ದ ಚೂರಿ ಹೊರಗೆ ತೆಗೆದ ರಮಾಕಾಂತ ಅವರ ಮೇಲೆ ಆಕ್ರಮಣ ಮಾಡಿದ. ಸತ್ಯೇಂದ್ರ ಸಹ ಕಟ್ಟುಮಸ್ತಾದ ಆಳು, ಧೈರ್ಯವಂತರು. ರಮಾಕಾಂತನ ಕೈನಲ್ಲಿಯ ಚೂರಿ ಕಸಿದುಕೊಂಡು ಮುಷ್ಟಿಯಿಂದ ಅವನ ಮುಖದ ಮೇಲೆ ನಾಲ್ಕಾರು ಗುದ್ದಿದರು. ರಮಾಕಾಂತ ತಣ್ಣಗಾದ. ಗಲಾಟೆ ಕಂಡು ಹೊರಗಿದ್ದ ಪೋಲಿಸರು ಬಂದರು. ರಮಾಕಾಂತನನ್ನು ಬಂಧಿಸಲಾಯತು. ಅಷ್ಟರಲ್ಲಿ ಸತ್ಯೇಂದ್ರರ ಆವೇಶ ಇಳಿದಿತ್ತು. ಪುನಃ ರಮಾಕಾಂತನ ಮೇಲೆ ಅನುಕಂಪ ಮೂಡಿತು. ಪೋಲಿಸ್ ಕೇಸ್ ಆಗಲಿಲ್ಲ. ಅವನಿಗೆ ಆಗಬೇಕಾದ ಶಿಕ್ಷೆ ಆಗಲಿಲ್ಲ. ಆದರೆ ಮೂರು ವರ್ಷ ಡಿಬಾರ್ ಮಾತ್ರ ಮಾಡಲಾಯಿತು. ಅಪಮಾನ ಹಾಗೂ ರೋಷದಿಂದ ಕುದ್ದುಹೋದ. ಸತ್ಯೇಂದ್ರ ಜೈಲಿಗೆ ಕಳಿಸದಂತೆ, ತನ್ನ ಮೇಲೆ

ಉಪಕಾರ ಮಾಡಿದ್ದನ್ನು ಮರೆತು ಅವರ ಮೇಲೆ ಸೇಡು ತೀರಿಸಿಕೊಳ್ಳಲು ಹೊಂಚು ಹಾಕತೊಡಗಿದ. ಆಗಲೇ ಈ ಪ್ರಕರಣ ಜನ್ಮ ತಾಳಿದ್ದು.

"ಸತ್ಯೇಂದ್ರರ ಮೇಲೆ ಸೇಡು ತೀರಿಸಿಕೊಳ್ಳಲು ರಮಾಕಾಂತ ಸರ್ವ ವಿಧ ದಿಂದಲೂ ಪ್ರಯತ್ನಿಸಿ ಸೋತುಹೋದ. ಕೊನೆಗೆ ಅವನ ವೈರತ್ವಕ್ಕಿಂತ ಗೆಳೆ ತನದಿಂದಲೇ ಸೇಡುತೀರಿಸಿಕೊಳ್ಳಬಹುದೆಂದು ಯೋಚಿಸಿ ಒಂದು ದಿನ ಪ್ರೊಫೆ ಸರ್‌ರಿಗೆ ಶರಣಾದ. ಅವರ ಕಾಲು ಬಿದ್ದು ಕ್ಷಮೆ ಕೇಳಿದ. ಸತ್ಯೇಂದ್ರರ ಹೃದಯ ಮೃದುವಾದುದು. ಅದರಲ್ಲಿಯೂ ತಮ್ಮ ವಿದ್ಯಾರ್ಥಿಗಳೆಂದರೆ ಮುಗಿದೇ ಹೋಯಿತು. ರಮಾಕಾಂತ ಕಾಲಿಗೆ ಬೀಳುತ್ತಲೂ ಅವನು ಮಾಡಿದ ತಪ್ಪನ್ನೆಲ್ಲಾ ಮರೆತು ಕ್ಷಮಿಸಿಬಿಟ್ಟರು. ಮತ್ತೆ ಸತ್ಯೇಂದ್ರ ರಮಾಕಾಂತ ಒಂದಾದರು.

''ಬರಬರುತ್ತ ಸತ್ಯೇಂದ್ರ ರಮಾಕಾಂತನನ್ನು ತನ್ನ ದೇವರೆಂದು ಅನ್ನುವ ಮಟ್ಟಿಗೆ ಅವರನ್ನು ವಂದಿಸಿದ.

''ಅದೇ ವೇಳೆಗೆ ಒಂದುದಿನ ಮೈಸೂರಿಗೆ ಹೋದಾಗ ರಮಾಕಾಂತನಿಗೆ ಅವನ ಗೆಳೆಯ ರಶೀದನ ಮರು ಭೇಟಿಯಾಯಿತು. ಹೈಸ್ಕೂಲಿನಲ್ಲಿ ಒಟ್ಟಿಗೆ ಓದುತ್ತಿದ್ದ ಅವರು ನಂತರ ಬೇರೆ ಬೇರೆಯಾದರು. ರಶೀದನ ಸೋದರ ಮಾವ ತುಮಕೂರಿನಲ್ಲಿ ಸ್ಟುಡಿಯೋ ಇಟ್ಟಿದ್ದ. ರಶೀದ ಬಲವಂತದಿಂದ ರಮಾಕಾಂತನನ್ನು ಊರಿಗೆ ಕರೆದುಕೊಂಡು ಹೋದ. ಎರಡು ಮೂರು ದಿವಸ ಅಲ್ಲಿದ್ದ. ರಮಾಕಾಂತ ಒಂದು ದಿನ ಸ್ಟುಡಿಯೋಕ್ಕೆ ಹೋದಾಗ ಅಲ್ಲಿಯ ಶೋಕೇಸಿನಲ್ಲಿಯ ನಾಲ್ಕಾರು ಫೋಟೋ ನೋಡಿ ಬೆಚ್ಚಿಬಿದ್ದ.

"ಮಿಸೆಸ್ ಶಾಂತಿ ಹಾಗೂ ಸುಧಾಕರ ಅವರು ಶೃಂಗಾರಚೇಷ್ಟೆ ಮಾಡು ತ್ತಿದ್ದ ಫೋಟೋಗಳು."

"ಅಂದರೆ ಅವರು ಮದುವೆಗೆ ಮುನ್ನ ಒಬ್ಬರನ್ನೊಬ್ಬರು ಪ್ರೀತಿಸಿದ್ದರೆ?" ಎದುರಿಗೆ ಕುಳಿತ್ತಿದ್ದ ವಕೀಲ ರಾಮರಾಯರು ಕೇಳಿದರು. ಅವರು ಆ ರೀತಿ ಕೇಳುತ್ತಲೂ ಶಾಂತಿ ಮುಖ ಕೆಳಗೆ ಹಾಕಿದಳು. ಸುಧಾಕರನ ಕೈ ಮುಷ್ಟಿ ಯಾಯಿತು. ಸತ್ಯೇಂದ್ರ ಮಾತ್ರ ಮುಗುಳುನಗೆ ನಗುತ್ತಿದ್ದ.

ಹೇಮಂತ ಮಾತು ಮುಂದುವರೆಸಿದ. "ಇಲ್ಲ...ಹಾಗೇನೂ ಇರಲಿಲ್ಲ. ಆದರೆ ಆ ಫೋಟೋ ನೋಡಿದವರಿಗೆಲ್ಲ ಆ ಅರ್ಥ ಸರಳವಾಗಿ ಬರುತ್ತಿತ್ತು. ನಿಜ ಹೇಳಬೇಕೆಂದರೆ ಸುಧಾಕರ ಹಾಗೂ ಶಾಂತಿ ಕಾಲೇಜಿನ ಸಹಪಾಠಿಗಳು. ಅವರು ಕಾಲೇಜಲ್ಲಿ ಓದುತ್ತಿದ್ದಾಗ "ಬೆಡ್‌ರೂಮು" ಎಂಬ ನಾಟಕ ಮಾಡಿ ದ್ದರು. ಅದರಲ್ಲಿಯ ಫೋಟೋಗಳು ಅವು. ಅವುಗಳನ್ನು ನೋಡುತ್ತಲೇ

ರಮಾಕಾಂತನ ರಾಕ್ಷಸ ತಲೆ ಕೆಲಸ ಮಾಡಿತು, ಆ ಫೋಟೋಗಳ ನೆಗೆಟಿವ್ ಇಸಿದುಕೊಂಡ. ಐದಾರು ಕಾಪಿ ಫೋಟೋ ತೆಗೆಸಿಕೊಂಡು ಮರಳಿ ಊರಿಗೆ ಬಂದ.

"ಅದಾದ ಎರಡು ದಿನಕ್ಕೆ ಒಂದು ಫೋಟೋವನ್ನು ಪ್ರೊಫೆಸರರಿಗೆ ಪೋಸ್ಟ್ ಮೂಲಕ ಕಳಿಸಿ ಐದು ಸಾವಿರ ರೂಪಾಯಿ ಬೇಡಿದ. ಕೊಡದಿದ್ದ ಪಕ್ಷದಲ್ಲಿ ಆ ಫೋಟೋಗಳನ್ನು ಬಹಿರಂಗ ಪಡಿಸುತ್ತೇನೆ ಎಂದು ಬೆದರಿಕೆ ಹಾಕಿದ. ಸತ್ಯೇಂದ್ರ ಶಾಂತಿಯನ್ನು ಬಹಳ ಪ್ರೀತಿಸುತ್ತಿದ್ದರು. ಅವಳ ಮರ್ಯಾದೆ ಬೀದಿಪಾಲಾಗುವುದನ್ನು ತಪ್ಪಿಸಲು ಹಣ ನೀಡಿದರು.

"ಈ ರೀತಿ ಬ್ಲಾಕ್‌ಮೇಲ್ ಜಾಲ ಪ್ರಾರಂಭವಾಯಿತು. ಒಂದು ಬಾರಿ ಬ್ಲಾಕ್‌ಮೇಲರನಿಗೆ ಹಣ ಕೊಟ್ಟರೆ ಮುಗಿದೇ ಹೋಯಿತು ಜೀವಹೋದರೂ ಅದರಿಂದ ಬಿಡುಗಡೆಯಿಲ್ಲ. ತಿಂಗಳಿಗೊಂದು ಫೋಟೋ ಬರುತ್ತಿದ್ದವು. ಪ್ರೊಫೆಸರ್ ಐದು ಸಾವಿರ ಕೊಡುತ್ತಿದ್ದರು. ಇಷ್ಟಾದರೂ ಅವರಿಗೆ ರಮಾಕಾಂತನ ಮೇಲೆ ಸಂಶಯ ಬರಲಿಲ್ಲ. ರಮಾಕಾಂತ ಓರ್ವ ಆದರ್ಶ ವಿದ್ಯಾರ್ಥಿಯಾಗಿ ಅವರ ಸೇವೆ ಮಾಡುತ್ತ ಹಿಂದಿನಿಂದ ಅವರನ್ನು ಸುಲಿಯತೊಡಗಿದ.

"ಆರು ತಿಂಗಳು ಕಳೆಯುವಷ್ಟರಲ್ಲಿ ಪ್ರೊಫೆಸರ್ ಕಂಗಾಲಾದರು. ಅವರ ಬಳಿಯಲ್ಲಿದ್ದ ಹಣ ಮುಗಿದುಹೋಯಿತು. ಅವರು ಇಬ್ಬಗೆಯಲ್ಲಿ ಸಿಕ್ಕು ನರಳುತ್ತಿದ್ದರು. ಒಂದೆಡೆ ಹೆಂಡತಿಯ ಶೀಲದ ಬಗ್ಗೆ ಶಂಕೆ ಮತ್ತೊಂದೆಡೆ ಬ್ಲ್ಯಾಕ್‌ಮೇಲರನ ಒತ್ತಾಯ. ಅವರಿಗೆ ಹುಚ್ಚು ಹಿಡಿಯುವದೊಂದ ಬಾಕಿ ಉಳಿದಿತ್ತು. ಕೊನೆಗೆ ರಮಾಕಾಂತ ತನಗಿನ್ನು ಹಣ ದೊರೆಯಲಾರದೆಂದು ಮನಗಂಡು ಮತ್ತೊಂದು ನಾಟಕಕ್ಕೆ ಪ್ರೊಫೆಸರ್‌ರನ್ನು ಸಿದ್ಧಪಡಿಸಿದ.

"ಅದೇ ಪ್ರೊಫೆಸರರು ಶಾಂತಿಯನ್ನು ಕೊಲ್ಲುವ ನಾಟಕ. ಸುಧಾಕರ ಡಾಕ್ಟರನಾಗಿ ಧಾರವಾಡಕ್ಕೆ ಬಂದದ್ದು ಅವನಿಗೆ ತಿಳಿದಿತ್ತು. ಕ್ಯಾಪ್ಟನ್ ಆನಂದನ ವಿಮಾ ವಿಷಯ ಸಹ ಗೊತ್ತಿತ್ತು. ಅದಕ್ಕೆಂದೇ ಆತ ಈ ನಾಟಕ ಮಾಡಿದ. ಪ್ರೊಫೆಸರರ ಕೈಯಿಂದ ಕೊಲೆ ಮಾಡಿಸಿ ಅವರನ್ನು ಜೈಲಿಗೆ ಕಳಿಸುವದು ಅವನ ಉದ್ದೇಶವಾಗಿತ್ತು. ಅವರಿಂದ ಆತ ಒಂದು ಕಾಗದವನ್ನು ಸಹ ಬರೆಸಿಕೊಂಡಿದ್ದ. ಪ್ರೊಫೆಸರರು ಸ್ವಇಚ್ಛೆಯಿಂದ ತಮ್ಮ ಸಂಪತ್ತನ್ನೆಲ್ಲ ರಮಾಕಾಂತನಿಗೆ ಧಾರೆಯೆರೆದಿದ್ದರು.

"ಆದರೆ ಇದರ ಸುಳಿವು ನನಗೆ ಸ್ವಲ್ಪ ತಡವಾಗಿ ತಿಳಿಯಿತು. ಪ್ರೊಫೆಸರ್ ನಿರ್ದೋಷಿಗಳೆಂದು ಸಾಧಿಸಿದೆ. ಮೊದಮೊದಲು ನನಗೆ ರಮಾಕಾಂತನ ಮೇಲೆ ಸಂಶಯ ಬರಲಿಲ್ಲ. ಒಂದು ರಾತ್ರಿ ನಾನು ಕಳ್ಳನಂತೆ ಪ್ರೊಫೆಸರರ ಮನೆ ಪ್ರವೇ

ಶಿಸಿದೆ. ಅಲ್ಲಿ ನನಗೆ ಫೋಟೋಗಳು ರಮಾಕಾಂತ ಗುಪ್ತ ಹೆಸರಿನಿಂದ ಬರೆದ ಪತ್ರಗಳು, ಮುಂದಿನ ಪ್ಲಾನ್ ಎಲ್ಲಾ ಸಿಕ್ಕಿತು. ಆದರಿಂದ ನನಗೆ ಕೇಸಿನ ಬಗ್ಗೆ ಸ್ವಲ್ಪ ವಿವರ ತಿಳಿಯಿತು. ಕ್ಯಾಪ್ಟನ್ ಆನಂದ ಬಂದ ರಾತ್ರಿ ಅವರ ಹಾಲಿಗೆ ನಿದ್ದೆ ಮಾತ್ರೆ ಸೇರಿಸಿದವನೂ ರಮಾಕಾಂತನೇ. ಶಾಂತಿ ಹೇಳಿದಂತೆ ಹಾಲು ಕೊಡಲು ಪ್ರೊಫೆಸರರೇ ಹೋಗಿದ್ದರು. ಅವರು ಆನಂದ ಅವರಿಗೆ ತಮ್ಮ ಮುಡುಕಿಗಾಗಿ ಕ್ಷಮೆ ಕೇಳಿದರು. ಆನಂದ ಅವರು ಕ್ಷಮಿಸುತ್ತಿರಲು ಸಂತೋಷದ ಭರದಲ್ಲಿ ಅವರು ತಮ್ಮ ಡೈರಿ ಚಪ್ಪಲಿ ಅಲ್ಲೇ ಬಿಟ್ಟು ತಮ್ಮ ರೂಮಿಗೆ ಬಂದರು. ಅಷ್ಟರಲ್ಲಿ ರಮಾಕಾಂತ ಅವರ ಹಾಲಿನ ಬಟ್ಟಲದಲ್ಲಿ ನಿದ್ದೆ ಮಾತ್ರೆ ಸೇರಿಸಿ ಬಂದಿದ್ದ. ಕ್ಯಾಪ್ಟನ್ ಆನಂದ ಬಾತ್‌ರೂಮಿಗೆ ಹೋದಾಗ ರಮಾಕಾಂತ ಟೇಬಲ್ ಮೇಲಿದ್ದ ಹಾಲಿನ ಗ್ಲಾಸಿಗೆ ಹತ್ತಾರು ಮಾತ್ರೆ ಸೇರಿಸಿ, ಕಿಟಕಿ ಮೂಲಕ ಪರಾರಿಯಾದ. ಹೀಗಾಗಿ ಕ್ಯಾಪ್ಟನ್ ಆನಂದ ಸಾವಿಗೀಡಾದರು. ಮುಂದೆ ತನ್ನ ಮೇಲೆ ಸಂಶಯ ಬರಬಾರದೆಂದು ತಾನು ತಂದ ಮದ್ಯದ ಸೀಸೆಗೆ ತಾನೇ ವಿಷ ಬೆರೆಸಿ, ಸೇವಿಸಿದ. ಒಂದು ದೃಷ್ಟಿಯಿಂದ ಸಾವು ರಮಾಕಾಂತನನ್ನು ಹೊಗಳಬೇಕು. ತನ್ನನ್ನು ಅಶೋಕ ಹಿಂಬಾಲಿಸಿಕೊಂಡು ಬರುತ್ತಿರುವ ವಿಷಯ ಅವನಿಗೆ ತಿಳಿದಿತ್ತು. ಅದಕ್ಕಾಗಿ ಆತ ತನ್ನ ಜೀವದ ಬಗ್ಗೆ ರಿಸ್ಕ್ ತೆಗೆದುಕೊಂಡ ಮದ್ಯಕ್ಕೆ ವಿಷ ಬೆರೆಸಿ ಸೇವಿಸಿದ. ಅವನು ಯೋಚಿಸಿದಂತೆ ಅಶೋಕ ಅವನನ್ನು ಬದುಕಿಸಿದ. ಒಂದು ವೇಳೆ ಅಶೋಕ ಬದುಕಿಸದಿದ್ದರೆ ರಮಾಕಾಂತ ಸಾಯುತ್ತಿದ್ದ. ಪ್ರೊಫೆಸರ್ ಗಲ್ಲಿಗೇರುತ್ತಿದ್ದರು."

ಶಾಂತಿಯ ಮೈ ಜುಂ ಎಂದಿತು. ಅವಳು ಮೆಲುವಾಗಿ ತನ್ನ ಪಕ್ಕಕ್ಕೆ ಕುಳಿತಿದ್ದ ಸತ್ಯೇಂದ್ರನ ಮೈಗೆ ಮೈ ತಾಕಿಸಿದಳು. ಸತ್ಯೇಂದ್ರ ಅವಳನ್ನು ತನ್ನ ಕಡೆ ಒತ್ತಿಕೊಂಡ.

ಹೇಮಂತ ಮುಂದುವರಿಸಿದ. "ಕೊನೆಯ ಆಟಕ್ಕೆ ರಮಾಕಾಂತ ಸಿದ್ಧನಾದ. ಅಂದು ಆತ ಎರಡು ಲಕೋಟೆಗಳನ್ನು ಅಂಚೆಗೆ ಹಾಕಿದ ವಿಷಯ ನನಗೆ ತಿಳಿಯಿತು. ಹಾಗಾದರೆ ಮರುದಿನ ಕೊನೆಯ ಆಟ ಎಂದುಕೊಂಡೆ. ಅದರಂತೆಯೇ ಆಯಿತು. ಪೂರ್ವ ಯೋಜನೆಯಂತೆ ಪ್ರೊಫೆಸರ್ ಕೊಲ್ಲಾಪುರಕ್ಕೆ ಹೊರಟುನಿಂತರು. ನಾನು ಮನೆಗೆ ಕಾವಲಾಗಿ ನಿಂತೆ. ರಾತ್ರಿ ಎಂಟು ಗಂಟೆಯ ಸಮಯಕ್ಕೆ ರಮಾಕಾಂತ ಟೇಪ್ ರಿಕಾರ್ಡರ್‌ನೊಂದಿಗೆ ಕಳ್ಳನಂತೆ ಮನೆ ಪ್ರವೇಶಿಸಿ ಅವಿತು ಕೂತ. ರಾತ್ರಿ ಹನ್ನೆರಡಕ್ಕೆ ಸುಧಾಕರ ಬಂದ...ಅವರ ಮಾತುಗಳು ಕೆಳಗೆ ಟೇಪ್ ಆಗುತ್ತಿತ್ತು. ಮುಂದೆ ಪ್ರೊಫೆಸರ್ ನಾಟಕೀಯವಾಗಿ ಪ್ರವೇಶಿಸಿದರು. ಅವರು ಆ ರೀತಿಮಾಡದಿದ್ದರೆ ಅವರ ಸಂಸಾರ ಹಾಳು

ಮಾಡುವುದಾಗಿ ಬೆದರಿಸಲಾಗಿತ್ತು. ಎರಡನೆಯದಾಗಿ ಪ್ರೊಫೆಸರರಿಗೆ ಈ ಜೀವನ ಸಾಕಾಗಿತ್ತು. ಹೆಂಡತಿ ಕುಲಟೆ, ಆಕೆಯೊಂದಿಗೆ ಸಂಸಾರ ಸಾಗಿಸಲು ಮನಸ್ಸಿರಲಿಲ್ಲ. ಆದರೆ ಅವಳ ಹೆಸರು ಬೀದಿಗೆ ಬರುವುದು ಅವರಿಗೆ ಬೇಕಾಗಿರಲಿಲ್ಲ. ಅದಕ್ಕೆಂದೇ ಮರ್ಯಾದೆಯಿಂದ ಅವಳನ್ನು ಕೊಂದು ತಾವು ಸೆರೆಮನೆ ಸೇರಲು ಅವರು ನಿರ್ಧರಿಸಿದ್ದರು. ಆದರೆ ರಮಾಕಾಂತನ ದೈವ ಅವನಿಗೆ ಕೈ ಕೊಟ್ಟಿತು. ನಾನು ಬೀಸಿದ ಬಲೆಗೆ ಅವನು ಸಿಲುಕಿದ. ಪತ್ನಿಯನ್ನು ಗಾಢವಾಗಿ ಪ್ರೀತಿಸುತ್ತಿದ್ದ ಪ್ರೊಫೆಸರರ ತ್ಯಾಗದ ಫಲ ದೊರೆಯಿತು.

''ಇನ್ಸ್‌ಪೆಕ್ಟರ್ ಚಂದ್ರನಾಥರ ಸಹಾಯ ನನಗೆ ದೊರೆಯದಿದ್ದರೆ, ನನ್ನ ಜೊತೆ ಸುಷ್ಮಾ ಹಾಗೂ ಅಶೋಕ ಸಹಕರಿಸದಿದ್ದರೆ ಬಹುಷಃ ನಾನು ಈ ಕೇಸು ಗೆಲ್ಲುತ್ತಿರಲಿಲ್ಲ. ಅದಕ್ಕಾಗಿ ಅವರಿಗೆ ನಾನು ವಂದಿಸುತ್ತೇನೆ.''

ಕರ್ಣಪಟಲ ಹರಿದುಹೋಗುವಂತೆ ಚಪ್ಪಾಳೆ ಸದ್ದು. ಸುಷ್ಮಾಳ ಹೃದಯ ಹೆಮ್ಮೆಯಿಂದ ಬಿರಿದುಹೋಯಿತು.

ಸತ್ಯೇಂದ್ರ ಹಾಗೂ ಶಾಂತಿ ಎದ್ದು ಬಂದರು. ಹೇಮಂತನಿಗೆ ಕೃತಜ್ಞತೆ ಸಲ್ಲಿಸಿದರು. ಸಾರ್ವಜನಿಕರೆದುರಿಗೇ ಶಾಂತಿ ಹೇಮಂತನಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ಚೆಕ್ ನೀಡಿ ಆತನನ್ನು ಗೌರವಿಸಿದಳು.

ಮಂದೆ...ಶಾಂತಿ ಹಾಗೂ ಸತ್ಯೇಂದ್ರ ಒಬ್ಬರನ್ನೊಬ್ಬರು ತಬ್ಬಿಕೊಂಡು ಬೆಡ್‌ರೂಮ್ ಸೇರಿದರು...ಹೇಮಂತ ಸಂತಸದ ನಗೆ ನಕ್ಕು ಸುಷ್ಮಾಳತ್ತ ನೋಡಿದ.